ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 19 ಭಾನುವಾರ 2026

ಸಂಪುಟ: 47 | ಸಂಚಿಕೆ: 4 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4


ಕರ್ನಾಟಕದಲ್ಲೇ ಮೊಟ್ಟ ಮೊದಲ ಬಾರಿಗೆ
ಭಾರತರತ್ನ ಸಂವಿಧಾನ ಶಿಲ್ಪಿ ಡಾ!! ಬಿ.ಆರ್. ಅಂಬೇಡ್ಕರ್ ಅವರ
135ನೇ ಜಯಂತಿಯ ಪ್ರಯುಕ್ತ ಡಾ!! ಬಿ.ಆರ್ ಅಂಬೇಡ್ಕರ್ ರವರ ಪ್ರತಿಮೆಗೆ
ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡುವ ಮೂಲಕ ಯಶಸ್ಸಿಯಾಗಿಸಿ
ಇತಿಹಾಸ ನಿರ್ಮಿಸಿದ ಮೈಸೂರಿನ ಆಶೋಕಪುರಂನ ಎಲ್ಲಾ ಮುಖಂಡರು,
ನಿವಾಸಿಗಳು ಹಾಗೂ ಅಶೋಕ ಯೂತ್ ಅಸೋಸಿಯೇಷನ್
ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು.
ಶುಭಕೋರುವವರು
ಚಿಕ್ಕಣ್ಣ
ಅಧ್ಯಕ್ಷರು, ಗೋಲ್ಡನ್ ಸಿಟಿ ಗೃಹ ನಿರ್ಮಾಣ
ಸಹಕಾರ ಸಂಘ ನಿಯಮಿತ ಮೈಸೂರು, ಮತ್ತು ಸ್ನೇಹಿತರು
ಶಿವು ಪ್ರಿಂಟರ್ಸ್ SHIVU PRINTERS
9060363617

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 19 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 4 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾವಿರ ಕೋಟಿ ಮೌಲ್ಯದ ಆಸ್ತಿ ರಕ್ಷಣೆಗೆ ಸರ್ಕಾರ

ಎಂಡಿಎ ಮೀನಾಮೇಷ!

- ಆದೇಶ ಹೊರ ಬಿದ್ದು 15 ತಿಂಗಳಾದರೂ ಆಸ್ತಿ ವಶಕ್ಕೆ ಪಡೆಯುವಲ್ಲಿ ನಾನಾ ಲೆಕ್ಕಾಚಾರ!
- ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಪತ್ರ


ಮೈಸೂರಿನ ರಾಮಕೃಷ್ಣನಗರದ ಇದೇ ರಾಮಕೃಷ್ಣ ಪರಮಹಂಸ ವೃತ್ತಕ್ಕೆ ಹೊಂದಿಕೊಂಡಂತೆ ಇರುವ 27.34 ಎಕರೆ ಭೂಮಿಯ ಬಗ್ಗೆ ಎಂಡಿಎ ಮೀನಾಮೇಷ ಎಣಿಸುತ್ತಿದೆ

ಮೈಸೂರು, ಏ.18– ಸರ್ಕಾರದ ಆದೇಶಕ್ಕೆ ಕಿಮ್ಮತ್ತಿಲ್ಲ ಎಂಬುದು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ವಿಷಯದಲ್ಲಿ ಮತ್ತೊಮ್ಮೆ ಸಾಬೀತಾಗಿದೆ.

ಸರ್ಕಾರವು ತೆಗೆದುಕೊಂಡ ನಿರ್ಣಯಕ್ಕೆ ಎಂಡಿಎ ಕವಡೆ ಕಾಸಿನ ಬೆಲೆ ನೀಡಿಲ್ಲ. ಸಾವಿರಾರು ಕೋಟಿ ಮೌಲ್ಯದ ಆಸ್ತಿ ಸಂಬಂಧ ಸರ್ಕಾರ ಮುಡಾ ಪ್ರಕ್ರಿಯೆಗಳ ರದ್ದುಪಡಿಸಿ, ವಶಕ್ಕೆ ಪಡೆಯುವಂತೆ ವರ್ಷದ ಹಿಂದೆಯೇ ಆದೇಶಿಸಿದ್ದರು, ಎಂಡಿಎ ಅದನ್ನು ಪಾಲಿಸದೇ ಇರುವುದು ಅದರ ವೈಫಲ್ಯವೋ ಇಲ್ಲ ಸರ್ಕಾರದ 'ಅನ್ಯ ಲೆಕ್ಕಾಚಾರ'ದ ಚಿಂತನೆಯೋ ಎಂಬ ಅನುಮಾನ ಈಗ ಕಾಡಲಾರಂಭಿಸಿದೆ.

ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ, ದಟ್ಟಗಳ್ಳಿ ಗ್ರಾಮದ (ರಾಮಕೃಷ್ಣ ಪರಮಹಂಸ ವೃತ್ತದ ಬಳಿಯ ಖಾಲಿ ಜಾಗ) ಸರ್ವೆ ನಂಬರ್ 15, 27, 32, 38, 40 ಹಾಗೂ 41ರ ವ್ಯಾಪ್ತಿಯ ಸುಮಾರು ಸಾವಿರ ಕೋಟಿ ಬೆಲೆ ಬಾಳುವ 27.34 ಎಕರೆ ಭೂಮಿಯನ್ನು ಮರುಸ್ವಾಧೀನ ಪಡಿಸಿಕೊಳ್ಳುವಲ್ಲಿ ಎಂಡಿಎ ನಿರ್ಲಕ್ಷ್ಯ ತೋರುತ್ತಿರುವ



ಬಗ್ಗೆ ವಿಷಾಧ ವ್ಯಕ್ತಪಡಿಸಿ, ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಇತ್ತೀಚೆಗೆ ಬರೆದಿರುವ ಪತ್ರವು, ಎಂಡಿಎ ಹಾಗೂ ಸರ್ಕಾರದ ನಡೆಯ ಬಗ್ಗೆ ಹತ್ತು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ. ಹೈಕೋರ್ಟ್‌ಗೆ ಕೆವಿಯಟ್ ಅರ್ಜಿ ಸಲ್ಲಿಸಿ, ಸಂರಕ್ಷಣೆ ದೃಷ್ಟಿಯಿಂದ ಸದರಿ ಸ್ವತ್ತಿನ ಸುತ್ತ ತಂತಿಬೇಲಿ ಅಳವಡಿಸುವಂತೆ ಈ ಹಿಂದಿನ ಪತ್ರದಲ್ಲಿ ಆಗ್ರಹಿಸಿದ್ದ ಶಾಸಕರು, ಇದೀಗ ಎಷ್ಟೇ ಒತ್ತಾಯಿಸಿದರೂ ಸಾರ್ವಜನಿಕ ಆಸ್ತಿ ರಕ್ಷಣೆ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದ ಎಂಡಿಎ ಆಡಳಿತಕ್ಕೆ ಕೈ ಕನ್ನಡಿ ಹಿಡಿದಿದ್ದಾರೆ. ಆಡಳಿತಾತ್ಮಕ ವಂಚನೆಗೆ ಸಂಬಂಧಿಸಿದ ಸ್ಪಷ್ಟ ಸಾಕ್ಷ್ಯಗಳ ಜೊತೆಗೆ ರಾಜ್ಯ ಸರ್ಕಾರದ ಆದೇಶವಿದ್ದರೂ ಸದರಿ ಸರ್ವೆ ನಂಬರ್ ವ್ಯಾಪ್ತಿಯಲ್ಲಿರುವ ಅತ್ಯಮೂಲ್ಯ ಭೂಮಿಯನ್ನು ಮರುಸ್ವಾಧೀನಪಡಿಸಿಕೊಳ್ಳುವಲ್ಲಿ ನಿರ್ಲಕ್ಷ್ಯ ತಳೆದಿರುವುದು ಏಕೆಂದು ಪ್ರಶ್ನಿಸಿದ್ದಾರೆ.

ಕ್ರಯಪತ್ರ ನೀಡಿದ್ದು ನಿಯಮಬಾಹಿರ: ಚಾಮುಂಡೇಶ್ವರಿನಗರ ಸರ್ವೋದಯ ಸಂಘಕ್ಕೆ ಸಂಬಂಧಿಸಿದ ದಾಖಲೆ ಆಧಾರದಲ್ಲಿ 2023–24ರಲ್ಲಿ ನೀಡಲಾದ 48 ಕ್ರಯಪತ್ರಗಳು ಕಾನೂನು ಬದ್ಧವಾಗಿಲ್ಲ. ಅವು ಅನುಮೋದಿಸದ ಬಡಾವಣೆಗಳಲ್ಲಿ ನಿರ್ಮಿಸಲ್ಪಟ್ಟಿವೆ. ನೋಂದಾಯಿತ ಕ್ರಯಪತ್ರಗಳಲ್ಲಿ ನೈಜ ಚೆಕ್ಕುಬಂಧಿಗಳೇ ನಮೂದಾಗಿಲ್ಲ. ಎಲ್ಲವೂ ಕಾಲ್ಪನಿಕವಾಗಿರುತ್ತವೆ. ಸದರಿ ಸರ್ವೆ ನಂಬರ್‌ಗಳಿಗೆ ಯಾವುದೇ ನಿರ್ದಿಷ್ಟ ಅನುಮೋದಿತ ವಿನ್ಯಾಸ ಯೋಜನೆಯೂ ಇರುವುದಿಲ್ಲ. ಇದಕ್ಕೆ ಮುಡಾ(ಈಗಿನ ಎಂಡಿಎ) ಅಥವಾ ರಾಜ್ಯ ಸರ್ಕಾರದ ಅನುಮೋದನೆಯನ್ನೂ ಪಡೆದಿಲ್ಲ ಎಂಬುದನ್ನು ಬಯಲಾಗಿಸಿದ್ದಾರೆ.

ಇದು ಮತ್ತೊಂದು ಹಗರಣ: ಇಷ್ಟೆಲ್ಲಾ ವೈಫಲ್ಯಗಳ ನಡುವೆಯೂ ನಿವೇಶನ ಅಕ್ರಮ ಮಂಜೂರಾತಿ ಪ್ರಕರಣದಲ್ಲಿ ಅಮಾನತುಗೊಂಡು, ಸದ್ಯ ಜೈಲಿನಲ್ಲಿರುವ ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್, ಯಾವ


▶ 10ನೇ ಪುಟಕ್ಕೆ

ಸರ್ಕಾರದ ನಿರ್ದೇಶನಕ್ಕೆ ಕಾಯುತ್ತಿದ್ದೇವೆ!



ದಟ್ಟಗಳ್ಳಿಯ ಚಾಮುಂಡೇಶ್ವರಿನಗರ ಸರ್ವೋದಯ ಸಂಘದ ಬಡಾವಣೆ ಸಂಬಂಧಿತ ಮುಡಾ ನಿರ್ಣಯವನ್ನು ಸರ್ಕಾರ ರದ್ದು ಪಡಿಸಿದ ನಂತರ ಕೆಲವರು ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. 46 ನಿವೇಶನದಾರರಿಗೆ ಕ್ರಯಪತ್ರ ನೀಡಿರುವುದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ಎಲ್ಲರಿಗೂ ಒಂದೇ ನಿಯಮ ಅನ್ವಯವಾಗಬೇಕು. ಎಲ್ಲರಿಗೂ ಕ್ರಯಪತ್ರ ನೀಡಿ, ಇಲ್ಲವೇ ಎಲ್ಲವನ್ನೂ ರದ್ದು ಮಾಡಿ ಎಂದು ಹೈಕೋರ್ಟ್ ಆದೇಶಿಸಿತು. ಇದನ್ನು ಸುಪ್ರೀಂಕೋರ್ಟ್ ಎತ್ತಿಹಿಡಿಯಿತು. ಈ ಹಿನ್ನೆಲೆಯಲ್ಲಿ ಮೂರು ತಿಂಗಳ ಹಿಂದೆಯೇ ನಿರ್ದೇಶನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಪ್ರಾಧಿಕಾರದ ನಿರ್ಣಯ ರದ್ದಾಗಿದೆ. ಆದರೆ ಕ್ರಯಪತ್ರ ರದ್ದುಪಡಿಸುವ ಸಂಬಂಧ ನಿರ್ದೇಶನ ನೀಡುವಂತೆ ಕೋರಲಾಗಿದೆ. 20 ದಿನಗಳ ಹಿಂದೆಯೂ ಮತ್ತೆ ಮನವಿ ಮಾಡಲಾಗಿದೆ. ಸಿವಿಲ್ ನ್ಯಾಯಾಲಯದ ಮೂಲಕ ಕ್ರಯಪತ್ರ ರದ್ದುಪಡಿಸಬೇಕು. ಹಾಗಾಗಿ ಡ್ರಾಫ್ಟ್ ಸಿದ್ಧಪಡಿಸಿಕೊಂಡಿದ್ದು, ಸರ್ಕಾರದ ನಿರ್ದೇಶನ ಬಂದ ಕೂಡಲೇ ಮುಂದಿನ ಕ್ರಮ ವಹಿಸಲಾಗುವುದು.

– **ಕೆ.ಆರ್.ರಕ್ಷಿತ್,** ಆಯುಕ್ತರು ಮೈಸೂರು ಅಭಿವೃದ್ಧಿ ಪ್ರಾಧಿಕಾರ



“ ಸಾರ್ವಜನಿಕ ಆಸ್ತಿ ರಕ್ಷಣೆಯು ಅತ್ಯಂತ ಮಹತ್ವದ್ದಾಗಿದೆ. ಈ ವಿಚಾರವಾಗಿ ಹಿಂದಿನ ಮುಡಾ ಮೂಕ ಪ್ರೇಕ್ಷಕನಾಗಿತ್ತು. ಎಂಡಿಎ ಆಯುಕ್ತರಾದರೂ ಸದರಿ ಪ್ರಕರಣದ 48 ಕ್ರಯಪತ್ರಗಳ ರದ್ದತಿಗೆ ಕೋರಿ ಶೀಘ್ರ ಸಿವಿಲ್ ಮೊಕದ್ದಮೆ ಹೂಡಬೇಕಾಗಿ ಕ್ಷೇತ್ರದ ಶಾಸಕನಾಗಿ ಆಗ್ರಹಿಸುತ್ತೇನೆ. ಈಗಲೂ ನಿರ್ಲಕ್ಷಿಸಿದರೆ ಅಕ್ರಮ ಫಲಾನುಭವಿಗಳನ್ನು ರಕ್ಷಿಸಲು ಉದ್ದೇಶ ಪೂರ್ವಕವಾಗಿ ಈ ರೀತಿಯ ಧೋರಣೆ ತಾಳಲಾಗುತ್ತಿದೆ ಎಂದು ಭಾವಿಸಬೇಕಾಗುತ್ತದೆ.

– **ಟಿ.ಎಸ್.ಶ್ರೀವತ್ಸ,** ಶಾಸಕರು

ನಕ್ಕರೆ ಅದೇ ಸ್ವರ್ಗ

ಹೆಂಡತಿ: ರೀ, ಈ ಗೂಗಲ್ ಇದೆಯಲ್ಲಾ ಅದು ಗಂಡಸಾ ಅಥವಾ ಹೆಂಡತೀನಾ.?
ಗಂಡ: ಖಂಡಿತ, ಅದು ಹೆಂಡತಿನೇ ಇರಬೇಕು.
ಹೆಂಡತಿ: ಅದು ಹೇಗೆ ಅಷ್ಟು ನಿಖರವಾಗಿ ಹೇಳ್ತೀರಾ.!
ಗಂಡ: ಯಾಕಂದ್ರೆ ನಾನು ಒಂದು ಅಕ್ಷರ ಟೈಪ್ ಮಾಡಿದರೆ ಸಾಕು, ಅದು ನೂರು ಸಜೆಷನ್ ಕೊಡುತ್ತೆ.!

ಮೈಸೂರು ಮಿತ್ರ

ಭಾನುವಾರ, ಏಪ್ರಿಲ್ 19, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಂದಷ್ಟು ಜನರನ್ನು ಎಷ್ಟು ಬೇಕೋ ಅಷ್ಟೇ ನಂಬಬೇಕು. ಇಲ್ಲದಿದ್ದರೆ ನಿಮ್ಮನ್ನು ಬಸ್ ನಿಲ್ದಾಣದಲ್ಲಿ ಬಿಟ್ಟು, ದೋಣಿ ಬರುತ್ತದೆ ಕಾಯುತ್ತಾ ಇರಿ, ಎಂದು ಕೂರಿಸಿ ಬಿಡುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಬೆಲ್ಲವಿಲ್ಲದಿದ್ದರೂ, ಬೆಲ್ಲದಂತ ಮಾತು

ನಿಮ್ಮ ಪತ್ರಗಳು

ಸುಜಾತಮ್ಮನಿಗೆ ಪ್ರೀತಿಯ ನಮಸ್ಕಾರ

ಮಾನ್ಯರೆ,

ಶನಿವಾರ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಮೈಸೂರಿನ ಸಿದ್ಧಾರ್ಥ ನಗರದ ಮನೆಯೊಂದರಲ್ಲಿ ಚಿರತೆ ವಿಶ್ರಾಂತಿ ಪಡೆದ ವಿಚಾರ ನಿಜಕ್ಕೂ ಮೈ ನಡುಕ ಹಾಗೂ ರೋಮಾಂಚನವೀಯುವಂತಿತ್ತು. ಸುಖಾಂತ್ಯವಾಗಿದ್ದು ಬಹಳ ಸಂತೋಷ ತಂದಿತು. ಚಿರತೆಯ ರಕ್ಷಣೆಯ ಜೊತೆಗೆ ತಮ್ಮ ಜೀವಗಳ ರಕ್ಷಣೆಯಾದದ್ದು ಒಂದು ವಿಚಾರವಾದರೆ ಎನ್ನ ಮನದಾಳದಲ್ಲಿ ತಟ್ಟನೆ ಈ ಒಂದು ವಿಚಾರ ಮೂಡಿಬಂತು. ಪ್ರೀತಿಯ ಸುಜಾತ ಅವರಿಗೆ ತನ್ನ ಅತ್ತೆಯ ಮೇಲೆ ಇದ್ದ ಪ್ರೀತಿ ಅಕ್ಕರೆ ನಿಜಕ್ಕೂ ಪ್ರಶಂಸಾರ್ಹವಾದದ್ದು ಹಾಗೂ ಮಾದರಿಯಾದಂತದ್ದು. ಈಗಿನ ಕಾಲದಲ್ಲಿ ಟಿ.ವಿ ಸೀರಿಯಲ್‌ನಿಂದ ಹಿಡಿದು ಸಮಾಜದಲ್ಲೂ ಕೂಡ ಅತ್ತೆ ಸೊಸೆಯ ಸಂಬಂಧ ಯಾವ ರೀತಿಯಲ್ಲಿ ಬಿಂಬಿಸಲಾಗುತ್ತಿದೆ ಎಂದು ನಾವೆಲ್ಲರೂ ತಿಳಿದಿರುವ ವಿಚಾರವೇ. ಸುಜಾತಮ್ಮನವರು ಸ್ವಾರ್ಥವನ್ನು ತೋರಿ ಮಾತೃ ಸಮಾನರಾದ ಅತ್ತೆಯವರನ್ನು ರೂಮಿನಲ್ಲೇ ಬಿಟ್ಟು ತಮ್ಮ ಪ್ರಾಣ ರಕ್ಷಣೆ ಎಂದು ಮನೆಯ ಮುಖ್ಯದ್ವಾರದ ಬಾಗಿಲು ಹಾಕಿ ರಕ್ಷಣೆಗೆ ಅಂಗಲಾಚಬಹುದಾಗಿತ್ತು. ಆದರೂ ಪ್ರಾಣದ ಹಂಗು ತೊರೆದು ಅಸ್ವಸ್ಥರಾಗಿ ಮಲಗಿದ್ದ ಹಾಗೂ ಸರಿಯಾಗಿ ಓಡಾಡಲು ಆಗದ ಅತ್ತೆಯವರನ್ನು ಬಾಚಿ ತಬ್ಬಿ ಚಿರತೆ ಮಲಗಿದ್ದ ರೂಮ್‌ನಿಂದ ಹೊರತಂದು ಕಾಪಾಡಿದ್ದು ನಿಜಕ್ಕೂ ಆನಂದ ಬಾಷ್ಪ ತರುವಂತದ್ದು. ಈ ಘಟನೆಯು ಆಧುನಿಕ ಸಮಾಜದಲ್ಲಿ ಅತ್ತೆ ಸೊಸೆಯ ಬಾಂಧವ್ಯವನ್ನು ಇಮ್ಮಡಿ ಗೊಳಿಸಲಿ ಎಂಬುದು ನನ್ನ ಆಶಯ.

–ಶಿವಕುಮಾರ್.ಕೆ, ಯಾದವಗಿರಿ, ಮೈಸೂರು

ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಬಹಿರಂಗ ಪತ್ರ

ಮಾನ್ಯರೆ,

ಹುಣಸೂರಿನಿಂದ ಸಂಜೆಯ ವೇಳೆ ಮೈಸೂರಿಗೆ ಪ್ರಯಾಣ ಮಾಡುವವರಿಗೆ ಬಸ್ ಹತ್ತಲು ನೂಕು ನುಗ್ಗಲು. ಇದು ದಿನನಿತ್ಯ ಸಮಸ್ಯೆ ಆಗಿದೆ. ಹುಣಸೂರಿನಲ್ಲಿ ಹಲವಾರು ಸರ್ಕಾರಿ ಕಚೇರಿ ಇದ್ದು, ಶೇ. 80 ನೌಕರರು ಪ್ರತಿ ದಿನ ಮೈಸೂರಿನಿಂದ ಹುಣಸೂರಿಗೆ ಪ್ರಯಾಣ ಮಾಡುತ್ತಾರೆ. ಇವರೆಲ್ಲರೂ ಸಂಜೆ 5.30ಕ್ಕೆ ಕಚೇರಿ ಕೆಲಸ ಮುಗಿಸಿ ಹುಣಸೂರು ಬಸ್ ನಿಲ್ದಾಣದಲ್ಲಿ ಮೈಸೂರಿಗೆ ಹೋಗಲು ಬಸ್‌ಗಾಗಿ ಕಾಯುವಂತಾಗಿದೆ.

ಮಡಿಕೇರಿ ಮಾರ್ಗದ ಬಸ್ ವಿರಾಜಪೇಟೆ ಮಾರ್ಗದ ಬಸ್, ಕೆಲವು ಹುಣಸೂರು ಡಿಪೋನಿಂದ ಹುಣಸೂರು– ಮೈಸೂರು ಎಂಬ ನಾಮಫಲಕದ ಬಸ್‌ಗಳು ಬರುತ್ತವೆ. ಈ ಬಸ್‌ಗಳು ಮೈಸೂರಿಗೆ ಹೋಗುವ ಫ್ಲಾಟ್ ಫಾರ್ಮ್‌ಗೆ ಬಂದು ನಿಲ್ಲುವ ವೇಳೆಗೆ ಬಸ್‌ಗೆ ಕಾಯುತ್ತಿದ್ದ ಹಲವಾರು ನೌಕರರು ಹಾಗೂ ಇತರೆ ಪ್ರಯಾಣಿಕರು ಬಸ್ ಬಂದ ಕೂಡಲೇ ಎಲ್ಲರೂ ಬಸ್ ಹತ್ತಲು ಹರಸಾಹಸ ಪಡುವಂತಾಗಿದೆ. ಬಸ್ ಹತ್ತುವಾಗ ಡೋರ್ ಹತ್ತಿರ 20–30 ಮಂದಿ ಇರುತ್ತಾರೆ. ಕೆಎಸ್‌ಆರ್‌ಟಿಸಿ ನಿಯಂತ್ರಕರು ಮೈಸೂರು ಕಡೆ ಹೋಗುವ ಬಸ್‌ಗೆ ಒಂದು ಸರತಿ ಸಾಲು ಮಾಡಿಸಿ ಆ ನೂಕು ನುಗ್ಗಲನ್ನು ತಪ್ಪಿಸಿ ಸುಲಲಿತವಾಗಿ ಪ್ರಯಾಣ ಮಾಡಲು ಅಗತ್ಯ ಕ್ರಮ ವಹಿಸಲೆಂದು ಈ ಮೂಲಕ ಮನವಿ.

–ಬೆಳತೂರು ವೆಂಕಟೇಶ, ಕಂದಾಯ ನಗರ, ಶ್ರೀರಾಂಪುರ, ಮೈಸೂರು

'ಮಿತ್ರ'ನಿಗೊಂದು ಪತ್ರ

ಮಾನ್ಯರೆ,

46ರ ಹರೆಯದ 'ಮೈಸೂರು ಮಿತ್ರ'
ನಮ್ಮ ನಿವೇದನೆ ಸಂಕಲ್ಪ ನಿಮ್ಮತ್ರ
ಆಗಾಗ್ಗೆ ಬರೆಯುತ್ತಿದ್ದೆ ನಿಮಗೆ ಪತ್ರ
ಚಿರಕಾಲ ಉಳಿಯಲಿ ಎಲ್ಲರತ್ರ.

47ನೇ ವರ್ಷಕ್ಕೆ ಸ್ವಾಗತ ನಿಮಗೆ
ಉತ್ತಮ ವಿಷಯ ನೀಡುವೆ ನಮಗೆ
ಹೆಚ್ಚು ವಿಷಯ ಹೊತ್ತು ಬರಲಿ ಮುಂದೆ
ಸದಾ ನಿಮ್ಮ ಸಂಗಡ ಬರುವೆವು ಹಿಂದೆ.

– ಅ. ಮೃತ್ಯುಂಜಯ.
ಶಾಂತಿನಗರ, ಪಾಂಡವಪುರ.

ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ಜಿಲ್ಲೆಯ ಟಿ ನರಸೀಪುರದಿಂದ ಮಂಡ್ಯ ನಗರಕ್ಕೆ ಬೆಳಗಿನ ಸಮಯದಲ್ಲಿ ಸರಿಯಾದ ಬಸ್ ಸೌಲಭ್ಯ ಗಳಿಲ್ಲದ್ದರಿಂದ ಈ ಮಾರ್ಗದಲ್ಲಿ ತೆರಳುವ ಅನೇಕ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಅಧಿಕಾರಿಗಳು, ಸರ್ಕಾರಿ ನೌಕರರು, ಕಾರ್ಮಿಕರಿಗೆ ನಿಗದಿತ ಸಮಯಕ್ಕೆ ಕೆಲಸಕ್ಕೆ, ಶಾಲಾ ಕಾಲೇಜಿಗೆ ತಲುಪಲು ಆಗುತ್ತಿಲ್ಲ. ಬೆಳಗಿನ ವೇಳೆಯಲ್ಲಿ ಕಡಿಮೆ ಬಸ್‌ಗಳು ಓಡಾಡುವುದರಿಂದ ಬಸ್‌ಗಳಲ್ಲಿ ನಿಗದಿತ ಆಸನಗಳಿಗೆ ವಿಪರೀತ ಜನಸಂದಣಿಯಿಂದ ಪ್ರಯಾಣ ಮಾಡುವಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಟಿ ನರಸೀಪುರದಿಂದ – ಬನ್ನೂರು, ಮಂಡ್ಯ ನಗರಕ್ಕೆ ಬೆಳಗಿನ ಸಮಯಗಳಲ್ಲಿ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಂಬಂಧಪಟ್ಟ ರಾಜ್ಯ ಸಾರಿಗೆ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳಬೇಕೆಂದು ಮನವಿ.

–ಕುಮಾರ ಎಸ್ ಮಾವಿನಹಳ್ಳಿ ಮೈಸೂರು

ಮಹಿಳಾ ಮೀಸಲಾತಿ ವಿಧೇಯಕಕ್ಕೆ ಸೋಲು

ಮಾನ್ಯರೆ,

ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಗೆ ಲೋಕ ಸಭೆಯಲ್ಲಿ ಸೋಲು (ಮೈಸೂರು ಮಿತ್ರ ಏಪ್ರಿಲ್ 18). ಆದರೇನು ಈ ಸೋಲು ಅಂತಿಮವೇನಲ್ಲ. ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸಲು ಮಸೂದೆಯ ಅಗತ್ಯವಿದೆಯೇ? ಎಲ್ಲಾ ರಾಜಕೀಯ ಪಕ್ಷಗಳು ಹೆಚ್ಚು ಹೆಚ್ಚು ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸಲು ಯಾವ ತೊಡಕೂ ಇಲ್ಲ. ಅದಕ್ಕೆ ರಾಜಕೀಯ ಪಕ್ಷಗಳ Will Power ಬೇಕು Bill power ಅಲ್ಲ.

–ಲಕ್ಷ್ಮಣ್ ಗೋರ್ಲಕಟ್ಟೆ, ಭೋಗಾದಿ, ಮೈಸೂರು.


ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆ(ಏ.16)ಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

ಅಳಿಯ ಲಿಂಗರಾಜ ಅರಸು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ವಿಜಯನಗರ ಸಾಮ್ರಾಜ್ಯದ ಅವನತಿ ನಂತರ ಮೈಸೂರಿನ ಒಡೆಯರು ಅಕ್ಷರ ಪುರುಷರಿಗೆ ಆಶ್ರಯ ನೀಡಿ, ಪೋಷಿಸಿ ಬೆಳೆಸಿದರು. ಅವರ ಆಸ್ಥಾನದಲ್ಲಿ ಸಮರ್ಥ ಆಡಳಿತಗಾರರಲ್ಲದೆ, ಪಾಂಡಿತ್ಯ ಪೂರ್ಣ ಕವಿಗಳೂ ಇದ್ದರು. ಅವರ ನೆರವಿನಿಂದ ಹಲವು ಪ್ರಾಕಾರಗಳಲ್ಲಿ ಸಾಹಿತ್ಯ ಸೃಷ್ಟಿ ಮಾಡಿದರು. ಧಾರ್ಮಿಕ–ಸಾಮಾಜಿಕ ಬೆಳವಣಿಗೆಗಳ ಜೊತೆಗೆ ರಾಜಾಡಳಿತದ ಪ್ರಭಾವವೂ ಅವರ ಮೇಲೆ ಉಂಟಾಗಿ ಹಾಗಾಗಿ ಸಾಹಿತ್ಯ ಕೃಷಿಯನ್ನೂ ಮಾಡಿದರು. ಸಾಹಿತ್ಯ ಸಮೃದ್ಧವಾಯಿತು.

ವಿಜಯನಗರ ಸಾಮ್ರಾಜ್ಯ ಸಂಪೂರ್ಣ ಅವನತಿ ಹಾದಿ ಹಿಡಿದಿದ್ದಾಗ ಸಿಂಹಾಸನವೇರಿದ ರಾಜ ಒಡೆಯರ ಕಾಲದಿಂದಲೇ ಈ ಸಾಹಿತ್ಯ ಸೃಷ್ಟಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಆ ಸಾಮ್ರಾಜ್ಯದ ಸಾಹಿತ್ಯ ಪರಂಪರೆಯ ಉತ್ತರಾಧಿಕಾರಿಗಳಾಗಿ ಸ್ಥಳೀಯ ಭಾಷೆಯಾದ ಕನ್ನಡ ಮಾತ್ರವಲ್ಲದೆ, ಸಂಸ್ಕೃತ, ತೆಲುಗು ಭಾಷೆಗಳಲ್ಲಿಯೂ ಮೈಸೂರು ರಾಜರ ಆಸ್ಥಾನ ಸಾಹಿತ್ಯ ಸೃಷ್ಟಿಯ ಕೇಂದ್ರವಾಗಿ ಬೆಳೆಯಿತು.

ಇಂತಹ ಅಕ್ಷರ ಪುರುಷರಲ್ಲದೆ ಸ್ವತಃ ರಾಜರೇ ಸಾಹಿತ್ಯದ ಕೈಂಕರ್ಯ ಕೈಗೊಂಡರು. ಅವರ ಪ್ರಭಾವದಿಂದಾಗಿ ಅವರು ಮಾತ್ರವಲ್ಲದೆ ಅರಮನೆಯ ಅಂತಃಪುರದವರೂ ಈ ಕೈಂಕರ್ಯ ಕೈಗೊಳ್ಳುವಂತಾಯಿತು. ಊಳಿಗದವರೂ ಸಾಹಿತ್ಯ ಸೇವೆ ಮಾಡುವಂತಾಯಿತು. ಮೈಸೂರು ರಾಜಮನೆತನದ ಇತಿಹಾಸವನ್ನು ಪರಾಮರ್ಶಿಸಿದಾಗ ಸಾಹಿತ್ಯ ಕೈಂಕರ್ಯದ ಇಂತಹ ಅನೇಕ ನಿದರ್ಶನಗಳು ಕಂಡುಬರುತ್ತವೆ. ಮೈಸೂರು ರಾಜರು, ಅವರ ಪರಿವಾರ, ಅವರಿಂದ ಪೋಷಿಸಲಾದ ವಿದ್ವನ್ಮಣಿಗಳ ಕಾರ್ಯವನ್ನು ಮೆಚ್ಚುವಂತಾಗುತ್ತದೆ.

ಅಭಿನವ ಭೋಜ ಗೌರವಕ್ಕೆ ಪಾತ್ರರಾದ ಮುಮ್ಮಡಿ ಕೃಷ್ಣರಾಜರು ಸ್ವತಃ ಸಾಹಿತ್ಯ ಸೃಷ್ಟಿ ಮಾಡಿ ಕೀರ್ತಿ ಪಡೆದರು. ವಿದ್ವಾಂಸರಿಗೆ, ಸಂಗೀತಗಾರರಿಗೆ, ಕಲೆಗಾರರಿಗೆ ಉದಾರವಾಗಿ ನೆರವು ನೀಡಿದರು. ಕಂಟಕಗಳ ನಡುವೆಯೂ ತಮ್ಮ ಬಹುತೇಕ ಸಮಯವನ್ನೆಲ್ಲಾ ಲಲಿತ ಕಲೆಗಳ ಬೆಳವಣಿಗೆಗೆ ಮೀಸಲಿಟ್ಟರು. ಮೈಸೂರಿನ ಸಂಸ್ಕೃತಿ ಬೆಳೆಸಿದರು.

ಅವರ ನೆರವಿನಲ್ಲಿದ್ದ ಕೆಲವರು ಸಾಹಿತ್ಯ ಕೈಂಕರ್ಯವನ್ನು ಆಡಳಿತ ನಿರ್ವಹಣೆಯ ಜವಾಬ್ದಾರಿಯ ಮಧ್ಯೆಯಲ್ಲಿಯೂ ಸಮರ್ಥವಾಗಿ ಕೈಗೊಂಡಿದ್ದು ಕಂಡುಬರುತ್ತದೆ. ಅಂತಹ ನಿದರ್ಶನಗಳೂ ಹಲವಾರು ಕಾಣಸಿಗುತ್ತವೆ. ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಸೇವೆ ಸಲ್ಲಿಸಿರುವುದು ಗಮನಕ್ಕೆ ಬರುತ್ತದೆ. ಅಂತಹವರಲ್ಲಿ ಒಬ್ಬರು ಮುಮ್ಮಡಿ ಕೃಷ್ಣರಾಜ ಒಡೆಯರ ಅಳಿಯಂದಿರೇ ಆದ ಅಳಿಯ **ಲಿಂಗರಾಜ ಅರಸರು**.

ಲಿಂಗರಾಜ ಅರಸು ಅವರು ಮಹಾರಾಜರಿಗೆ ಅಳಿಯನಾಗಿ, ಬಂಧುಗಳೂ ಆಗಿದ್ದರು. ಮುಮ್ಮಡಿ ಕೃಷ್ಣರಾಜರಿಗೆ ಆಡಳಿತದಲ್ಲಿ ನೆರವಾಗಿಯೂ ಇದ್ದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಪಡೆದು ಪ್ರಕಾಂಡ ಪಂಡಿತರಾಗಿದ್ದರು. ಲಲಿತ ಕಲೆಗಳ ವಿವಿಧ ಪ್ರಾಕಾರಗಳಲ್ಲಿ ಆಸಕ್ತಿಹೊಂದಿದ್ದು ಎರಡೂ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದರು. ಅರಸು ಮನೆತನದವರ ಪೈಕಿ ಅಪರೂಪದ ವ್ಯಕ್ತಿಯಾಗಿದ್ದರು.

ಅಳಿಯ ಲಿಂಗರಾಜ ಅರಸರು 1923ರ ನವೆಂಬರ್ 1ರ ಶನಿವಾರದಂದು ಜನಿಸಿದರು. ಅವರ ತಂದೆಯ ಹೆಸರೂ ಲಿಂಗರಾಜ. ತಾಯಿ ಕೆಂಪದೇವಾಂಬಿಕೆ ಅಥವಾ ಕೆಂಪದೇವಾಜಮ್ಮ. ಅವರ ಪೂರ್ವಿಕರು ಹೆಗ್ಗಡದೇವನಕೋಟೆಯ ನೇರಳೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು. ಲಿಂಗರಾಜ ಅರಸರನ್ನು ಚಿಕ್ಕಂದಿನಿಂದಲೂ ಮುಮ್ಮಡಿಯವರೇ ಪೋಷಿಸಿ ಬೆಳೆಸಿದರು. ಅಕ್ಷರಾಭ್ಯಾಸದ ನಂತರ ಲಿಂಗರಾಜ ಅರಸು ಅವರಿಗೆ ಸಂಸ್ಕೃತ, ಕನ್ನಡ, ಸಂಗೀತವನ್ನು ಹೇಳಿ ಕೊಡಲು ವ್ಯವಸ್ಥೆ ಮಾಡಿದರು. ರಂಭಾಪುರಿ ರೇಣುಕಾ ಚಾರ್ಯರ ವಂಶಸ್ಥರಾದ ಚನ್ನವೀರ ದೇಶಿಕರು ಲಿಂಗರಾಜ ಅರಸರಿಗೆ ವಿದ್ಯಾಭ್ಯಾಸದ ಗುರುಗಳಾಗಿದ್ದರು. ವಯಸ್ಸಿಗೆ ಬಂದಾಗ ಮುಮ್ಮಡಿ ಅವರು, ಲಿಂಗರಾಜ ಅರಸು ಅವರಿಗೆ ತಮ್ಮ ಇಬ್ಬರು ಪುತ್ರಿಯರಾದ ದೊಡ್ಡ ಪುಟ್ಟತಾಯಮ್ಮಣ್ಣಿ ಮತ್ತು ಚಿಕ್ಕ ಪುಟ್ಟತಾಯಮ್ಮಣ್ಣಿಯನ್ನು ಲಗ್ನ ಮಾಡಿ ಕೊಟ್ಟದ್ದಲ್ಲದೆ ಅಪಾರ ಧನ–ಕನಕಗಳನ್ನು ನೀಡಿದರು. ಇದರಿಂದಾಗಿ ಲಿಂಗರಾಜ ಅರಸು ಅರಸರ ಅಳಿಯ ನಾಗಿ ಆ ಅನ್ವರ್ಥನಾಮ ಅವರ ಹೆಸರಿಗೆ ನಂಟು ಹಾಕಿದಂತೆ ತೋರುತ್ತದೆ. ಇವರಾದರೋ ತಮ್ಮನ್ನು ಲಿಂಗರಾಜ ಎಂದಷ್ಟೇ ಕರೆದುಕೊಂಡಿದ್ದಾರೆ.

ಮಹಾರಾಜರ ಪ್ರಭಾವವೂ ಇವರ ಮೇಲೆ ಉಂಟಾಗಿ ಲಿಂಗರಾಜ ಅರಸರೂ ವಿದ್ವಾಂಸರಾಗಿ ಬೆಳೆದರು. ಕವಿಗಳು, ವಿದ್ವಾಂಸರು, ಸಂಗೀತಗಾರರಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯ ನೀಡಿದರು. ಲಿಂಗರಾಜರ ವರ್ಚಸ್ಸು ಹೇಗಿತ್ತೆಂದರೆ ಅವರ ಸೇವಕರೂ ಕಾವ್ಯಾಸಕ್ತಿ ಪಡೆದು ಅದರ ಬಗ್ಗೆ ತಿಳಿದವರಾಗಿದ್ದರು. ಲಿಂಗರಾಜರು ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರೂ ವಿಶಾಲ ಹೃದಯದವರಾಗಿದ್ದರು. ಪಂಡಿತರು–ವಿದ್ವಾಂಸರ ಅಭಿಮಾನಿಯಾಗಿದ್ದರು. ಇವರ ಆರಾಧ್ಯದೈವ ವೀರಭದ್ರ, ಮೈಸೂರಿನ ಸಂಸ್ಕೃತ ಪಾಠಶಾಲೆಯ ಹಿಂಭಾಗದಲ್ಲಿರುವ ಚಾಮರಾಜೇಶ್ವರ ದೇವಸ್ಥಾನದಲ್ಲಿ ಕೃಷ್ಣವಿಲಾಸ ಸನ್ನಿಧಾನದ ಮಹಾಲಿಂಗೇಶ್ವರನನ್ನು ಪ್ರತಿಷ್ಠಾಪಿಸಿದ್ದಾರೆ. ಚಾಮರಾಜನಗರದ ಅಮಚವಾಡಿಯ ವೀರಭದ್ರ ಗುಡ್ಡದಲ್ಲಿ ವೀರಭದ್ರನ ಪ್ರತಿಷ್ಠಾಪನೆ ಮಾಡಿಸಿದ್ದಾರೆ. ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಕೃಷ್ಣವಿಲಾಸ ಸನ್ನಿಧಾನದ ಮಹಾಲಿಂಗೇಶ್ವರನನ್ನು ಸ್ಥಾಪಿಸಿದ್ದಾರೆ. ಕಿತ್ತೂರಿನ ರಾಮೇಶ್ವರ ದೇವಸ್ಥಾನಕ್ಕೆ ಬೆಳ್ಳಿಯ ಆಭರಣ, ಗಂಟೆ ಮತ್ತು ನೀರಿನ ಪಾತ್ರೆಗಳನ್ನು ದಾನಕೊಟ್ಟಿದ್ದಾರೆ.

ಅವರಿಗಿದ್ದ ಸಾಹಿತ್ಯ, ಸಂಗೀತ ಮತ್ತು ಇತರ ಕಲೆಗಳಲ್ಲಿ ಆಸಕ್ತಿ ಹಾಗೂ ದ್ವಿಭಾಷಾ ಪ್ರೌಢಿಮೆ ಅವರನ್ನು ಈ ದಿಕ್ಕಿನಲ್ಲಿ ಕೃಷಿ ಮಾಡುವಂತೆ ಪ್ರೇರೇಪಿಸಿತು. ಸಾಹಿತ್ಯ ಕೃತಿಗಳಲ್ಲದೆ, ಶಾಸ್ತ್ರ ಗ್ರಂಥಗಳನ್ನೂ ರಚಿಸಿದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅವರು ಸುಮಾರು 47 ಕೃತಿಗಳನ್ನು ವಿವಿಧ ಪ್ರಾಕಾರಗಳಲ್ಲಿ ರಚಿಸಿದರು. ಕೆಲವು ವಿದ್ವಾಂಸರ ಪ್ರಕಾರ ಇವರು ರಚಿಸಿದ್ದು 60 ಕೃತಿಗಳು. ಗದ್ಯ, ಷಟ್ಪದಿ, ಸಾಂಗತ್ಯ, ಜಾವಳಿಗಳು, ತತ್ವಪದ, ಕೀರ್ತನೆ, ಶತಕಗಳು, ಯಕ್ಷಗಾನ, ನಾಟಕಗಳನ್ನು ರಚಿಸಿ ತಮ್ಮನ್ನು ಸಾಕಿ ಸಲಹಿದ ಮುಮ್ಮಡಿಯವರ ಸಮನಾಗಿ ಬೆಳೆದರು. ಲಿಂಗ ರಾಜ, ಲಿಂಗನೃಪ, ಲಿಂಗೇಂದ್ರ ಲಿಂಗನರೇಂದ್ರ, ಲಿಂಗ ಮಹೀಂದ್ರ, ಲಿಂಗಭೂಪ ಅವರ ಅಂಕಿತವಾಯಿತು. ಅವರು ರಚಿಸಿದ ಸಂಸ್ಕೃತ ನೀಲಾಂಬರಿ ರಾಗದ ಶೃಂಗಾರಲಹರಿ ಪ್ರಸಿದ್ಧಿ ಪಡೆಯಿತು. ಕಾಮನನ್ನು ನಾಶಮಾಡಿದ ಶಿವನ ಅರ್ಧಾಂಗಿ ಭಗವತಿ ಕಾತ್ಯಾಯನಿಯ ವರ್ಣನೆಯ ಕೃತಿಯಾಗಿತ್ತು. ಅಂತೆಯೇ ಪ್ರಭಾವತೀ ಪರಿಣಯ ಪ್ರಸಿದ್ಧ ಕಾವ್ಯವಾಗಿತ್ತು.

ಲಿಂಗರಾಜ ಅರಸರ ರಚನೆಗಳಲ್ಲಿ ಶಿವನ 25 ಲೀಲೆಗಳನ್ನು ಹಲವು ರಾಗಗಳಲ್ಲಿ ವರ್ಣಿಸುವ ಪಂಚವಂಶತಿ ಲೀಲೆ ಒಂದು. ಅಂಬಾ ಕೀರ್ತನೆಗಳು ಹೆಸರಿನಲ್ಲಿ ಸುಮಾರು 15 ಕೀರ್ತನೆಗಳನ್ನು ರಚಿಸಿದರು. ಜೊತೆಗೆ ಕೆಲವು ಯಕ್ಷಗಾನ ರೂಪಕಗಳನ್ನು ಸೃಷ್ಟಿ ಮಾಡಿದರು. ಗಿರಿಜಾಕಲ್ಯಾಣವನ್ನು ಯಕ್ಷಗಾನ ಹಾಗೂ ಸಾಂಗತ್ಯ ಎರಡರಲ್ಲೂ ಆರು ಅಧ್ಯಾಯಗಳನ್ನಾಗಿ ರಚಿಸಿದರು. ಹೀಗಾಗಿ ಅವರ ಸಾಹಿತ್ಯ ಕೃಷಿ ಹಲವು ಪ್ರಾಕಾರಗಳಿಗೆ ವಿಸ್ತರಿಸಿ ಅವರಿಗೆ ಕೀರ್ತಿ ತಂದಿತು.

ಮುಮ್ಮಡಿ ಕೃಷ್ಣರಾಜರು 1812ರಲ್ಲಿ ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯಕ್ಕೆ ಭೇಟಿ ನೀಡಿದಾಗ ಯಕ್ಷಗಾನ ಅವರನ್ನು ಆಕರ್ಷಿಸಿತು. ಧರ್ಮಸ್ಥಳದ ಒಂದು ಯಕ್ಷಗಾನ ತಂಡವನ್ನು ಮೈಸೂರು ಅರಮನೆಗೆ ಕರೆಸಿದರು. ಮುಮ್ಮಡಿಯವರೇ ಸ್ವತಃ ದಕ್ಷಾಸುರ ಧ್ವಂಸ ಎನ್ನುವ ಯಕ್ಷಗಾನವನ್ನು ರಚಿಸಿದರು. ಈ ಪರಿಸರದಲ್ಲಿ ಬೆಳೆದ ಲಿಂಗರಾಜ ಅರಸಿನವರು ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳಿಂದ ವಿಷಯಗಳನ್ನು ಆಯ್ದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಯಕ್ಷಗಾನಗಳನ್ನು ರಚಿಸಿದರು. ಅಲ್ಲದೆ ಅವರು ಷಟ್ಪದಿ, ವೃತ್ತ, ಕಂದ, ಹಾಡು ಮತ್ತಿತರ ಛಂದೋಪ್ರಾಕಾರಗಳಲ್ಲಿ ಕೆಲಸ ಮಾಡಿದರು.

ಅವರ ಕೊಡುಗೆಗಳಲ್ಲಿ ಒಂದು ಪ್ರಭಾವತಿ ಪರಿಣಯ. ವಾರ್ಧಿಕ ಷಟ್ಪದಿಯಲ್ಲಿ ರಚಿತವಾಗಿರುವ 35 ಅಧ್ಯಾಯಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚಿನ ಪದ್ಯಗಳನ್ನು ಒಳಗೊಂಡಿರುವ ಬೃಹತ್ ಗ್ರಂಥ. ದ್ವಿತೀಯ ಮಗನಾದ ವಜ್ರನಾಭನು ಪಾರ್ವತಿಯ ವರದಿಂದ ಪ್ರಭಾವತಿ ಎಂಬ ಮಗಳನ್ನು ಪಡೆದಿದ್ದು, ಇವಳನ್ನು ಕೃಷ್ಣನ ಮಗನಾದ ಪ್ರದ್ಯುಮ್ನನು ವರಿಸುವುದೇ ಕಥೆಯ ವಸ್ತು. ಕಾವ್ಯದ ವರ್ಣನಾ ಚಾತುರ್ಯ, ವಿಷಯಗಳನ್ನು ವಿಸ್ತರಿಸುವ ರೀತಿ ಕಾವ್ಯದ ಸೊಗಸನ್ನು ಹೆಚ್ಚಿಸುತ್ತದೆ ಎಂಬ ಪ್ರಶಂಸೆಗೆ ಪಾತ್ರವಾಗಿದೆ ಈ ಬೃಹತ್ ಕಾವ್ಯ.


ಶ್ರೀವೀರಭದ್ರಕರುಣಾಕಟಾಕ್ಷ ಸಮಾಸಾದಿತಾನಿತರ ಸಾಧಾರಣ ಸಾರಸ್ವತೋಭಯ ನಿಖಿಲಸರಸಕವಿಕುಲ ತಿಲಕ ಶ್ರೀ ಲಿಂಗರಾಜ ವಿರಚಿತಮಪ್ಪ ಪ್ರಭಾವತಿ ಪರಿಣಯ ಎಂಬ ಮಹಾಕಾವ್ಯ ಎಂದು ಹೇಳುವ ಮೂಲಕ ತಮ್ಮ ಮಹಾಕಾವ್ಯವನ್ನು ಮುಕ್ತಾಯ ಮಾಡುತ್ತಾರೆ ಲಿಂಗರಾಜ ಕವಿ. ಅವರು ಕನ್ನಡದಲ್ಲಿ ರಚಿಸಿದ ಚಂದ್ರವಳ್ಳಿಯ ಜೋಗಿ ಹಾಡು ಮತ್ತು ಅಂಬಾ ಕೀರ್ತನೆ ಪ್ರಸಿದ್ಧವಾಗಿದ್ದವುಗಳ ಪೈಕಿ ಸೇರಿದ್ದವು.

ತಮ್ಮ ಪಾಂಡಿತ್ಯದಿಂದ ಆಸ್ಥಾನದಲ್ಲಿಯೂ ಅವರು ಅಗ್ರಸ್ಥಾನ ಪಡೆದಿದ್ದರು. ಅಳಿಯನ ಪ್ರೌಢಿಮೆವನ್ನು ಗುರುತಿಸಿ, ಮುಮ್ಮಡಿಯವರು ಲಿಂಗರಾಜ ಅರಸರಿಗೆ ಉಭಯಕವಿತಾ ವಿಶಾರದ ಹಾಗೂ ಸರಸಕವಿಕುಲತಿಲಕ ಬಿರುದುಗಳನ್ನು ಕೊಟ್ಟಿದ್ದರು. ಎರಡು ಭಾಷೆಗಳಲ್ಲಿ ಪ್ರೌಢಿಮೆ ಪಡೆದು ಆ ಎರಡು ಭಾಷೆಗಳಲ್ಲಿಯೂ ಕೃತಿಗಳನ್ನು ರಚಿಸಿ ಗೌರವಕ್ಕೆ ಪಾತ್ರರಾಗಿದ್ದರು. ಶಬ್ದಾಲಂಕಾರ ಅರ್ಥಾಲಂಕಾರಗಳಿಂದ ಕೂಡಿದ ನರಪತಿ ಚರಿತೆ ಎಂಬ ಹೆಸರಿನ ಅಲಂಕಾರ ಗ್ರಂಥ ಇವರಿಗೆ ಉಭಯ ಕವಿತಾವಿಶಾರದ ಎನ್ನುವ ಬಿರುದನ್ನು ತಂದು ಕೊಟ್ಟಿತು. ವಿದ್ವಾಂಸರಾಗಿ ಉಭಯ ಕವಿತಾ ವಿಶಾರದವರಾಗಿದ್ದುದರ ಜೊತೆಗೆ ಇವರು ಆಡಳಿತದಲ್ಲಿಯೂ ಸಹಕರಿಸುತ್ತಿದ್ದರು. ಹಲವಾರು ಸಂದರ್ಭಗಳಲ್ಲಿ ಹಾಜರಿರುತ್ತಿದ್ದರು. ಇವರಿಗೆ ಕಿತ್ತೂರು ಗ್ರಾಮವನ್ನು ಸರ್ವಮಾನ್ಯವಾಗಿ ಕೊಡಲಾಗಿತ್ತು. ಕೃಷ್ಣರಾಜಪೇಟೆ ತಾಲೂಕಿನ ಭಾರತೀಪುರ ಮತ್ತು ಮಂದಗೆರೆ ಕಾವಲು ಇವರಿಗೆ ಸೇರಿದ್ದವು. ಇಂತಹ ಅಪರೂಪದ ವ್ಯಕ್ತಿತ್ವದ ಅರಸು ಮನೆತನದವರು ಲಿಂಗರಾಜ ಅರಸರೊಬ್ಬರೇ ಎಂದು ಕಾಣುತ್ತದೆ.

ತಮ್ಮ ಬದುಕಿಗೆ ನಿರಂತರ ಆಸರೆಯಾಗಿದ್ದ ಮುಮ್ಮಡಿಯವರು ನಿಧನರಾದ ಸುಮಾರು ಆರು ವರ್ಷಗಳ ನಂತರ ಅಳಿಯ ಲಿಂಗರಾಜ ಅರಸರು 1874ರ ಡಿಸೆಂಬರ್ 13 ಭಾನುವಾರದಂದು ಕಾಲವಾದರು. ಇವರ ವಂಶ ಈಗಲೂ ನಡೆದುಬರುತ್ತಿದೆ.

(ತಿದ್ದುಪಡಿ: ಏಪ್ರಿಲ್ 16ರಂದು ಪ್ರಕಟವಾದ ಲೇಖನದ ಮೊದಲ ಚಿತ್ರದ ಬದಲಿಗೆ ಮೂರನೇ ಚಿತ್ರ ಮಹಾಮಹೋಪಾಧ್ಯಾಯ ಶ್ರೀ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳದ್ದಾಗಿದೆ.)

ಹವಾಯಿಯಲ್ಲೊಂದು ಹಿಂದೂ ದೇವಸ್ಥಾನ...





ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಅಮೆರಿಕ ಎಂದೊಡನೆ ನಮ್ಮ ಮನಸ್ಸಿಗೆ ಬರುವುದು ಗಗನಚುಂಬಿ ಕಟ್ಟಡಗಳು, ಅತ್ಯಾಧುನಿಕ ಉಪಕರಣಗಳು, ಸಕಲ ಐಹಿಕ ಭೋಗಗಳನ್ನು ಅನುಭವಿಸುವ ಅವಕಾಶ, ಉನ್ನತ ಶಿಕ್ಷಣಕ್ಕೆ ಹೇಳಿ ಮಾಡಿಸಿದಂತಹ ವಿಶ್ವವಿದ್ಯಾಲಯಗಳು, ಫ್ಯಾಷನ್ನಿನಲ್ಲಿ ಮುಂದೆ ಮುಂದೆ ಸಾಗುತ್ತಿರುವ, ಸ್ವತಂತ್ರ ಮನೋಭಾವದ ಜನ ಇತ್ಯಾದಿ ಇತ್ಯಾದಿ. ಜಗತ್ತಿನ ಮೆಲ್ಟಿಂಗ್ ಪಾಟ್ ಎಂದೂ ಅಮೆರಿಕವನ್ನು ಕರೆಯುತ್ತಾರೆ. ಅಂದರೆ, ಜಗತ್ತಿನ ಎಲ್ಲ ದೇಶಗಳ ಜನರೂ ಇಲ್ಲಿ ವಾಸಿಸುತ್ತಾರೆ. ಇದರ ಏಳಿಗೆಗಾಗಿ, ವಿಜ್ಞಾನ ಮತ್ತಿತರ ಸಂಶೋಧನೆಗಾಗಿ ಜಗತ್ತಿನ ಎಲ್ಲರೂ ತಮ್ಮ ಬುದ್ಧಿಮತ್ತೆಯ ಕಾಣಿಕೆಯನ್ನು ಸಲ್ಲಿಸುತ್ತಿರುವುದೂ ಅಷ್ಟೇ ಸತ್ಯ. ಇಲ್ಲಿಯ ಅತ್ಯಾಧುನಿಕ ಜೀವನ ಶೈಲಿಯಿಂದ, ಕೆಲಸದ ಅತೀವ ಒತ್ತಡದಿಂದ ತಪ್ಪಿಸಿಕೊಳ್ಳಲು ವಿಶ್ರಾಂತಿ ಧಾಮಗಳಿಗೆ, ಹಚ್ಚ ಹಸುರಿನ ಪರಿಸರದಿಂದ ತುಂಬಿದ ಪ್ರಕೃತಿ ದೇವಿಯ ಮಡಿಲಿಗೆ ಓಡಿಹೋಗುವುದೂ ಅತ್ಯಂತ ವಾಸ್ತವದ ಸಂಗತಿ. ಅಂತಹ ಅನೇಕ ಸ್ಥಳಗಳಿಗೆ ಇಲ್ಲಿ ಕೊರತೆಯೇನೂ ಇಲ್ಲ. ಶಾಂತಿ ಅರಸಿ ಬರುವ ಪ್ರವಾಸಿಗಳ ಎಲ್ಲ ರೀತಿಯ ಪೂರೈಕೆಗಳನ್ನು ಮಾಡುವ, ಪ್ರವಾಸೋದ್ಯಮವನ್ನೇ ಪ್ರಮುಖ ಆದಾಯವನ್ನಾಗಿ ಮಾಡಿಕೊಂಡಿರುವ ಸ್ಥಳಗಳೂ ಇಲ್ಲಿವೆ. ಅಂತಹುಗಳಲ್ಲಿ ಹವಾಯಿ ದ್ವೀಪಗಳ ಸಮೂಹವೂ ಒಂದು.

ಹವಾಯಿ ಎಂದೊಡನೆ ನಮ್ಮ ನೆನಪಿಗೆ ಬರುವುದು ಕಿವಿಗೆ ದೇವಗಣಿಗಿಲೆ ಹೂವನ್ನು ಸಿಕ್ಕಿಸಿಕೊಂಡು ಕೈಬೀಸಣಿಗೆ ಬೀಸುತ್ತಾ ಹವಾ ಹವಾಯಿ.. ಎಂಬ ಹಾಡಿಗೆ ಹೆಜ್ಜೆ ಹಾಕುವ ಚಿತ್ರನಟಿ ಶ್ರೀದೇವಿ! ಅಮೆರಿಕದ ಸಂಯುಕ್ತ ರಾಜ್ಯಗಳಲ್ಲಿ ಒಂದಾದ ಹವಾಯಿಯು ಐದಾರು ದ್ವೀಪಗಳ ಸಮೂಹ. ಪೆಸಿಫಿಕ್ ಸಾಗರದ ತಪ್ಪಲಿನಲ್ಲಿ ಅಥವಾ ಮಧ್ಯ ದಲ್ಲಿ ಇರುವ ಇವುಗಳಲ್ಲಿ ಪ್ರಕೃತಿ ದೇವಿಯು ಶಾಶ್ವತವಾಗಿ ನೆಲೆಸಿದ್ದಾಳೇನೋ ಎಂದು ಅನಿಸುವಷ್ಟರ ಮಟ್ಟಿಗೆ ಚೆಲುವು ಇಲ್ಲಿ ತುಂಬಿದೆ. ಅತೀವ ಒತ್ತಡದ, ಯಾಂತ್ರಿಕ ಜೀವನದ ಬೇಸರದಿಂದ ತಪ್ಪಿಸಿಕೊಳ್ಳಲು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಇಲ್ಲಿಗೆ ಬಂದು ಇಳಿಯುತ್ತಾರೆ. ಅದೆಷ್ಟೇ ಜನರು ಬಂದರೂ ಅವರನ್ನು ಎಲ್ಲ ರೀತಿಯ ಅನುಕೂಲಗಳಿಂದ ತೃಪ್ತಿಪಡಿಸಲು ಅಸಂಖ್ಯಾತ ರೆಸಾರ್ಟ್‌ಗಳು ಸಿದ್ಧವಾಗಿರುತ್ತವೆ. ಇಲ್ಲಿ ಬರುವಾಗ ನಿಮ್ಮ ಜೇಬನ್ನು ತುಂಬಿಸಿಕೊಂಡು ಬರುವುದಷ್ಟೇ ನಿಮ್ಮ ಕೆಲಸ. ಅದನ್ನು ಖಾಲಿ ಮಾಡಿಸುವುದು ಅವರ ಕೆಲಸ. ಪ್ರತಿಯೊಂದು ರೆಸಾರ್ಟ್‌ಗಳೂ ಪೈಪೋಟಿ ಎಂಬಂತೆ ಗ್ರಾಹಕರಿಗೆ ಹೆಚ್ಚು ಹೆಚ್ಚು ಅನುಕೂಲಗಳನ್ನು ಮಾಡಿಕೊಡುತ್ತವೆ. ಪಾತ್ರೆಗಳು, ಒಲೆ, ಅವನ್, ಫ್ರಿಜ್ ಮುಂತಾದವುಗಳಿಂದ ಸುಸಜ್ಜಿತವಾದ ಅಡುಗೆ ಮನೆಯೂ ಅದರಲ್ಲಿ ಸೇರಿರುತ್ತದೆ. (ಇಲ್ಲಿ ಆಹಾರ ವಸ್ತುಗಳು ಬಲು ತುಟ್ಟಿ). ಸಮುದ್ರ ತೀರವು ನಿಮ್ಮ ರೂಮಿಗೇ ಕಾಣುವಂತಿದ್ದಲ್ಲಿ, ಅದು ಮತ್ತಷ್ಟು ಮೆರುಗನ್ನು ನೀಡುತ್ತದೆ. ಬೇಕಿದ್ದಲ್ಲಿ ನೀವು ಸಮುದ್ರ ತೀರಕ್ಕೆ ಹೋಗಬಹುದು ಅಥವಾ ರೆಸಾರ್ಟಿನ ಈಜುಕೊಳದಲ್ಲಿಯೇ ಈಜಾಡಬಹುದು. ನಿಮ್ಮ ಕೊಠಡಿಯಲ್ಲೇ ಅಡುಗೆ ಮಾಡಿಕೊಳ್ಳಬಹುದು, ಸಂಜೆಯ ತಂಗಾಳಿಯಲ್ಲಿ ಹೊರಗೆ ಬಾರ್ಬೆಕ್ಯೂ ಮಾಡಿಕೊಂಡು ಚಪ್ಪರಿಸಬಹುದು. ಗಾಲ್ಫ್ ಆಡಬಹುದು, ಅಲ್ಲಿರುವ ಗುಡ್ಡ ಬೆಟ್ಟಗಳಿಗೆ ಚಾರಣ ಮಾಡಬಹುದು. ಅಥವಾ ನೀರಿಗೆ ಸಂಬಂಧಿಸಿದ ಅನೇಕ ಕ್ರೀಡೆಗಳಲ್ಲಿ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಬಹುದು. ದೋಣಿ, ಹಡಗುಗಳಲ್ಲಿ ಸಮೀಪದ ಸ್ಥಳಗಳಿಗೆ ಭೇಟಿ, ಸರ್ಫಿಂಗ್, ಕಯಾಕಿಂಗ್, ಸ್ಕೂಬಾ ಡೈವಿಂಗ್ ಮುಂತಾದ ನೀರಿನ ಅಲೆಗಳೊಡನೆ ಅಲೆಯಾಗಿ ಆಡುವ ಕ್ರೀಡೆಗಳಿಂದ ಸಂತೋಷಿಸಬಹುದು. ಅಲ್ಲಿನ ಇತಿಹಾಸ ತಿಳಿಯಲು ಆಸಕ್ತಿ ಇದ್ದರೆ, ಮ್ಯೂಸಿಯಮ್ಮಿಗೆ ಭೇಟಿ ಕೊಡಬಹುದು. ಅಲ್ಲಿ ನಿಮಗೆ ಅಚ್ಚರಿಯ ವಿಷಯವೊಂದು ತಿಳಿದು ಬರುತ್ತದೆ. ಅದೆಂದರೆ, ಈ ದ್ವೀಪಕ್ಕೆ ವಲಸೆ ಬಂದ ಮೊದಲಿಗರು ಭಾರತೀಯರು ಎಂಬುದು!

ಬದುಕಿನ ಜಂಝಾಟದಿಂದ ಬೇಸರಗೊಂಡು, ಮನಶ್ಶಾಂತಿಯನ್ನು ಅರಸುವ ಮತ್ತೊಂದು ರೀತಿಯ ಜನರೂ ಅನೇಕರಿರುತ್ತಾರೆ. ಅಂತಹವರು ಆಧ್ಯಾತ್ಮ ಕೇಂದ್ರಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಅಂತಹವರಿಗಾಗಿಯೇ ಇರುವ ಹಿಂದೂ ಮಂದಿರದ ಬಗ್ಗೆ ತಿಳಿಸುತ್ತೇನೆ. ಹವಾಯಿ ದ್ವೀಪದಲ್ಲಿ 1970ರಲ್ಲಿ ಕಟ್ಟಿರುವ ಈ ಶಿವನ ದೇವಾಲಯವು ಪ್ರಕೃತಿ ಸೌಂದರ್ಯವನ್ನೆಲ್ಲವನ್ನೂ ತನ್ನ ಮಡಿಲಿನಲ್ಲಿಯೇ ಬಚ್ಚಿಟ್ಟು ಕೊಂಡಿದೆಯೇನೋ ಎಂದೆನಿಸದೆ ಇರದು. ಅಷ್ಟು ರಮಣೀಯ ಪರಿಸರದಲ್ಲಿ ಇರುವ ದೇವಾಲಯ ಕಾಣಸಿಗುವುದು ಬಲು ಅಪ ರೂಪವೇ ಸರಿ. ಅಲ್ಲಿ ಸಮೃದ್ಧವಾಗಿ ಬೆಳೆದಿರುವ ಅನೇಕ ಬಣ್ಣದ ದಾಸವಾಳ, ತಾವರೆ, ನೈದಿಲೆ, ಸಂಪಿಗೆ, ಸಪೋಟ, ಮಾವು, ಹಲಸು, ಬಾಳೆ, ಬಿಲ್ವ, ಬೇವು, ನೆಲ್ಲಿ, ವಿಳ್ಳೆದೆಲೆ ಮತ್ತು ಅಡಿಕೆಗಳನ್ನು ನೋಡಿದಾಗ ನಾವು ಭಾರತಕ್ಕೆ ಬಂದುಬಿಟ್ಟಿದ್ದೀವೇನೋ ಎಂದು ಅನಿಸಿದರೆ ಆಶ್ಚರ್ಯವಿಲ್ಲ. ದಕ್ಷಿಣ ಭಾರತ ಮತ್ತು ಶ್ರೀಲಂಕಾದ ಶೈವ ಪದ್ಧತಿಗೆ ಸೇರಿದ ಈ ದೇವಾಲಯವು ಜಗತ್ತಿನ ಎಲ್ಲ ಆಧ್ಯಾತ್ಮ ಪಿಪಾಸುಗಳ ದಾಹವನ್ನು ತೀರಿಸುವತ್ತಲೂ ಕಾರ್ಯನಿರ್ವಹಿಸುತ್ತಿದೆ. ಇದು ಕೇವಲ ದೇವಾಲಯ ಅಷ್ಟೇ ಅಲ್ಲ. ಅದೊಂದು ಹಿಂದೂ ಧರ್ಮವನ್ನು ತಿಳಿಯ ಬಯಸುವವರಿಗೆ, ಹಿಂದೂ ಧರ್ಮವನ್ನು ಅನುಸರಿಸಬಯಸು ವವರಿಗೆ, ಸಾತ್ವಿಕ ಬದುಕನ್ನು ಬದುಕಬೇಕೆನ್ನುವವರಿಗೆ ಸದಾ ಸ್ವಾಗತ ಕೋರುವ ಆಶ್ರಮವಾಗಿದೆ. ಪಟ್ಟಣದ ಗೌಜು ಗದ್ದಲದಿಂದ ದೂರಾಗಿ, ಸುಮಾರು 382 ಎಕರೆ ಜಾಗದಲ್ಲಿ ವನ, ಕೊಳ, ಹೂದೋಟ, ಜಲಪಾತ, ತೋಪು, ಮೆಳೆ ಮೊದಲಾದ ಪರಿಸರದಲ್ಲಿ ಅಸಂಖ್ಯಾತ ಗಿಡ, ಮರ, ಬಳ್ಳಿ, ಪಕ್ಷಿಗಳು ತುಂಬಿವೆ. ಅತ್ಯಂತ ಪ್ರಶಾಂತ ವಾತಾವರಣದಲ್ಲಿ ಶಿವನ ಮತ್ತು ನಟರಾಜನ ಎರಡು ಭವ್ಯ ದೇಗುಲಗಳು ಮನಸ್ಸಿಗೆ ಶಾಂತಿ ನೀಡುತ್ತವೆ. ಶೈವಾಗಮದ ಪದ್ಧತಿಯಂತೆ ಅಲ್ಲಿ ನಿತ್ಯ ಪೂಜೆ ನಡೆಯುತ್ತದೆ. ಸಂನ್ಯಾಸಿಗಳ ಗುಂಪು ಅಲ್ಲಿನ ಸಕಲ ಕಾರ್ಯಾಚರಣೆಗಳೂ ಶಿಸ್ತುಬದ್ಧವಾಗಿ ನಡೆಯುವಂತೆ ನೋಡಿಕೊಳ್ಳುತ್ತದೆ. ಪ್ರವಾಸಿಗರು ಅಲ್ಲಿ ಬಂದಾಗ ಅವರನ್ನು ಸ್ಥಳ ಪರಿಚಯ ಮಾಡಿಸುವ ಸಲುವಾಗಿ, ಅವರು ಹೊರಡಿ ಸುವ ತ್ರೈವಾರ್ಷಿಕ ಪತ್ರಿಕೆಯ ಕೆಲಸ, ತೋಟದ ಉಸ್ತುವಾರಿ, ಶಿಕ್ಷಣ ಮತ್ತು ನಿರ್ವಹಣೆ, ವೆಬ್‌ಸೈಟ್ ಮತ್ತು ಪ್ರಕಟಣೆ, ಅಡುಗೆ ಮತ್ತಿತರ ಕಾರ್ಯ ಎಲ್ಲವನ್ನೂ ಅಲ್ಲಿರುವ ಬ್ರಹ್ಮಚಾರಿಗಳು ನೋಡಿಕೊಳ್ಳುತ್ತಾರೆ. ಸದ್ಗುರು ಸುಬ್ರಮಣಿಯಸ್ವಾಮಿ ಎಂಬುವರಿಂದ ಸ್ಥಾಪಿಸಲ್ಪಟ್ಟ ಈ ಆಶ್ರಮವು ಇಂದು ಅವರ ಶಿಷ್ಯರಾದ ಸದ್ಗುರು ಬೋಧಿನಾಥ ವೇಲನ್‌ಸ್ವಾಮಿ ನೇತೃತ್ವದಲ್ಲಿ ಮುಂದುವರೆಯುತ್ತಿದೆ. ಸದ್ದುಗದ್ದಲವಿಲ್ಲದೆ ಹಿಂದೂ ಧರ್ಮದ ಪ್ರಚಾರ ಮಾಡುತ್ತಿರುವ ಅವರ ಕಾರ್ಯ ನಿಷ್ಠೆ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ.

ಭಾರತದ ಶಿಲ್ಪಿಗಳಿಂದ ಕೆತ್ತಲ್ಪಟ್ಟಿರುವ ಶಿವಲಿಂಗ, ನಟರಾಜ, ಗಣೇಶ ಮತ್ತು ಕಾರ್ತಿಕೇಯರ ವಿಗ್ರಹಗಳು ಅತ್ಯಂತ ಸುಂದರವಾಗಿವೆ. ಗುಡ್ಡವನ್ನು ಏರುವಾಗ ಮೊದಲಿಗೇ ಸಿಗುವ ನಟರಾಜನ ಗುಡಿಯಲ್ಲಿ ಶಿವ ತಾಂಡವದ 108 ಭಂಗಿಗಳ ಹಿತ್ತಾಳೆಯ ವಿಗ್ರಹಗಳು ಸುತ್ತಲೂ ಕಂಗೊಳಿಸುತ್ತವೆ. ಹೊರಬಂದು ದಟ್ಟವಾದ ಮರಗಳ ನೆರಳಿನಲ್ಲಿ ಹೆಜ್ಜೆ ಹಾಕಿದರೆ ಸುಂದರ ಗಣೇಶನ ವಿಗ್ರಹವು ನಿಮ್ಮ ಆಶ್ರಮದ ಟೂರಿಗೆ ಸ್ವಾಗತ ಕೋರುವಂತಿದೆ. ಹೆಜ್ಜೆ ಹೆಜ್ಜೆಗೆ ಸಿಗುವ ವಿವಿಧ ರೀತಿಯ ಗಿಡ, ಮರ, ಹೂ ಹಣ್ಣುಗಳನ್ನು ನೋಡುತ್ತಾ ಮೇಲೆ ಸಾಗಿದಾಗ ಸಿಗುವುದೇ ಶಿವನ ಗುಡಿ. ವಿಶಾಲವಾದ ಗುಡಿಯ ಪ್ರಶಾಂತ ವಾತಾವರಣ ಮನಸಿಗೆ ನೆಮ್ಮದಿ ನೀಡುತ್ತದೆ. ದಾರಿಯುದ್ದಕ್ಕೂ ಅಲ್ಲಲ್ಲಿ ಸಿಗುವ ರುದ್ರಾಕ್ಷಿ ಮರಗಳು ನಿಮ್ಮನ್ನು ಆಕರ್ಷಿಸಿದರೆ, ಅಲ್ಲಿಯೇ ಅನತಿ ದೂರದಲ್ಲಿರುವ ರುದ್ರಾಕ್ಷಿ ವನದ ಬಗ್ಗೆ ನಿಮಗೆ ಮಾಹಿತಿ ಸಿಗುತ್ತದೆ. ಬಹುಶಃ ಜಗತ್ತಿನ ಏಕೈಕ ರುದ್ರಾಕ್ಷಿ ಅರಣ್ಯ ಇದು. ಇದರ ಉಸ್ತುವಾರಿಯನ್ನೂ ಸಹ ಈ ಸಂನ್ಯಾಸಿಗಳೇ ನೋಡಿಕೊಳ್ಳುತ್ತಾರೆ. ಕಡು ನೀಲಿ ಬಣ್ಣದ ರುದ್ರಾಕ್ಷಿ ಇಲ್ಲಿಯ ವಿಶೇಷ. ಎತ್ತರವಾದ ಹನುಮಂತನ ವಿಗ್ರಹವು ಹಸಿರು ಕಲ್ಲಿನಿಂದ ಕೆತ್ತಲ್ಪಟ್ಟಿದೆ. ದೇವಾಲಯ, ಅಲ್ಲಿರುವ ಸಸ್ಯ ರಾಶಿ ಇದೆಲ್ಲವನ್ನೂ ಗುರುದೇವರೇ ಇಲ್ಲಿ ಸ್ಥಾಪಿಸಿರುವುದು. ಗೌರವದಿಂದ ಮನ ಅವರಿಗೆ ತಲೆ ಬಾಗುತ್ತದೆ. ನೀವು ಅಮೆರಿಕಾಗೆ ಹೋದಾಗ ತಪ್ಪದೇ ಹವಾಯಿ ದ್ವೀಪಗಳಿಗೆ ಭೇಟಿ ಕೊಡುವುದನ್ನು ಮರೆಯಬೇಡಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಸಿದರೆ

ಪ್ರಜ್ಞಾವಂತ ಜನತೆಯಿಂದ ಕಾಂಗ್ರೆಸ್‌ಗೆ ತಕ್ಕ ಪಾಠ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭವಿಷ್ಯ

ಮೈಸೂರು,ಏ.18(ಪಿಎಂ)– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾಗಬೇಕಾದರೆ ಆಯಾ ಕಾಲಕ್ಕೆ ಸರಿಯಾಗಿ ಚುನಾವಣೆಗಳು ನಡೆಯಬೇಕು. ಆದರೆ ರಾಜಕಾರಣದ ಕಾರಣಕ್ಕಾಗಿ ಈ ರಾಜ್ಯ ಸರ್ಕಾರ, ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿದೆ. ಚುನಾವಣೆ ನಡೆಸಿದರೆ ಕಾಂಗ್ರೆಸ್ ಅನ್ನು ಪ್ರಜ್ಞಾವಂತ ಮೈಸೂರು ಜನತೆ ಸಂಪೂರ್ಣವಾಗಿ ತಿರಸ್ಕಾರ ಮಾಡುತ್ತಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಕರ್ನಾಟಕ ಪ್ರದೇಶ ಜನತಾದಳ (ಜಾತ್ಯಾತೀತ/ಜೆಡಿಎಸ್) ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ಮೈಸೂರು ನಗರ ಜನರೊಂದಿಗೆ ಜನತಾದಳ' ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಚುನಾವಣೆ ನಡೆದು 11 ವರ್ಷಗಳೇ ಕಳೆದಿವೆ. ಚುನಾವಣೆ ಮಾಡಲೇಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶನವಿದ್ದರೂ ಬೆಂಗಳೂರು ನಗರದಲ್ಲಿ ಚುನಾವಣೆ ನಡೆಸಲು ಕಾಂಗ್ರೆಸ್ ಸರ್ಕಾರ ಹಿಂದೇಟು ಹಾಕುತ್ತಿದೆ. ರಾಜ್ಯ ಸರ್ಕಾರದ ಮೂರು ವರ್ಷಗಳ ದುರಾಡಳಿತ, ಭ್ರಷ್ಟಾಚಾರ, ವೈಫಲ್ಯಗಳು ಮೈಸೂರು ಜನತೆಗೆ ಗೊತ್ತಿದೆ. ಮೈಸೂರು ನಗರ ಪಾಲಿಕೆ ಚುನಾವಣೆ ನಡೆಸಿದರೆ ಇಲ್ಲಿನ ಜನತೆ ಕಾಂಗ್ರೆಸ್ ಅನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡುತ್ತಾರೆ. ಇದೇ ಕಾರಣಕ್ಕೆ ಚುನಾವಣೆ ನಡೆಸುತ್ತಿಲ್ಲ ಎಂದು ದೂರಿದರು.

ಮೈಸೂರು ಪಾಲಿಕೆ ಚುನಾವಣೆ ನಡೆಸದೇ ಗ್ರೇಟರ್ ಮೈಸೂರು ಎನ್ನುತ್ತಿದ್ದಾರೆ. ಮೈಸೂರನ್ನು ಇನ್ನೇನು ಗ್ರೇಟ್ ಮಾಡುವುದಿದೆ. ಮೈಸೂರು ಮಹಾರಾಜರಿಗಿಂತಲೂ ಇವರಿಗೆ ದೂರದೃಷ್ಟಿ ಇದೆಯೇ? ಮೈಸೂರು ನಗರ ಪಾಲಿಕೆ ಚುನಾವಣೆ ನಡೆಯದ ಕಾರಣ ಅಧಿಕಾರಿಗಳು ಯಾವ ಕೆಲಸ ಮಾಡುತ್ತಿಲ್ಲ. ಈ ರಾಜ್ಯ ಸರ್ಕಾರದ ನಡೆ ಅತ್ಯಂತ ಖಂಡನೀಯ ಎಂದು ವಾಗ್ದಾಳಿ ನಡೆಸಿದರು.

ನಿನ್ನೆ ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಯಿತು. ಮಹಿಳಾ ಮೀಸಲಾತಿ ಹೆಚ್.ಡಿ. ದೇವೇಗೌಡರ ಅಂದಿನ ಕನಸು. ಅದನ್ನು ಇಂದಿನ ಪ್ರಧಾನಿಗಳು ನನಸು ಮಾಡಲು ಹೊರಟಿದ್ದರು. ಆದರೆ ಕಾಂಗ್ರೆಸ್ ಸದಸ್ಯರಿಂದ ಇದಕ್ಕೆ ಸೋಲಾಯಿತು. ನಿಜಕ್ಕೂ ಮಹಿಳೆಯರ ಸಬಲೀಕರಣ ಎಂದರೆ ಗೃಹಲಕ್ಷ್ಮೀ ಯೋಜನೆ ಹಣದಲ್ಲಿ ಸಾಧ್ಯವೇ? ನಿಜವಾದ ಸಬಲೀಕರಣ ಅಂದರೆ ಮಹಿಳೆಯರ ಕೈಗೆ ಅಧಿಕಾರದ ಚುಕ್ಕಾಣಿ ಕೊಡಬೇಕು. ಕಾಂಗ್ರೆಸ್‌ನವರು ಮಹಿಳಾ ಮೀಸಲಾತಿ ವಿಚಾರದಲ್ಲಿ ಅಂದು ಕೂಡ ಹೆಚ್.ಡಿ.ದೇವೇಗೌಡರ ವಿರುದ್ಧವಾಗಿ ನಡೆದುಕೊಂಡರು. ಇಂತಹ ವಿಚಾರದಲ್ಲಿ ಕಾಂಗ್ರೆಸ್‌ನವರು ಸಣ್ಣತನದ ರಾಜಕಾರಣ ಮಾಡುತ್ತಿದ್ದಾರೆ ಎಷ್ಟು ಕೀಳುಮಟ್ಟಕ್ಕೆ ಇಳಿದಿದ್ದಾರೆ ಎಂದು ಯೋಚನೆ ಮಾಡಬೇಕಾಗುತ್ತದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಕುಮಾರಣ್ಣನವರ 20 ಹಾಗೂ 14 ತಿಂಗಳ ಆಡಳಿತವನ್ನು ರಾಜ್ಯದ ಜನತೆ ಸ್ಮರಿಸಿಕೊಳ್ಳುತ್ತಾರೆ. ರಾಜ್ಯದಲ್ಲಿ ಯಾವುದೇ ಮೂಲೆಗೆ ಹೋದರೂ ದುಷ್ಟರನ್ನು ಆಯ್ಕೆ ಮಾಡಿ ಅನುಭವಿಸುತ್ತಿದ್ದೇವೆ ಎನ್ನುತ್ತಿದ್ದಾರೆ. ಇಂತಹ ದುಷ್ಟರ ಕೈಗೆ ಮತ್ತೆ ಆಡಳಿತ ಕೊಟ್ಟರೆ, ನಾಡಿನ ಖಜಾನೆ ಖಾಲಿ ಮಾಡುತ್ತಾರೆ ಎಂಬ ಆತಂಕ ಕನ್ನಡ ನಾಡಿನ ಜನತೆಯಲ್ಲಿದೆ. ಸಂಸತ್‌ನಲ್ಲಿ ನಿಂತು ರಾಹುಲ್ ಗಾಂಧಿಯವರು ಹಿಂದುಳಿದ ವರ್ಗಕ್ಕೆ ನ್ಯಾಯ ಕೊಡಬೇಕು ಎಂದು ಚರ್ಚೆ ಮಾಡಿದರು. ದೇಶದಲ್ಲಿ ಕೇವಲ ಮೂರು ರಾಜ್ಯಗಳಲ್ಲಿ ಮಾತ್ರವೇ ಕಾಂಗ್ರೆಸ್ ಆಡಳಿತದಲ್ಲಿದ್ದು, ಈ ಪೈಕಿ ಸಿದ್ದರಾಮಯ್ಯ ಒಬ್ಬರೇ ಹಿಂದುಳಿದ ವರ್ಗದವರು. ಪಾಪ ಅವರ ಕುರ್ಚಿ ಪ್ರತಿನಿತ್ಯ ಅಲುಗಾಡುತ್ತಿದೆ. ಉಪಮುಖ್ಯಮಂತ್ರಿಗಳು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಬೇಕೆಂದು ಕಾಯುತ್ತಿದ್ದಾರೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಮೈಸೂರು ಸಂಸ್ಕೃತಿ ನಶಿಸಲು ಈ ಸರ್ಕಾರ ಕಾರಣವಾಗಿದೆ. ಮೈಸೂರು ಜಿಲ್ಲೆಯಲ್ಲಿ ಮಾದಕ ವಸ್ತುಗಳು ಪತ್ತೆಯಾಗಿರುವುದು ದೌರ್ಭಾಗ್ಯ. ಹೆಬ್ಬಾಳು ಕೈಗಾರಿಕ ಪ್ರದೇಶ, ರಿಂಗ್ ರಸ್ತೆಯಲ್ಲಿ ಡ್ರಗ್ಸ್ ಪತ್ತೆಯಾಯಿತು. ಇಷ್ಟೆಲ್ಲಾ ಆಗಬೇಕಾದರೆ ಕರ್ನಾಟಕ ಸರ್ಕಾರದ ಗುಪ್ತಚರ ಇಲಾಖೆ ಏನು ಮಾಡುತ್ತಿತ್ತು. ಗೃಹಮಂತ್ರಿಗಳನ್ನು ಕೇಳಿದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ ಎಂದು ಹರಿಹಾಯ್ದರು.

ಇದಕ್ಕೂ ಮುನ್ನ ಜೆಡಿಎಸ್ ನಗರಾಧ್ಯಕ್ಷರಾಗಿ ಎಸ್‌ಬಿಎಂ ಮಂಜು, ಜಿಲ್ಲಾಧ್ಯಕ್ಷರಾಗಿ ಅಶ್ವಿನ್‌ಕುಮಾರ್, ಜೆಡಿಎಸ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾಗಿ ಹೇಮಾವತಿ, ಜೆಡಿಎಸ್ ಯುವ ಘಟಕದ ನಗರಾಧ್ಯಕ್ಷರಾಗಿ ಮದನ್ ಪದಗ್ರಹಣ ಮಾಡಿದರು.

ಶಾಸಕ ಜಿ.ಡಿ.ಹರೀಶ್‌ಗೌಡ, ಎಂಎಲ್‌ಸಿಗಳಾದ ಮಂಜೇಗೌಡ, ವಿವೇಕಾನಂದ, ಮಾಜಿ ಶಾಸಕರಾದ ಕೆ.ಮಹದೇವು, ಡಾ.ಕೆ.ಅನ್ನದಾನಿ, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಮಾದೇಶ್ ಮತ್ತಿತರರು ಹಾಜರಿದ್ದರು. ಸಮಾವೇಶದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ನಡೆದ ಜೆಡಿಎಸ್ ಪಕ್ಷದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ನಗರ ಹಾಗೂ ಜಿಲ್ಲೆಯ ನೂತನ ಪದಾಧಿಕಾರಿಗಳು ಅಧಿಕಾರ ವಹಿಸಿಕೊಂಡರು.

ನಂಜರಾಜ ಬಹದ್ದೂರ್ ಛತ್ರ ಸಮೀಪದ ವಿನೋಬಾ ರಸ್ತೆ ಹಾಗೂ ದಿವಾನ್ಸ್ ರಸ್ತೆಯಲ್ಲಿ ಜೆಡಿಎಸ್ ಬಾವುಟ ಹಾಗೂ ಮುಖಂಡರ ಕಟೌಟ್‌ಗಳು ರಾರಾಜಿಸಿದವು. ಸಮಾವೇಶಕ್ಕೂ ಮುನ್ನ ಧನ್ವಂತರಿ ರಸ್ತೆ ಹಾಗೂ ದಿವಾನ್ಸ್ ರಸ್ತೆ ಜಂಕ್ಷನ್‌ನಿಂದ ಸಮಾವೇಶದ ಸ್ಥಳದವರೆಗೆ ಅದ್ದೂರಿ ಮೆರವಣಿಗೆ ನಡೆಯಿತು. ತೆರೆದ ವಾಹನದಲ್ಲಿ ಮೆರವಣಿಗೆಯುಲ್ಲಿ ಸಾಗಿದ ನಿಖಿಲ್ ಕುಮಾರ್‌ಸ್ವಾಮಿ ಅವರಿಗೆ ಜೆಸಿಬಿ ಹಾಗೂ ಕ್ರೇನ್ ಮೂಲಕ ಬೃಹತ್ ಹಾರಗಳನ್ನು ಸಮರ್ಪಿಸಿ ಕಾರ್ಯಕರ್ತರು, ಮುಖಂಡರು ಅಭಿಮಾನ ಮೆರೆದರು. ಮೆರವಣಿಗೆಯುಲ್ಲಿ ನಾನಾ ಕಲಾತಂಡಗಳು ಪಾಲ್ಗೊಂಡಿದ್ದವು. ಅಲ್ಲದೆ, ವಿವಿಧೆಡೆಯಿಂದ ಬೈಕ್ ಹಾಗೂ ಆಟೋಗಳಲ್ಲಿ ಕಾರ್ಯಕರ್ತರು ರ‍್ಯಾಲಿ ಮೂಲಕ ಸಮಾವೇಶದ ಸ್ಥಳಕ್ಕೆ ಆಗಮಿಸಿದರು.



ಮಹಿಳಾ ಮೀಸಲಾತಿ ಮಸೂದೆ ಸೋಲಿಗೆ ದೇಶದ ಮಹಿಳೆಯರಲ್ಲಿ ಕ್ಷಮೆ ಯಾಚಿಸಿದ ಪ್ರಧಾನಿ ಮೋದಿ

ಕಾಂಗ್ರೆಸ್ ಮಿತ್ರ ಪಕ್ಷಗಳಿಂದ ರಾಜಕೀಯ ಭ್ರೂಣಹತ್ಯೆ

ನವದೆಹಲಿ, ಏ.18–ಲೋಕಸಭೆಯಲ್ಲಿ ನಾರಿ ಶಕ್ತಿ ವಂದನಾ ಮಸೂದೆ ಫೇಲ್ ಆಗಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ದೇಶದ ಮಹಿಳೆಯರಲ್ಲಿ ಕ್ಷಮೆ ಯಾಚಿಸಿದರು.

ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ: ಶನಿವಾರ ಲೋಕಸಭೆಯಲ್ಲಿ ಮಸೂದೆ ಅಂಗೀಕಾರ ವಾಗದ್ದಕ್ಕೆ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಸೇರಿದಂತೆ ವಿಪಕ್ಷಗಳು ಚಪ್ಪಾಳೆ ತಟ್ಟುವ ಮೂಲಕ ದೇಶದ ಮಹಿಳೆಯರನ್ನು ಅವಮಾನಿಸಿವೆ. ನಾರಿಶಕ್ತಿಗೆ ಕಾಂಗ್ರೆಸ್ ಮತ್ತು ಡಿಎಂಕೆ ಅವಮಾನ ಮಾಡಿವೆ. ನಾರಿಶಕ್ತಿ ಮಸೂದೆ ಅಂಗೀಕಾರ ವಾಗದ್ದಕ್ಕೆ ವಿಪಕ್ಷಗಳು ಸಂಭ್ರಮಿಸುತ್ತಿವೆ ಎಂದು ಪ್ರಧಾನಿಗಳು ವಾಗ್ದಾಳಿ ನಡೆಸಿದರು.

ಮಹಾಪಾಪ ಮಾಡಿವೆ: 21ನೇ ಶತಮಾನದ ಮಹಿಳೆಯರು ಪ್ರತಿಯೊಂದು ಘಟನೆಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಎಂಬುದನ್ನು ವಿಪಕ್ಷಗಳು ಮರೆಯುತ್ತಿವೆ. ಮಸೂದೆಯನ್ನು ವಿರೋಧಿಸುವ ಮೂಲಕ ವಿಪಕ್ಷಗಳು ಮಹಾ ಪಾಪ ಮಾಡಿವೆ. ಈ ಮಸೂದೆ ಯಾರಿಂದಲೂ ಏನನ್ನು ಕಿತ್ತುಕೊಳ್ಳುತ್ತಿರಲಿಲ್ಲ. ಎಲ್ಲರಿಗೂ ಏನನ್ನಾದ್ರೂ ನೀಡುವ ಮಸೂದೆ ಇದಾಗಿತ್ತು ವಿಪಕ್ಷಗಳು ಜೊತೆಯಾಗಿ ಮಹಿಳೆಯರ ಹಕ್ಕುಗಳನ್ನು ಕಿತ್ತುಕೊಂಡು ನಾರಿಶಕ್ತಿಯನ್ನು ಕೊಲೆ ಮಾಡಿವೆ.

2029ರಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿತ್ತು. ದೇಶದ ಅರ್ಧದಷ್ಟು ಜನ ಸಂಖ್ಯೆಯ ಹಕ್ಕುಗಳನ್ನು ಖಚಿತಪಡಿಸಲು ನಾವು ಮುಂದಾಗಿದ್ದೆವು. ನಾರೀಶಕ್ತಿ ವಂದನ್ ಅಧಿ ನಿಯಮ್ ಈ ಕಾಲಘಟ್ಟದ ಅವಶ್ಯಕತೆ ಯಾಗಿದೆ. ಎಲ್ಲಾ ಕ್ಷೇತ್ರಗಳಿಗೂ ಸಮಾನ ಶಕ್ತಿ ನೀಡಲು ನಾವು ಪ್ರಯತ್ನಿಸಿದ್ವಿ ಎಂದು ಮೋದಿ ತಿಳಿಸಿದರು.

ರಾಜಕೀಯ ಭ್ರೂಣ ಹತ್ಯೆ: ಎಲ್ಲಾ ರಾಜ್ಯಗಳಿಗೂ ಒಂದೇ ಅನುಪಾತದಲ್ಲಿ ಶಕ್ತಿ ಹೆಚ್ಚಿಸುವ ಪ್ರಯತ್ನ ಇದಾಗಿತ್ತು. ಆದರೆ ಕಾಂಗ್ರೆಸ್ ಸೇರಿದಂತೆ ಇತರ ಪಕ್ಷಗಳು ಮಾಡಿದ್ದು ರಾಜಕೀಯ ಭ್ರೂಣಹತ್ಯೆ. ಈ ಭ್ರೂಣಹತ್ಯೆಯಲ್ಲಿ ಕಾಂಗ್ರೆಸ್, ಟಿಎಂಸಿ ಮತ್ತು ಡಿಎಂಕೆ ಕೂಡಾ ಅಪರಾಧಿಗಳು. ಈ ಮಸೂದೆ ಹಲವು ಬಾರಿ ವಿಫಲವಾಗಲು ಕಾಂಗ್ರೆಸ್ ಪಿತೂರಿ ನಡೆಸಿದೆ. ದೇಶವನ್ನು ದಾರಿ ತಪ್ಪಿಸಲು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯತ್ನಿಸುತ್ತಿವೆ. ಕಾಂಗ್ರೆಸ್ ತನ್ನ ಹಳೆಯ ತಪ್ಪುಗಳನ್ನು ಪುನರಾವರ್ತಿಸುವುದಿಲ್ಲ ಎಂದು ಭಾವಿಸಿದ್ದೆ ಆದರೆ ಮಹಿಳೆಯರ ಪರ ನಿಲ್ಲುವ ಅವಕಾಶವನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಕಾಂಗ್ರೆಸ್ ಇಂದು ಪ್ರಾದೇಶಿಕ ಪಕ್ಷಗಳನ್ನು ಅವಲಂಬಿಸಿರುವ ಒಂದು ಪರಾವಲಂಬಿ ಜೀವಿ ಎಂದು ಮೋದಿ ಟೀಕಿಸಿದರು.



ಕುಟುಂಬ ರಾಜಕಾರಣ ಬಯಸುವವರ ದ್ರೋಹ: ಕುಟುಂಬ ರಾಜಕಾರಣದ ಪಕ್ಷಗಳು ತಮ್ಮ ಕುಟುಂಬದವರನ್ನು ಬಿಟ್ಟು ಬೇರೆಯವರು ಬೆಳೆಯುವುದನ್ನು ಬಯಸುವುದಿಲ್ಲ. ದೇಶದ ಸ್ತ್ರೀಶಕ್ತಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳನ್ನು ಕ್ಷಮಿಸುವುದಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಈಗಾಗಲೇ ಅನೇಕ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ. ಕ್ಷೇತ್ರ ಪುನರ್ವಿಂಗಡಣೆ ಬಗ್ಗೆ ಕಾಂಗ್ರೆಸ್ ಸುಳ್ಳು ಪ್ರಚಾರ ಮಾಡುತ್ತಿದೆ. ಎಲ್ಲಾ ರಾಜ್ಯಗಳ ಸೀಟುಗಳು ಒಂದೇ ಅನುಪಾತದಲ್ಲಿ ಹೆಚ್ಚಾಗಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಕಾಂಗ್ರೆಸ್ ಜೊತೆ ನಿಂತ ಪ್ರಾದೇಶಿಕ ಪಕ್ಷಗಳು ತಮ್ಮ ರಾಜ್ಯಗಳ ಜನರಿಗೆ ಮೋಸ ಮಾಡಿವೆ ಎಂದು ಮೋದಿ ಆರೋಪಿಸಿದರು.

ತಮಿಳುನಾಡು ಮತ್ತು ಬಂಗಾಳದಲ್ಲಿ ಹೆಚ್ಚಿನ ಸಂಸದರು ಮತ್ತು ಶಾಸಕರನ್ನು ಆಯ್ಕೆ ಮಾಡುವ ಅವಕಾಶವಿತ್ತು. ಸಮಾಜವಾದಿ ಪಕ್ಷವು ಲೋಹಿಯಾ ವಾದವನ್ನು ಸಂಪೂರ್ಣವಾಗಿ ಕೈಬಿಟ್ಟಿದೆ. ದೇಶದ ಅತಿ ದೊಡ್ಡ ಸುಧಾರಣಾ ವಿರೋಧಿ ಪಕ್ಷವೆಂದರೆ ಅದು ಕಾಂಗ್ರೆಸ್. ಸುಧಾರಣೆ ಎಂಬ ಮಾತು ಕೇಳಿದ ತಕ್ಷಣ ಕಾಂಗ್ರೆಸ್ ಅಡ್ಡಿಪಡಿಸುತ್ತದೆ. ಮಾವೋವಾದವನ್ನು ಕೊನೆಗಾಣಿಸುವ ಪ್ರಯತ್ನಗಳನ್ನೂ ಕಾಂಗ್ರೆಸ್ ವಿರೋಧಿಸುತ್ತದೆ. ನಮ್ಮ ಈ ಹೋರಾಟ ಕಾಂಗ್ರೆಸ್‌ನ ನಕಾರಾತ್ಮಕ ರಾಜಕಾರಣದ ವಿರುದ್ಧವಾಗಿದೆ. ದೇಶದ ಎಲ್ಲಾ ಮಹಿಳೆಯರು ದುಃಖಿತರಾಗಿದ್ದಾರೆಂದು ನನಗೆ ತಿಳಿದಿದೆ, ನನಗೂ ದುಃಖವಾಗಿದೆ. ಮಸೂದೆಗೆ ಶೇ. 66ರಷ್ಟು ಮತಗಳು ಸಿಗಲಿಲ್ಲ, ಆದರೆ ಶೇ.100ರಷ್ಟು ಮಹಿಳೆಯರು ನಮ್ಮೊಂದಿಗಿದ್ದಾರೆ ಎಂಬುದು ನನಗೆ ಗೊತ್ತು. ಮತ್ತೊಮ್ಮೆ ಅವಕಾಶ ಸಿಗಲಿದೆ, ಈ ಪ್ರಯತ್ನವನ್ನು ನಾವು ನಿಲ್ಲಿಸುವುದಿಲ್ಲ ಎಂದು ಮೋದಿ ಭರವಸೆ ನೀಡಿದರು.

ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆ: ನರೇಂದ್ರ ಮೋದಿ ಸರ್ಕಾರ ಮಂಡಿಸಿದ್ದ ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಯು ನಿನ್ನೆ ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಸಿಗದೆ ಸೋಲು ಕಂಡಿದೆ. ಮಸೂದೆ ಪರವಾಗಿ 298 ಸಂಸದರು ಮತ ಹಾಕಿದರೆ, 230 ಮಂದಿ ವಿರೋಧಿಸಿದರು. ಸರ್ಕಾರದ ಎಲ್ಲಾ ಪ್ರಯತ್ನಗಳ ನಡುವೆಯೂ, ವಿರೋಧ ಪಕ್ಷಗಳು ಒಗ್ಗಟ್ಟಾಗಿ ನಿಂತು ತಿದ್ದುಪಡಿಯನ್ನು ವಿರೋಧಿಸಿದವು.

ಸಭಾ ಭವನ ಉದ್ಘಾಟನೆ



ಮೈಸೂರು ತಾಲೂಕಿನ ಇಲವಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸಭಾ ಭವನದ ನೂತನ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

2028ಕ್ಕೆ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗೇ ಆಗ್ತಾರೆ...

●ಮುಂದೊಂದು ದಿನ ನಿಖಿಲ್ ಕುಮಾರಸ್ವಾಮಿ ಸಹ ಸಿಎಂ ಆಗುತ್ತಾರೆ ●ಮೈಸೂರು ಜಿಲ್ಲೆಯಲ್ಲಿ ಸಾ.ರಾ.ಮಹೇಶರ ನೇತೃತ್ವದಲ್ಲಿ ಪಕ್ಷ ಕಟ್ಟೋಣ ●ಶಾಸಕ ಜಿ.ಡಿ.ಹರೀಶ್‌ಗೌಡರ ವಿಶ್ವಾಸದ ಮಾತು

ಮೈಸೂರು,ಏ.18(ಪಿಎಂ)– ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಸರ್ಕಾರ 2028ಕ್ಕೆ ಬಂದೇ ಬರುತ್ತದೆ. ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗೇ ಆಗುತ್ತಾರೆ ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.


ರಾಜ್ಯದಲ್ಲಿ ಹೆಚ್.ಡಿ.ದೇವೇಗೌಡ ಅಪ್ಪಾಜಿ ಅವರ ಆಶೀರ್ವಾದದೊಂದಿಗೆ ಕುಮಾರಸ್ವಾಮಿ ಸಾರಥ್ಯ, ನಿಖಿಲ್ ಕುಮಾರ್‌ಸ್ವಾಮಿ ಅವರ ನೇತೃತ್ವದಲ್ಲಿ ನಾವೆಲ್ಲರೂ ಸಹ ಪಕ್ಷ ಕಟ್ಟುತ್ತೇವೆ. ಅಂತೆಯೇ ಮೈಸೂರು ಜಿಲ್ಲೆಯಲ್ಲಿ ಸಾ.ರಾ.ಮಹೇಶ್ ಅವರ ನೇತೃತ್ವದಲ್ಲಿ ನಾವೆರಲ್ಲರೂ ಪಕ್ಷ ಸಂಘಟನೆಗೆ ಶ್ರಮಿಸಬೇಕಿದೆ ಎಂದರು.

ಮೈಸೂರಲ್ಲಿ ಜೆಡಿಎಸ್ ಶಕ್ತಿಯನ್ನು ನಮ್ಮ ಕಾರ್ಯಕರ್ತರು ತೋರಿಸಿದ್ದೇವೆ. 2028ಕ್ಕೆ ಕುಮಾರಸ್ವಾಮಿ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಬೇಕೆಂಬ ಆಶಯ ನಮ್ಮೆಲ್ಲರಲ್ಲೂ ಇದೆ. ಸಾ.ರಾ. ಮಹೇಶ್ ನೇತೃತ್ವದಲ್ಲಿ ಇಂದು ಕಾರ್ಯಕ್ರಮ ಮಾಡಿದ್ದೇವೆ. ಮುಂದೊಂದಿನ ನಿಖಿಲ್ ಕುಮಾರಸ್ವಾಮಿ ಅವರನ್ನು ಈ ರಾಜ್ಯದ ಮುಖ್ಯಮಂತ್ರಿಯಾಗಿ ನೋಡಬೇಕೆಂಬ ಆಶಯ ಹೊಂದಿದ್ದೇವೆ ಎಂದರು.

ನಿಖಿಲ್ ಅವರು ಈವರೆಗೆ ರಾಜ್ಯದಲ್ಲಿ 70 ಕ್ಷೇತ್ರಗಳಲ್ಲಿ ಸುತ್ತಿ ಬಂದು ಇಂದು ನಗರದಲ್ಲಿ ಅದ್ಭುತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಮೈಸೂರು ನಗರದಲ್ಲಿ ಜೆಡಿಎಸ್ ಎಲ್ಲಿದೆ ಎಂದು ಕೇಳುತ್ತಿದ್ದಾರೆ. ಈ ಸಮಾವೇಶದ ಮೂಲಕ ಮೈಸೂರಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನವಾಗಿದೆ ಎಂದರು.

ನಮ್ಮ ಪಕ್ಷ ಚಾಮರಾಜ, ಕೆಆರ್, ಎನ್‌ಆರ್ ಕ್ಷೇತ್ರಗಳಲ್ಲಿ ಹಿಂದೆ ಪ್ರಾಬಲ್ಯ ಹೊಂದಿತ್ತು. ಹಲವು ನಾಯಕರು ನಮ್ಮ ಪಕ್ಷದದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಮೈಸೂರಿನ ಮೂರೂ ಕ್ಷೇತ್ರಗಳಲ್ಲಿ ಸಹ ನಮ್ಮ ಪಕ್ಷ ಗೆದ್ದು ಶಾಸಕರನ್ನು ಕೊಟ್ಟಿದೆ. ಇದನ್ನು ನಾವು ಮರೆಯಬಾರದು ಎಂದರು.

ಅತ್ಯುನ್ನತ ಶ್ರೇಣಿ



ಮೈಸೂರು, ಏ.18(ಜಿಎ)–ಮೈಸೂರಿನ ಕುವೆಂಪುನಗರದ ವಿಜಯ ವಿಠಲ ಕಾಲೇಜಿನ ವಿದ್ಯಾರ್ಥಿ ಖುಷಿ ಆರ್.ಗೌಡ ದ್ವಿತೀಯ ಪಿಯು ಪರೀಕ್ಷೆಯಲ್ಲಿ 600 ಅಂಕಗಳಿಗೆ 582 ಅಂಕಗಳನ್ನು ಪಡೆದುಕೊಂಡು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಟಿ.ಆರ್.ರವಿ ಮತ್ತು ಪವಿತ್ರ ದಂಪತಿ ಪುತ್ರಿಯಾಗಿದ್ದಾಳೆ.

ಕನ್ನಡ 98, ಇಂಗ್ಲಿಷ್ 97, ಭೌತಶಾಸ್ತ್ರ 99, ರಸಾಯನ ಶಾಸ್ತ್ರ93, ಗಣಿತ 99, ಜೀವಶಾಸ್ತ್ರದಲ್ಲಿ 96 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಮನೆಗಳ್ಳತನ ; ಚಿನ್ನಾಭರಣ ದೋಚಿದ ಖದೀಮರು

ಮೈಸೂರು,ಏ.18(ಪಿಎಂ)– ಮನೆಯ ಕಿಟಕಿ ಸರಳು ಮುರಿದು ಒಳ ನುಗ್ಗಿರುವ ಖದೀಮರು ಅಂದಾಜು 110 ಗ್ರಾಂ ಚಿನ್ನಾಭರಣ ದೋಚಿರುವ ಘಟನೆ ಇಲವಾಲ ಬಳಿಯ ಹುಯಿಲಾಳು ಬೈಪಾಸ್ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ಬೆಳಕಿಗೆ ಬಂದಿದೆ.

ಜುಬೇರ್ ಎಂಬುವವರ ಮನೆಯಲ್ಲಿ ಈ ಕಳ್ಳತನ ನಡೆದಿದೆ. ಇವರು ನಾಲ್ಕು ದಿನಗಳ ಹಿಂದೆ ಕುಟುಂಬ ಸಮೇತ ಊರಿಗೆ ಹೋಗಿದ್ದರು. ಇಂದು ಮಧ್ಯಾಹ್ನ ಹಿಂತಿರುಗಿ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಇಲವಾಲ ಠಾಣಾ ಪೊಲೀಸರು, ಖದೀಮರ ಪತ್ತೆ ಶೋಧ ಕಾರ್ಯ ಆರಂಭಿಸಿದ್ದಾರೆ.

ಚೇಂದ್ರಿಮಾಡ ಬೇಬಿ ನಿಧನ



ಪೊನ್ನಂಪೇಟೆ, ಏ.18– ತಾಲೂಕಿನ ದೇವರಪುರ, ನೋಕ್ಯ ಗ್ರಾಮದ ಪೂಣಚ್ಚ ಅವರ ಧರ್ಮಪತ್ನಿ ಚೇಂದ್ರಿಮಾಡ ಬೇಬಿ(87) ಅವರು ಶನಿವಾರ ಸಂಜೆ ನಿಧನರಾದರು. ಇವರು ಪತಿ, ಮಕ್ಕಳಾದ ಕಿಶಿ ಚಿನ್ನಪ್ಪ, ಡಾ.ಸುನಿಲ್ ತಿಮ್ಮಯ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ(ಏ.19) ಮಧ್ಯಾಹ್ನ 2.30ಕ್ಕೆ ನೋಕ್ಯ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.4.2026 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್, ಕೊಲೆಸ್ಟ್ರಾಲ್, ಮಹಿಳೆಯರಲ್ಲಿ ಯೋನಿ ಸೋಂಕು, ಸಯಾಟಿಕ, ಗೃಧ್ರಸಿ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರೋಟರಿ ಜಯಪ್ರಕಾಶನಗರ, ರೋಟರಿ ಜಯಪ್ರಕಾಶನಗರ ಚಾರಿಟಬಲ್ ಟ್ರಸ್ಟ್, ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್, ಸ್ನೇಹನಿಧಿ ಪತ್ತಿನ ಸಹಕಾರ ಸಂಘ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ** : ಕಣ್ಣಿನ ಉಚಿತ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8 ರಿಂದ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು**: ಬಸವ ಜಯಂತಿ, ಬೆಳಗ್ಗೆ 8ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಬೆಳಗ್ಗೆ 8.30ಕ್ಕೆ ಮೆರವಣಿಗೆ, ದಿವ್ಯ ಸಮ್ಮುಖ: ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಮ್ಮುಖ: ಶ್ರೀ ನಟರಾಜ ಸ್ವಾಮೀಜಿ, ಶ್ರೀ ಗುರು ಶಾಂತ ಸ್ವಾಮೀಜಿ, ಮೆರವಣಿಗೆ ಉದ್ಘಾಟನೆ: ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪುಷ್ಪಾರ್ಚನೆ: ಸಚಿವ ಎಂ.ಬಿ.ಪಾಟೀಲ್, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಒಡೆಯರ್, ನೈಸ್ ಸಂಸ್ಥೆ ಎಂಡಿ ಅಶೋಕ್ ಖೇಣಿ, ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಜಿ.ಟಿ. ದೇವೇಗೌಡ, ಟಿ.ಎಸ್.ಶ್ರೀವತ್ಸ, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಡಿ.ರವಿಶಂಕರ್ ಮತ್ತಿತರರು. ಮಧ್ಯಾಹ್ನ 1ಕ್ಕೆ ಆರೋಗ್ಯ ತಪಾಸಣಾ ಶಿಬಿರ, ದಿವ್ಯ ಸಮ್ಮುಖ : ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಪರಶಿವ ಮೂರ್ತಿ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಮಧ್ಯಾಹ್ನ 1.30ಕ್ಕೆ ಹಿರಿಯ ಕಲಾವಿದರಾದ ಎಲ್. ಶಿವಲಿಂಗಪ್ಪ ಅವರು ರಚಿಸಿರುವ ವಚನ ಚಿತ್ರಗಳ ಪ್ರದರ್ಶನ, ದಿವ್ಯ ಸಮ್ಮುಖ : ಡಾ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಮಹಾದೇವ ಸ್ವಾಮೀಜಿ, ಉದ್ಘಾಟನೆ : ಹಿರಿಯ ಲೇಖಕ ಪ್ರೊ. ಸಿ. ನಾಗಣ್ಣ, ಸ್ಥಳ: ಸುಚಿತ್ರಾ ಆರ್ಟ್ ಗ್ಯಾಲರಿ; ಮಧ್ಯಾಹ್ನ 2 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ದಿವ್ಯ ಸಮ್ಮುಖ : ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಡಾ. ಪ್ರಿಯದರ್ಶಿನಿ ಈಶ್ವರ ಸಾಣೆ ಕೊಪ್ಪ, ಅಮಿತ್ ಪಾಪಣ್ಣ, ಉದ್ಘಾಟನೆ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಗಾಯಕಿ ಶಿವಾನಿ ಶಿವದಾಸ್, ಮಾದಯ್ಯ.

■ **ತುಮಕೂರಿನ ಧಾನ್ಯ ಪ್ರಕಾಶನ:** ಭೂಮಿಗೆ ರಾಗಿ ಬಂದಿದ್ದು ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕರಾಮುವಿ ಪ್ರಸಾರಾಂಗ ನಿರ್ದೇಶಕ ಡಾ.ಸಂತೋಷ್ ನಾಯಕ್, ಹಿರಿಯ ರೈತ ಹೋರಾಟಗಾರ್ತಿ ಕೆ.ಎಸ್.ನಂದಿನಿ ಜಯರಾಮ್, ಪ್ರಕಾಶಕಿ ಡಾ.ಅರುಂಧತಿ, ಲೇಖಕರಾದ ಜಿ.ಕೃಷ್ಣಪ್ರಸಾದ್, ಮಲ್ಲಿಕಾರ್ಜುನ ಹೊಸಪಾಳ್ಯ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ, ಅರವಿಂದ ಕಣ್ಣಿನ ಆಸ್ಪತ್ರೆ:** ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಮಂಡಿಮೊಹಲ್ಲಾ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30 ರವರೆಗೆ

■ **ಶ್ರೀ ಆಂಜನೇಯಸ್ವಾಮಿ ದೇವಸ್ಥಾನ** : ಶ್ರೀ ಸತ್ಯಪ್ರಮೋದ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶ್ರೀ ಜಯತೀರ್ಥ ವಿದ್ಯಾಪೀಠದ ಶ್ರೀ ಸತ್ಯಾಧ್ಯಾನಾಚಾರ್ಯ ಕಟ್ಟಿ, ಉಪಸ್ಥಿತರು : ಶ್ರೀ ವಿದ್ಯಾಧೀಶಾಚಾರ್ಯ ಗುತ್ತಲ್, ಪಂಡಿತ್ ಶ್ರೀ ಶಶೀಧರಾಚಾರ್ಯ, ಶ್ರೀ ಆನಂದತೀರ್ಥಾಚಾರ್ಯ ಜೆಮ್ಮಲಗಿ, ಶೀ ಪಾಂಡುರಂಗಾಚಾರ್ಯ ರೊಟ್ಟಿ, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಹೆಚ್.ವಿ.ರಾಜೀವ್, ಎನ್.ಎಂ.ನವೀನ್‌ಕುಮಾರ್, ಡಿ.ಟಿ.ಪ್ರಕಾಶ್, ಜಗನ್ನಾಥ ಶೆಣೈ, ಪ್ರೊ ಭಾಷ್ಯಂ ಸ್ವಾಮೀಜಿ, ಇಳೈ ಆಳ್ವಾರ್ ಸ್ವಾಮೀಜಿ, ಸ್ಥಳ: ರೈಲ್ವೆ ಮೈದಾನದ ಎದುರು, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10ಕ್ಕೆ.

■ **ಇಎಂಎಂಆರ್‌ಸಿ:** ಚಳವಳಿಗಳ ಸಂಗಾತಿ ಮಂಜುಳಾ ಮೇಡಂ ನೆನಪಿನ ಕಾರ್ಯಕ್ರಮ, ಚಿಂತಕ ಡಾ.ಬರಗೂರು ರಾಮಚಂದ್ರಪ್ಪರಿಂದ ಸಾಕ್ಷ್ಯಚಿತ್ರ ಮತ್ತು ಕದಿರು ಸಮಗ್ರ ಬರಹ ಕೃತಿ ಬಿಡುಗಡೆ, ಡಾ.ಸೋಮಶೇಖರ್‌ರಿಂದ 'ಮಹಿಳೆ ಕುರಿತು ಅಂಬೇಡ್ಕರ್ ಚಿಂತನೆಗಳು' ಉಪನ್ಯಾಸ, ನಿವೃತ್ತ ಪ್ರಾಧ್ಯಾಪಕಿ ಸುಕನ್ಯಾ ಮಾರುತಿ ಅವರಿಗೆ ಮಂಜುಳಾ ಮೇಡಂ ಪ್ರಶಸ್ತಿ ಪ್ರದಾನ, ಅಧ್ಯಕ್ಷತೆ: ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ರಿಂದ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್** : ಅಮೃತ ಮಹೋತ್ಸವ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ', ಸಂಜೆ 4.30 ರಿಂದ ಕಲಾ ಸಂದೇಶ್ ಪ್ರತಿಷ್ಠಾನದ ಸ್ಥಾಪಕ ವಿದ್ವಾನ್ ಸಂದೇಶ್ ಭಾರ್ಗವ್ ಅವರಿಂದ ನಟುವಾಂಗ ಕಾರ್ಯಾಗಾರ, ಮುಖ್ಯ ಅತಿಥಿಗಳು : ನಂದಿನಿ ನೃತ್ಯಾಲಯ ನಿರ್ದೇಶಕ ವಿದ್ವಾನ್ ಆರ್. ಕಣ್ಣನ್, ನೃತ್ಯ ಪ್ರದರ್ಶನಗಳು : ಭಾನುಮತಿ ನೃತ್ಯ ಕಲಾ ಮಂದಿರಂ ನಿರ್ದೇಶಕರಾದ ವಿದುಷಿ ಶೀಲಾ ಚಂದ್ರಶೇಖರ್, ರಾಸವೃಂದ ಕಲಾ ನಿರ್ದೇಶಕ ಡಾ. ರೋಹಿತ ಈಶ್ವರ್ ಮತ್ತು ತಂಡದಿಂದ, ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರದ ವಿದ್ಯಾರ್ಥಿಗಳಿಂದ ಶಂಕರ ಚರಿತಾಮೃತಂ–ಗೀತ ನೃತ್ಯರೂಪಕ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ನಟನ ರಂಗಶಾಲೆ:** ನಟನ ಪಯಣ ರೆಪರ್ಟರಿ ತಂಡದಿಂದ ಕಣಿವೆಯ ಹಾಡು ನಾಟಕ ಪ್ರದರ್ಶನ, ನಿರ್ದೇಶನ: ರಂಗತಜ್ಞ ಡಾ. ಶ್ರೀಪಾದ ಭಟ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಉದ್ಬೂರು ಹಾಡಿ, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಸಮಾಜ ಕಾರ್ಯ ಶಿಬಿರ, ಸಹ ಪ್ರಾಧ್ಯಾಪಕರಾದ ಡಾ. ಪಿ. ವನಿತಾರೆಡ್ಡಿ ಅವರಿಂದ ಪೋಷಣಾ ಜಾಗೃತಿ ಮತ್ತು ಸಮೀಕ್ಷೆ ಕುರಿತು ಉಪನ್ಯಾಸ, ಬೆಳಗ್ಗೆ 10.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಎ.ಶೋಭ, ವ್ಯಾಖ್ಯಾನ:ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಮತ್ತು ಸಂಜೆ 5.30 ಚುಟಿ ಚುಟಿ ಚುಟುಕ್ ಗುಳುಂ ಗುಟುಕ್ ಶಿಶುಗೀತೆಗಳ ಕಾರ್ಯಕ್ರಮ, 9.40 ನಮ್ಮ ಆರೋಗ್ಯ ವಿಶ್ವ ಲಿವರ್ ದಿನದ ಸಂದರ್ಭದಲ್ಲಿ ಲಿವರ್ ಅಂದರೆ ಯಕೃತ್ತಿನ ಆರೋಗ್ಯ, ಕಾಳಜಿ ಈ ಕುರಿತು ಮೈಸೂರಿನ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಡಾ. ಅರವಿಂದ್ ಪಿ.ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00 ಕೇಳಿಗಳಿಗಳೇ ನೇರ ಫೋನ್–ಇನ್ ಕಾರ್ಯಕ್ರಮ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಮೈಸೂರಿನ ವಿಜಯ ವಿಠ್ಠಲ ವಿದ್ಯಾಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಸಾಧನೆಯ ಸಹಿ–ಕಂಪನಿ ಕಾರ್ಯದರ್ಶಿ ದೇವಿಕಾ ಸತ್ಯನಾರಾಯಣ ಅವರೊಂದಿಗೆ ಮಾತುಕತೆ. ಇವರೊಂದಿಗೆ: ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ಪಾಂಡವಪುರ, ಲಕ್ಷ್ಮೀಸಾಗರದ ನಾಗಮ್ಮ ಮತ್ತು ಸಂಗಡಿಗರಿಂದ ಭತ್ತ ಕುಟ್ಟುವ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಎ.ಜೆ. ದಿವ್ಯಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಹೃದಯ ಪಲ್ಲವಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಏಕವ್ಯಕ್ತಿ ತಾಳಮದ್ದಲೆ–ಪ್ರಸಂಗ ಪ್ರಭಾವತಿ ಜೀವಪ್ರೀತಿ–ಪ್ರಸ್ತುತಿ ದಿವಾಕರ ಹೆಗಡೆ ಕೆರೆಹೊಂಡ, 4.45 ಚಿತ್ರಗೀತೆಗಳು, 6.50ಕೃಷಿರಂಗ: ಹಟ್ಟಿಹರಟೆ–ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್ ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ –ಭಾರತೀಯ ಚಿಂತನಾ ಪ್ರಸ್ಥಾನದಲ್ಲಿ ಸಿದ್ಧ ಸಾಹಿತ್ಯ ಈ ಕುರಿತು ಮಾತನಾಡುತ್ತಾರೆ ವಿಶ್ರಾಂತ ಪ್ರಾಂಶುಪಾಲರು ಹಾಗೂ ಲೇಖಕರು ಆದ ಬಿ.ಮಹೇಶ ಹರವೆ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಶಕುಂತಲಾ ನಾಟಕದ ಹಾಡುಗಳು, ಗಾಯಕರು – ಕಿರಗಸೂರು ರಾಜಪ್ಪ ಮತ್ತು ಸತ್ಯವತಿ, 9.30 ರಾಷ್ಟ್ರೀಯ ನಾಟಕ : ಮರಳಿ ಬಾ ತಾಯಿ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ –ಆರ್.ಶೆಂಗಮಲಂ–ವೀಣಾ ವಾದನ

ಮಂಗಳಮುಖಿ ಮೇಲೆ ಲೈಂಗಿಕ ದೌರ್ಜನ್ಯ: ಮೂವರ ಬಂಧನ; ಮತ್ತೊಬ್ಬನಿಗೆ ಶೋಧ


ಮೈಸೂರು,ಏ18(ಎಂಟಿವೈ)–ಮಂಗಳ ಮುಖಿಯೊಬ್ಬರನ್ನು ಆಟೋರಿಕ್ಷಾದಲ್ಲಿ ಅಪಹರಿಸಿ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣವನ್ನು ಮೇಟಗಳ್ಳಿ ಪೊಲೀಸರು ಘಟನೆ ನಡೆದ 24 ಗಂಟೆಯಲ್ಲೇ ಭೇದಿಸಿ, ಮೂವರನ್ನು ಬಂಧಿಸಿ ತಲೆಮರೆಸಿಕೊಂಡಿರುವ ಮತ್ತೊಬ್ಬನಿಗಾಗಿ ಶೋಧ ಮುಂದುವರೆಸಿದ್ದಾರೆ.

ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುವ ಮಂಗಳಮುಖಿಯೊಬ್ಬರು ಏ.16ರಂದು ರಾತ್ರಿ 11 ಗಂಟೆಯಲ್ಲಿ ಕುಂಬಾರ ಕೊಪ್ಪಲಿನ ಸ್ಮಶಾನದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅಲ್ಲಿಯೆ ಆಟೋರಿಕ್ಷಾವೊಂದರಲ್ಲಿದ್ದ ನಾಲ್ವರು, ಮಂಗಳಮುಖಿಯನ್ನು ಬಲವಂತವಾಗಿ ಆಟೋರಿಕ್ಷಾದಲ್ಲಿ ಕೂರಿಸಿಕೊಂಡು ಕಿಡ್ನಾಪ್ ಮಾಡಿದ್ದಾರೆ. ಬಳಿಕ ರಿಂಗ್ ರಸ್ತೆಯ ಖಾಸಗಿ ಕಾಲೇಜೊಂದರ ಬಳಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಲಾರಂಭಿಸಿದ್ದಾರೆ. ಈ ವೇಳೆ ಮಂಗಳಮುಖಿ ಕಿರುಚಾಡಿದ್ದಾರೆ. ಅದೇ ಸಮಯಕ್ಕೆ ಬೈಕ್ವೊಂದು ಬರುತ್ತಿರುವುದನ್ನು ಗಮನಿಸಿದ ಕಿರಾತಕರು ಮಂಗಳಮುಖಿಯನ್ನು ರಸ್ತೆಯಲ್ಲೇ ಬಿಟ್ಟು ಆಟೋ ರಿಕ್ಷಾದಲ್ಲಿ ಪರಾರಿಯಾಗಿದ್ದಾರೆ.

ಬೈಕ್ ಸವಾರನ ನೆರವಿನಿಂದ ಅಭಿಷೇಕ್ ವೃತ್ತದವರೆಗೆ ಡ್ರಾಪ್ ತೆಗೆದುಕೊಂಡ ಮಂಗಳಮುಖಿ ತನ್ನೊಂದಿಗೆ ವಾಸವಿರುವ ಮತ್ತೊಬ್ಬ ಮಂಗಳ ಮುಖಿಯನ್ನು ಕರೆಸಿಕೊಂಡು ಮನೆ ತಲುಪಿದ್ದಾರೆ. ತನ್ನ ಸಮುದಾಯ (ಮಂಗಳ ಮುಖಿ) ದವರೊಂದಿಗೆ ಚರ್ಚಿಸಿ, ಅಪಹರಣ ಹಾಗೂ ಲೈಂಗಿಕ ದೌರ್ಜನ್ಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಏ.17 ರಂದು ಮಧ್ಯಾಹ್ನ 1.45ಕ್ಕೆ ಮೇಟಗಳ್ಳಿ ಠಾಣೆಗೆ ಬಂದು ಅಪಹರಣ ಹಾಗೂ ಲೈಂಗಿಕ ದೌರ್ಜನ್ಯದ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ಅರುಣ್, ಕೆಲವು ಸಾಕ್ಷಿ ಹಾಗೂ ಸಿಸಿ ಕ್ಯಾಮರಾ ದೃಶ್ಯಾವಳಿ ನೆರವಿನಿಂದ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಕುಂಬಾರಕೊಪ್ಪಲಿನ ನಿವಾಸಿ ಗಳಾದ ಪವನ್, ಸುಶೀಲ್, ಹರ್ಷ ಹಾಗೂ ಮುರುಳಿ ಸೇರಿ ಮಂಗಳಮುಖಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಈ ನಾಲ್ವರು ಆರೋಪಿ ಗಳಲ್ಲಿ ಪವನ್, ಸುಶೀಲ್ ಹಾಗೂ ಹರ್ಷ ಬಂಧಿಸಿರುವ ಮೇಟಗಳ್ಳಿ ಪೊಲೀಸರು ತಲೆ ಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಮುರಳಿ ಪತ್ತೆಗೆ ಬಲೆ ಬೀಸಿದ್ದಾರೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.






DOCUMENT LOST

I Salauddin, R/a No. 1, 1st Cross, Old Mahadevapura Road, Udayagiri, Mysore, site No -74, Sale deed documents was lost near Kabir Temple Road on 18-4-2026 if any body finds this documents please contact to the below No.

9845902222







ಕಾಣೆಯಾಗಿದ್ದಾರೆ



ವಿಶ್ವನಾಥ್ ಶೆಟ್ಟಿ .ಬಿ.ವಿ

71 ವರ್ಷ 4.5 ಅಡಿ ಸಾದಾರಣ ಶರೀರ ಎಣ್ಣೆಗೆಂಪು ಬಣ್ಣ ಕಪ್ಪು ಬಿಳಿ ಕೂದಲು, ತಲೆ ಕೂದಲು, ತಲೆಯ ಮುಂಭಾಗ ಕೂದಲು ಇರುವುದಿಲ್ಲ, ಕನ್ನಡಕ ಧರಿಸಿರುತ್ತಾರೆ. ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾರೆ. ಬಿಳಿ ಬಣ್ಣದ ಚೆಕ್ಸ್ ಇರುವ ತುಂಬು ತೋಳಿನ ಶರ್ಟ್, ಗ್ರೇ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಇವರು 16-4-2026 ರಂದು ಬೆಳಿಗ್ಗೆ 11:00 ಗಂಟೆಗೆ ಹೊರ ಹೋದವರು ಇಲ್ಲಿಯ ವರೆಗೂ ವಾಪಾಸ್ಸು ಬಂದಿಲ್ಲ ಯಾರಾದರೂ ಇವರನ್ನು ಕಂಡಲ್ಲಿ ನಿಮ್ಮ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಮೊ: 988053165 ಸಂಪರ್ಕಿಸಿ

HOUSE FOR SALE

30x40, W/N Door, 2BHK, 8 years od, Single floor, Dattagalli, Mysore. Rs. 1.60 Crore Slightly Nego. Broker Excuse

9663166809

FOR SALE

New House 30x40 E/F, G/F at Hebbal

40 x 60 N/F Site at Vijayanagar 2nd stage

For Immediate Settlement. Genuine buyers contact:

Mob: 8050064828

SITE FOR SALE

8500 Sqft Corner commercial Plot @ Gokulam 3rd Stage Rs.13 Crore slightly negotiable. Clear Titles.

-:Contact:- 9845397832

Brokers excuse

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ,

ಲಲಿತ ಮಹಲ್ ರಸ್ತೆ, ಮೈಸೂರು-570011

ದೂ:0821-2522901/906 ಇ-ಮೇಲ್:sird-mysuru@ka.gov.in

SIRDPR/ADM/VEH/2/2026:E-53739 ದಿನಾಂಕ:18.04.2026

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು ಸಂಸ್ಥೆಗೆ ಹೊರಗುತ್ತಿಗೆ ಆಧಾರದ ಮೇಲೆ ಪ್ರತಿ ಕಿ.ಮೀ. ದರದಂತೆ ಚಾಲಕ ಸಹಿತ 03 ಕಾರ್ ಗಳನ್ನು ಹಾಗೂ ತರಬೇತಿಗೆ ಅವಶ್ಯಕತೆಗೆ ಅನುಗುಣವಾಗಿ ಕ್ಷೇತ್ರ ಭೇಟಿಗಾಗಿ ವಿವಿಧ ಮಾದರಿಯ ಕಾರ್/ಬಸ್ ಗಳನ್ನು 12 ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಕುರಿತು KTTP ಅಧಿನಿಯಮ-1999-2000 ರನ್ವಯ ಕರ್ನಾಟಕ ಸರ್ಕಾರದ e-procurement portal ಮೂಲಕ ಮಾತ್ರ ಏಜೆನ್ಸಿಗಳಿಂದ ಅಲ್ಪಾವಧಿ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ದಿನಾಂಕ:15.05.2026 ಸಂಜೆ 04.00 ಘಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https//www.kppt.karnataka.gov.in ರಲ್ಲಿ ಅರ್ಜಿಗಳನ್ನು ಪಡೆಯಬಹುದು ಅಥವಾ ಸಂಸ್ಥೆಯ ದೂರವಾಣಿ ಸಂಖ್ಯೆ 0821-2522903/906 ಅನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-ಉಪ ನಿರ್ದೇಶಕರು ಅನಸಾರಾಗ್ರಾ & ಪಂ ರಾಜ್ ಸಂಸ್ಥೆ ಮೈಸೂರು

DIPR/DDMYS/75KSMCA/066/2026-27

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಯಶೋದ ಕೋ ರಾಮಣ್ಣ ಎಸ್ ವಾಸ #1233, ಕೆಸರೆ 3ನೇ ಹಂತ, ಎನ್ ಆರ್ ಮೊಹಲ್ಲ, ಮೈಸೂರು. ರವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಆಸ್ತಿಯನ್ನು, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ನಗುವಿನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಮರಿಗೌಡ ರವರ ಧರ್ಮಪತ್ನಿಯಾದ ಶ್ರೀಮತಿ ರಾಣಿ ರವರುಗಳಿಂದ ಷೆಡ್ಯೂಲ್ ಆಸ್ತಿಯನ್ನು ಶುದ್ಧ ಕ್ರಯಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಸದರಿ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ಶ್ರೀ ಮರಿಗೌಡ ರವರ ಧರ್ಮಪತ್ನಿಯಾದ ಶ್ರೀಮತಿ ರಾಣಿ ರವರನ್ನು ಹೊರತು ಪಡಿಸಿ ಬೇರೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಸ್ವಾಧೀನಕ್ಕೆ ಸಂಬಂಧಿಸಿದಂತೆ ತಕರಾರು ಇದ್ದರೆ, ಈ ತಿಳುವಳಿಕೆ ನೀಡಿದ ಏಳು(7) ದಿನದೊಳಗೆ ಈ ಕೆಳಕಂಡ ಹೆಸರಿರುವ ಕಛೇರಿಯ ವಿಳಾಸಕ್ಕೆ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ಏಳು(7) ದಿನದೊಳಗೆ ಯಾವೂದೇ ತಕರಾರು ಬರದಿದ್ದ ಪಕ್ಷದಲ್ಲಿ ಸದರಿ ಷೆಡ್ಯೂಲ್ ಆಸ್ತಿಗೆ ಶ್ರೀ ಮರಿಗೌಡ ರವರ ಧರ್ಮಪತ್ನಿಯಾದ ಶ್ರೀಮತಿ ರಾಣಿ ರವರೇ ಸಂಪೂರ್ಣ ಹಕ್ಕುದಾರರೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ, ಎನ್. ಆರ್ ಮೊಹಲ್ಲಾ, ರಾಜೇಂದ್ರ ನಗರ, 6ನೇ ಅಡ್ಡರಸ್ತೆ, ಕೆಸರೆ (ಬೆಲವತ್ತ), ಸರ್ವೆ ನಂ:158/2ಆ14 ರಲ್ಲಿ ನಿರ್ಮಾಣ ಮಾಡಿರುವ ಮನೆ ನಂ:61 ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ :: ರಸ್ತೆ, ಪಶ್ಚಿಮಕ್ಕೆ :: ರಸ್ತೆ, ಉತ್ತರಕ್ಕೆ : ಖಾಸಗಿ ಸ್ವತ್ತು, ದಕ್ಷಿಣಕ್ಕೆ : ಸಿದ್ದಪ್ಪ ರವರ ಸ್ವತ್ತು.

ಸಹಿ/- ಅಜಿತ್ .ಟಿ ವಕೀಲರು,
KAR/1522/22 #437, ವಿಜಯನಗರ ರೈಲ್ವೆ ಲೇಔಟ್, ಮೈಸೂರು-570016
ದೂ : 9632377154



WANTED SUPERVISOR

ಬೇಕ್ ಕಂಪ್ಯೂಟರ್ ಗೊತ್ತಿರಬೇಕು ಉತ್ತಮ ಸಂವಹನ ಮತ್ತು ನಿರ್ವಹಣಾ ಕೌಶಲ್ಯ ಹಾಗೂ ಕನ್ನಡ ಮತ್ತು ಹಿಂದಿ ಭಾಷೆ ಗೊತ್ತಿರಬೇಕು. ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು ಸಮೀಪದ ನಿವಾಸಿಗಳಿಗೆ ಮೊದಲ ಆದ್ಯತೆ

8762016756, 8618864623



NEW 4 BHK HOUSE FOR SALE

VIJAYNAGAR 4TH STAGE, MYSORE

30×40 MUDA ALLOTTED SITE

WEST FACING

G+2 FLOORS:
GROUND FLOOR - PARKING
1ST FLOOR-2 BHK
2ND FLOOR - 2 BHK
PRIVATE LIFT

REGISTRATION READY

PRICE : ₹2.5 CR

PREMIUM QUALITY CONSTRUCTION | HIGH RENTAL DEMAND

CALL NOW : 81058 15051




ONLY ONE WAY TAXI CHARGE

MYSORE to BANGALORE City drop or Pick up

BANGALORE to MYSORE Airport drop or Pick up

MYSURU

9611177599



Mysuru's Most Trusted Developers

AKSHAYA TRITIYA FESTIVE OFFER

MUDA & DTCP APPROVED PLOTS @ Yelwala & Vidyaranyapuram

₹2,000/- Per Sqft Onwards

Book a Plot on or before 30th April 2026 and GET 100gms SILVER COIN FREE

Ambiens Krishna, Ambiens Mango Groove, KRS Elegance, Bhoomika PR Valley

Ready for Registration

Clear Titles | Prime Locations | Bank Loans Available

Call: 888-4155-123

ambiens.in

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 32 Lakhs 20x40 36 Lakhs 30x40 58 Lakhs Near St. Joseph School 20x40 - 48 Lakhs 30x50 - 89.5 Lakhs	Near KSRTC Bus Depot. 20x30 24 Lakhs 20x40 24.6 Lakhs 30x40 29 Lakhs, Contact

8123387555 / 7259348777

OWN A PLOT NEAR MYSORE AIRPORT

PREMIUM PLOTS ON NH-766 HIGHWAY - EASY CITY CONNECTIVITY

MUDA & RERA APPROVED [PRM/KA/RERA/1268/378/PR/210126/008419]

- 500 M FROM TOLL PLAZA
- HIGH-GROWTH LOCATION
- WIDE ROADS & GREEN SURROUNDINGS

SPECIAL LAUNCH OFFER LIMITED PLOTS

PRICE : ₹4,500 PER SQ FT

PLOT SIZES: 30 X 40 | 30 X 50 | 40 × 60

CALL NOW : 81058 17070

ಸಾರ್ವಜನಿಕ ಪ್ರಕಟಣೆಗಾಗಿ

ನನ್ನ ಕಕ್ಷಿದಾರರಾದ ಶ್ರೀಯುತ ಪ್ರಶಾಂತ್ ಪ್ರಹ್ಲಾದ್ ಆಚಾರ್ಯ ಬಿನ್ ಬಂಕಾಪುರ ಪ್ರಹ್ಲಾದ್ ಆಚಾರ್ಯ ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಇದರ ಕಾನೂನುಬದ್ಧ ಮಾಲೀಕರಾದ ಶ್ರೀ. ಕೆ.ಬಿ.ಪೊನ್ನಣ್ಣ ಬಿನ್ ಲೇಟ್ ಕೆ.ಬಿ.ಬಿದ್ದಪ್ಪ ರವರ ವಾಸ ರಾಮಮೂರ್ತಿನಗರ, ಬೆಂಗಳೂರು-560016. ಇವರಿಂದ ಷೆಡ್ಯೂಲ್ ನಲ್ಲಿ ಕಾಣಿಸಿರುವ ಜಮೀನನ್ನು ಕ್ರಯಕ್ಕೆ ಪಡೆಯಲು ಇಚ್ಛೆಯುಳ್ಳವರಾಗಿದ್ದು. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯಕ್ತಿ, ಸಂಘ ಸಂಸ್ಥೆಗಳಿಗೆ, ಬ್ಯಾಂಕ್, ಖಾಸಗಿ ಫೈನಾನ್ಸ್‌ಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಹಕ್ಕು, ಮಾಲೀಕತ್ವ, ಸ್ವಾಧೀನ ಸಂಬಂಧ ಏನಾದರೂ ಇದ್ದಲ್ಲಿ ಸೂಕ್ತ ದಾಖಲಾತಿಗಳೊಡನೆ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 7 ದಿನದೊಳಗಾಗಿ ಲಿಖಿತ ಮೂಲಕ ವಾಗಿ ಈ ಕೆಳಕಂಡವರನ್ನು ಸಂಪರ್ಕಿಸುವುದು. 7 ದಿನಗಳು ಕಳೆದ ನಂತರ ನಮ್ಮ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಮಾಡಲು ಅರ್ಹರಾಗಿರುತ್ತಾರೆ. ನಂತರ ತಕರಾರುಗಳು ಏನಾದರೂ ಬಂದಲ್ಲಿ ನಮ್ಮ ಕಕ್ಷಿದಾರರು ಬಾಧ್ಯಸ್ಥರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಆಕಳ ಗ್ರಾಮದ ಸರ್ವೆ ನಂ. 163 (ಹಳೇ ಸರ್ವೆ ನಂ. 126) ರಲ್ಲಿರುವ ವಿಸ್ತೀರ್ಣ 3 ಎಕರೆ 20 ಗುಂಟೆ ಜಮೀನು ಇದಕ್ಕೆ ಚಕ್ಕುಬಂಧಿ:- ಪೂರ್ವಕ್ಕೆ : ಚನ್ನಬಸವಯ್ಯ ಮತ್ತು ಚಾಮುಂಡಯ್ಯ ರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ ಮತ್ತು ತೋಪಯ್ಯ, ಮೋಟಯ್ಯ ಮತ್ತು ರಾಜಶೇಖರ ರವರ ಸ್ವತ್ತು, ಉತ್ತರಕ್ಕೆ : ರಸ್ತೆ : ಹುಸ್ಕೂರು ಮಹದೇವಯ್ಯ ರವರ ಸ್ವತ್ತು. ಈ ಮಧ್ಯೆಯಿರುವ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ ಜಮೀನು.

ಸಹಿ/- ಬಿ.ಪಿ.ಪ್ರಸಾದ್
ಜಿಲ್ಲಾ ಪತ್ರ ಬರಹಗಾರರು. ಪರವಾನಿಗೆ ಸಂಖ್ಯೆ 05/2011-12 ನಂ. 28, ಎ&ಬಿ ಬ್ಲಾಕ್,ರಾಮ ಕೃಷ್ಣನಗರ, ಮೈಸೂರು. ಮೊ:98452 74578

ಸಾರ್ವಜನಿಕ ಪ್ರಕಟಣೆ

(ಮೂಲ ದಾಖಲೆಗಳು ಕಳೆದುಹೋಗಿರುವ ಕುರಿತು)

ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಎಸ್. ಆನಂದ್, ಇವರು ಕೆಳಕಂಡ ಅನುಕ್ರಮಣಿಕೆಯ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದು, ಈ ಆಸ್ತಿಯನ್ನು ಅವರ ಅಣ್ಣನಾದ ಶ್ರೀ ಎಸ್.ಸಿದ್ದೇಗೌಡ ರವರಿಂದ ದಾನಪತ್ರದ ಮೂಲಕ ಪಡೆದಿರುತ್ತಾರೆ. ದಿನಾಂಕ 20-06-2019 ರಂದು ಮೈಸೂರು ಪೂರ್ವ, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ ದಾನಪತ್ರದ ಸಂಖ್ಯೆ 1ನೇ ಪುಸ್ತಕದ ದಸ್ತವೇಜು ನಂಬರ್ MYE-1-03208-2019-20 ಆಗಿ CD No.MYED 233 ನೇದ್ದರಲ್ಲಿ ದಿನಾಂಕ : 20-06-2019 ರಂದು ನೊಂದವಣಿಯ ಮೂಲಕ ಬಂದ ದಾನ ಪತ್ರದ ಮೂಲ ಪ್ರತಿಯೂ ಕಳೆದುಹೋಗಿದ್ದು ಈ ದಿನದವರೆವಿಗೂ ಪತ್ತೆಯಾಗಿರುವುದಿಲ್ಲ.

ಇದಲ್ಲದೆ ಕೆಳಕಂಡ ದಾಖಲೆಗಳೂ ಕಳೆದುಹೋಗಿವೆ:

ದಿನಾಂಕ: 29-03-2016 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ಸಂಖ್ಯೆ : ಮೈ.ನ.ಪ್ರಾ/ಖಾ.ಕ.ವ- NEW-5428/15-16, ಇದರ ಮೂಲಕ ಶ್ರೀ ಸಿದ್ದೇಗೌಡ ರವರಿಗೆ ಖಾತಾ ಕಂದಾಯ ಆಗಿರುತ್ತದೆ. ಕಂದಾಯದ ಚಲನ್ ನಂ. ನಿವೇಶನ ಕಂದಾಯ/144558230, ಖಾತಾ ನಂ. 138501011000303.

ದಿನಾಂಕ: 12-07-2019 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ಸಂಖ್ಯೆ : ಮೈ.ನ.ಪ್ರಾ/ಖಾ.ಕ.ವ- NEW-28352/19-20. ಇದರ ಮೂಲಕ ಶ್ರೀ ಎಸ್.ಆನಂದ್ ರವರಿಗೆ ಖಾತಾ ಕಂದಾಯ ಆಗಿರುತ್ತದೆ. ಕಂದಾಯದ ಚಲನ್ ನಂ. ಖಾತಾ ವರ್ಗಾವಣೆ /29406, ಖಾತಾ ನಂ. 138501011000303.

ಈ ಕುರಿತು ಕಿರುಗಾವಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು, GSC No.PO0872260600139, ಹಾಗೂ ಇದರ ಸ್ವೀಕೃತಿ 10-04-2026 ಆಗಿರುತ್ತದೆ.

ಯಾರಿಗಾದರೂ ಮೇಲೆ ತಿಳಿಸಿರುವ ದಾಖಲಾತಿಗಳು ಸಿಕ್ಕಿದ್ದಲ್ಲಿ ಅದನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಅಥವಾ ನನ್ನ ಕಕ್ಷಿದಾರರಾದ ಎಸ್.ಆನಂದ್ ರವರಿಗೆ ಸೂಕ್ತ ಸಮಯದಲ್ಲಿ ಹಿಂದಿರುಗಿಸತಕ್ಕದ್ದು. ಒಂದು ವೇಳೆ ಈ ಮೇಲ್ಕಂಡ ದಾಖಲಾತಿಗಳು ಸಿಕ್ಕಿ ನನ್ನ ಕಕ್ಷಿದಾರರ ಗಮನಕ್ಕೆ ತರದೇ ಅದನ್ನು ದುರುಪಯೋಗಪಡಿಸಿಕೊಂಡರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಹಾಗೇಯೆ ಯಾರಾದರೂ ನನ್ನ ಕಕ್ಷಿದಾರರ ಗಮನಕ್ಕೆ ಬರದೆ ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೂರನೇ ವ್ಯಕ್ತಿಗಳ ಜೊತೆ ವ್ಯವಹಾರ ನಡೆಸಿದರೆ ನನ್ನ ಕಕ್ಷಿದಾರರು ಅದಕ್ಕೆ ಯಾವ ರೀತಿಯೂ ಹೊಣೆಯಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಭುಗತಗಳ್ಳಿ ಗ್ರಾಮದ ಸರ್ವೆ ನಂಬರ್ 143/1 ಮತ್ತು 143/2Bರಲ್ಲಿ ವಸತಿ ಉದ್ದೇಶಕ್ಕಾಗಿ ಸಂಖ್ಯೆ: ಎ.ಎಲ್.ಎನ್(3) ಸಿ.ಆರ್.93/2012-13 ದಿನಾಂಕ: 04-07-2012 ರಂತೆ ಅನ್ಯಕ್ರಾಂತವಾಗಿರುವ ಜಮೀನಿನಲ್ಲಿ ರೆಸಲ್ಯೂಷನ್ ನಂ. MUDA:NY: 67/13-14 ದಿನಾಂಕ: 08-07-2013ರ ಪ್ರಕಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡ ನಕ್ಷೆಯಂತೆ ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ಇವರ ವತಿಯಿಂದ ನಿರ್ಮಿಸಿರುವ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ: 15 ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ 14, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 16, ಈ ಮಧ್ಯೆ ಇರುವ ಪೂರ್ವ ಪಶ್ಚಿಮ : 12.00 (ಹನ್ನೆರಡು) ಮೀಟರ್ ಮತ್ತು ಉತ್ತರ ದಕ್ಷಿಣ: 9.00 (ಒಂಭತ್ತು) ಮೀಟರ್ ಒಟ್ಟು 108.00 ಚದರ ಮೀಟರ್ ಅಳತೆಯುಳ್ಳ ಪೂರ್ತಾ ಖಾಲಿ ನಿವೇಶನ ಈ ಸ್ಥಿರ ಸ್ವತ್ತಿನ ದಾನ ಪತ್ರಕ್ಕೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸ್ಥಳ: ಮೈಸೂರು
ದಿನಾಂಕ: 18-04-2026

ಸಹಿ/- ಚಂದನ್‌ಚಂದ್ರ, ಅಡ್ವಕೇಟ್
ಮೈಸೂರು ಲಾ ಅಸೋಸಿಯೇಟ್ಸ್, 5ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು-570009. ದೂರವಾಣಿ: 9901683219
ಇ-ಮೇಲ್: adv.chandangowda@gmail.com

PUBLIC NOTICE

NOTICE IS HEREBY GIVEN that my client intends to purchase the industrial land situated at Metagalli Village, Kasaba Hobli, Mysuru Taluk, Mysuru District, from its land owner.

Sl.No.	Survey Number	Square Meters	NAME OF THE LAND OWNER
1.	19/1, 19/2A and 19/2B	24,079 Square Meters	**M/s MAHANVE PROPERTIES PRIVATE LIMITED,** a company incorporated under the Companies Act, 2013 having its registered office at 609, 6th Floor, Ansal Bhawan, 16, K.G. Marg, New Delhi-110001. Represented by Authorised Signatory, Mr. YASH PAL MENDIRATTA.

The Owner has represented that it is the absolute owner and are in possession of the Schedule property and the Schedule Property is free from any kind of encumbrance, suits, and proceedings under any statute. Any person / persons asserting any right, title, interest, claim or demand whatsoever in the Schedule Property or any part thereof, by way of sale, exchange, mortgage, charge, lease, gift, inheritance, bequest, possession, lis pendences, maintenance, easement, memorandum of understanding, agreement, power of attorney, option, right of first refusal, pre-emption or otherwise whatsoever is hereby required to notify the same in writing to the undersigned within a period of Fifteen (15) days from the date of issuance of this notice with all documentary proof thereof failing which my client will treat the title of the schedule property as clear and marketable and will proceed to purchase the schedule property.

SCHEDULE PROPERTY

All that the piece and parcel of LAND Bearing Survey Numbers-19/1, 19/2A and 19/2B of Mysuru Belagola Industrial Area, Metagalli Village, Kasaba Hobli, Mysuru Taluk, Mysuru District, admeasuring 24,079 Sq Meters, along with industrial shed measuring 557.413 Sq Meter having R C C building and A C C roof, Vide E-Katha in Form-11A, Vide Certificate No-15360389 and assigned E-Aasthe(PID) Bearing No-152200431028500097 and GSC Code-PR0880003248465, bounded on the:- East by: KIADB Land, West by: Mysuru-KRS Road, North by: Kasturi foods, South by: Falcon Tyres Ltd and Jayashree Enterprises.

H. L. Law Associates
Mallikarjuna .N.L., M.B.A., L.L.B
Advocate, Office address: # No. 652, 9th Cross, Near S B I, Aravindanagara, 1st Stage, Mysuru. Mob: 98446 76013

ನಾಪೋಕ್ಲುವಿನಲ್ಲಿ ವಿದ್ಯುತ್ ಕಣ್ಣಾ ಮುಚ್ಚಾಲೆ ವಿರುದ್ಧ ಪ್ರತಿಭಟನೆ

15 ದಿನದಲ್ಲಿ ಸಮಸ್ಯೆ ಬಗೆಹರಿಸದಿದ್ದಲ್ಲಿ ಸೆಸ್ಕ್ ಕಚೇರಿಗೆ ಬೀಗ

ನಾಪೋಕ್ಲು: ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ನಿರಂತರ ವಿದ್ಯುತ್ ಕಡಿತವಾಗುತ್ತಿದ್ದು ಜನಸಾಮಾನ್ಯರು ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಶಕ್ತಿ ಕೇಂದ್ರದ ಕಾರ್ಯಕರ್ತರು ಮತ್ತು ಸಾರ್ವಜನಿಕರು ಒತ್ತಾಯಿಸಿದರು.


ನಾಪೋಕ್ಲುವಿನ ಸೆಸ್ಕ್ ಕಚೇರಿಯ ಎದುರು ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಇಲ್ಲಿನ ಸೆಸ್ಕ್ ಕಚೇರಿಯ ಎದುರು ವಿದ್ಯುತ್ ಇಲಾಖೆಯ ವಿರುದ್ಧ ದಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು 15 ದಿನಗಳ ಒಳಗಾಗಿ ವಿದ್ಯುತ್ ಸಮಸ್ಯೆ ಪರಿಹರಿಸದಿದ್ದಲ್ಲಿ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖ ಶಿವಚಾಳಿಯಂಡ ಅಂಬಿ ಕಾರ್ಯಪ್ಪ ಮಾತನಾಡಿ ಕಳೆದ ಕೆಲವು ದಿನಗಳಿಂದ ನಾಪೋಕ್ಲು ವ್ಯಾಪ್ತಿಯಲ್ಲಿ ನಿರಂತರವಾಗಿ ವಿದ್ಯುತ್ ಕಡಿತವಾಗುತ್ತಿದೆ. ವಿದ್ಯುತ್ ಅವಲಂಬಿತ ಕೆಲಸ ಕಾರ್ಯಗಳು ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ವಿದ್ಯುತ್ ಕಡಿತದ ಅವಧಿಯನ್ನು ನಿಗದಿಗೊಳಿಸಿ ಉಳಿದ ಸಮಯದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಿ ಎಂದು ಆಗ್ರಹಿಸಿದರು.

ಕೆಟೋಳಿರ ಹರೀಶ್ ಪೂವಯ್ಯ ಮಾತನಾಡಿ ಕೆಲವು ವರ್ಷಗಳಿಂದ ಹೋಬಳಿ ವ್ಯಾಪ್ತಿಯ ವಿದ್ಯುತ್ ಸಮಸ್ಯೆ ಬಗೆ ಹರಿದಿಲ್ಲ. ಪ್ರತಿ ವರ್ಷ ಒಂದಲ್ಲ ಒಂದು ಕಾರಣ ಹೇಳಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಮಳೆಗಾಲದಲ್ಲಿ ಒಂದು ರೀತಿಯ ಸಮಸ್ಯೆ ಆದರೆ ಬೇಸಿಗೆಯಲ್ಲಿಯೂ ಸಮಸ್ಯೆ ಪರಿಹಾರವಾಗುತ್ತಿಲ್ಲ. ವಿದ್ಯುತ್ ಸಮಸ್ಯೆಗೆ ಶೀಘ್ರ ಪರಿಹಾರ ಕೊಡಿ ಎಂದು ಒತ್ತಾಯಿಸಿದರು.

ಮುಕ್ಕಾಟಿರ ವಿನಯ್, ಶಿವಚಾಳಿಯಂಡ ಜಗದೀಶ್ ವಿದ್ಯುತ್ ಸಮಸ್ಯೆ ಬಗ್ಗೆ ಮಾತನಾಡಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರ ವಿನಯ್ ಕುಮಾರ್ ಪ್ರತಿಕ್ರಿಯಿಸಿ ಮೂರ್ನಾಡು ಫೀಡರ್ ಅನ್ನು ಮೇಲ್ದರ್ಜೆಗೇರಿಸುವ ಕಾರ್ಯ ಪ್ರಗತಿಯಲ್ಲಿದೆ. ಹತ್ತು ದಿನಗಳ ಒಳಗಾಗಿ ಹೊಸ ಲೈನ್ ಅಳವಡಿಕೆ ಕೆಲಸ ಪೂರ್ಣಗೊಳ್ಳಲಿದೆ. ಬಳಿಕ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದರು. ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ಮೂರು ಮಂದಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಪಾಡಿಯಮ್ಮಂಡ ಮನು ಮಹೇಶ್, ಕುಲ್ಲೇಟಿರ ಅಜಿತ್, ಪಾಲಚಂಡ ಸೀಮಾ, ಅರೆಯಡ ಅಶೋಕ್, ಕಂಗಾಂಡ ಜಾಲಿ ಪೂವಪ್ಪ, ಕುಂಡಿಯೋಳಂಡ ವಿಶು ಪೂವಯ್ಯ, ಬಾಲೆಯಡ ಮೇದಪ್ಪ, ಶಿವಚಾಳಿಯಿಂದ ಕಿಶೋರ್ ಬೋಪಣ್ಣ, ಪ್ರಸಾದ್, ಡಾಲಿ ಅಚ್ಚಪ್ಪ, ಕನ್ನಂಬೀರ ಸುಧಿ, ಸುಕುಮಾರ್, ಮುತ್ತಣ್ಣ, ಸುಬ್ರಮಣಿ, ತಮ್ಮಯ್ಯ, ಕಾರ್ಯಪ್ಪ, ಭುವನ್, ಪೊನ್ನಪ್ಪ, ಮಧು, ರಾಜೇಶ್ ಸೇರಿದಂತೆ ಇತರರು ಇದ್ದರು.

ಅರೆ ಭಾಷೆ ಗೌಡರ ಕ್ರೀಡಾ ಹಬ್ಬಕ್ಕೆ ಚಾಲನೆ

ಮಡಿಕೇರಿ, ಏ.18– ಮಡಿಕೇರಿ ಅರೆಭಾಷೆ ಗೌಡ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ 10 ಕುಟುಂಬ 18 ಗೋತ್ರದ ಅರೆಭಾಷೆ ಗೌಡ ಜನಾಂಗ ಬಾಂಧವರಿಗಾಗಿ ಏರ್ಪಡಿಸಲಾಗಿರುವ ಗೌಡ ಕ್ರೀಡಾ ಹಬ್ಬಕ್ಕೆ ಚಾಲನೆ ನೀಡಲಾಯಿತು.

ನಗರದ ಗಾಂಧಿ ಮೈದಾನದಲ್ಲಿ 2 ದಿನಗಳ ಕಾಲ ನಡೆಯಲಿರುವ ಹಬ್ಬವನ್ನು ಕೊಡಗು ಗೌಡ ಸಮಾಜದ ಅಧ್ಯಕ್ಷ ದಂಬೆಕೋಡಿ ಆನಂದ ಉದ್ಘಾಟಿಸಿ ಮಾತನಾಡಿದ ಅವರು, ಕ್ರಿಕೆಟ್, ಹಾಕಿಯಂತೆ ಫುಟ್ಬಾಲ್ ಕೂಡ ಉತ್ತಮ ಕ್ರೀಡೆಯಾಗಿದೆ. ಈ ಒಂದು ಕ್ರೀಡೆಯಲ್ಲಿ ಯುವ ಪೀಳಿಗೆ ತೊಡಗಿಸಿಕೊಂಡು ಮುಂದೆ ಬರಬೇಕು. ಈ ನಿಟ್ಟಿನಲ್ಲಿ ಅರೆಭಾಷೆ ಗೌಡ ಸ್ಪೋರ್ಟ್ಸ್ ಅಕಾಡೆಮಿ ಪ್ರಯತ್ನ ಶ್ಲಾಘನೀಯವಾದುದು. ಸರಕಾರ ಗೌಡ ಸಮಾಜಕ್ಕೆ ಜಾಗ ಮಂಜೂರು ಮಾಡಿದ್ದು ಆ ಜಾಗದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಟರ್ಫ್ ಮೈದಾನ ನಿರ್ಮಿಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಹೇಳಿದರು.


ಮಡಿಕೇರಿಯಲ್ಲಿ ಶನಿವಾರ ಗೌಡ ಕ್ರೀಡಾ ಹಬ್ಬಕ್ಕೆ ಚಾಲನೆ ನೀಡಲಾಯಿತು.

ಕೊಡಗು ಗೌಡ ಸಮಾಜಗಳ ಅಧ್ಯಕ್ಷ ಆನಂದ್ ಕರಂದ್ಲಾಜೆ ಮಾತನಾಡಿ, ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಕಳೆದ ವರ್ಷ ಕೂಡ ಉತ್ತಮ ರೀತಿಯಲ್ಲಿ ಕ್ರೀಡಾಕೂಟ ಏರ್ಪಡಿಸಲಾಗಿದ್ದು, ಅದನ್ನು ಮುಂದುವರಿಸಿಕೊಂಡು ಬರುತ್ತಿರುವುದು ಉತ್ತಮ ಕಾರ್ಯ. ಕ್ರೀಡಾಕೂಟ ಆಯೋಜನೆ ಮಾಡುವುದು ಕಷ್ಟದ ಕೆಲಸ. ಜನಾಂಗ ಬಾಂಧವರು ಸಮಯ ಮೀಸಲಿರಿಸಿಕೊಂಡು ಆಯೋಜಕರಿಗೆ ಶಕ್ತಿ ನೀಡುವ ಕೆಲಸ ಮಾಡಬೇಕೆಂದು ಹೇಳಿದರು. ಗೌಡ ಸ್ಪೋರ್ಟ್ಸ್ ಅಕಾಡೆಮಿ ಪದಾಧಿಕಾರಿ ಪೊನ್ನಚನ ಶ್ರೀನಿವಾಸ್, ಅಂತರರಾಷ್ಟ್ರೀಯ ಫುಟ್ಬಾಲ್ ಆಟಗಾರ ಬೆಪ್ಪುರನ ಅಣ್ಣಪ್ಪ ಕುಮಾರ್, ಪದ್ಮಪ್ರಿಯ ಸಿಂಗೂರು, ಕೊಡಗು ಜಿಲ್ಲಾ ಫುಟ್ಬಾಲ್ ಅಸೋಸಿಯೇಶನ್ ಅಧ್ಯಕ್ಷ ಪಾಣತ್ತಲೆ ಜಗದೀಶ್ ಮಂದಪ್ಪ, ಗೌಡ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ಪೇರಿಯನ ಉದಯ, ರಾಷ್ಟ್ರೀಯ ಫುಟ್ಬಾಲ್ ಆಟಗಾರ್ತಿ ಕೋಡಿ ವಿದಿತ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅರೆಭಾಷೆ ಹಾಸ್ಯ ಲೇಖನ ಸ್ಪರ್ಧೆಗೆ ಬರಹಗಳ ಆಹ್ವಾನ

ಮಡಿಕೇರಿ ಏ.18– ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಅರೆಭಾಷೆ ಹಾಸ್ಯಲೇಖನ ಸ್ಪರ್ಧೆಗೆ ಬರಹಗಳನ್ನು ಆಹ್ವಾನಿಸಲಾಗಿದೆ.

ಸ್ವಂತ ರಚನೆಯ, ಬೇರೆ ಎಲ್ಲೂ ಪ್ರಕಟವಾಗಿರದ, ಕನಿಷ್ಠ ಐದು ನೂರು ಹಾಗೂ ಗರಿಷ್ಠ ಒಂದು ಸಾವಿರ ಪದ ಮೀರದ, ಹೊಸ ಆಲೋಚನೆಯನ್ನೊಳಗೊಂಡ ಬರಹಗಳನ್ನು ಕಳುಹಿಸಬೇಕು. ಹಾಸ್ಯ ಲೇಖನಕ್ಕೆ ಪ್ರಥಮ ಬಹುಮಾನ 5,000, ದ್ವಿತೀಯ ಬಹುಮಾನ 3,000 ಹಾಗೂ ತೃತೀಯ ಬಹುಮಾನ 2,000 ಒಳಗೊಂಡಿದ್ದು, ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.

ಬರಹಗಳನ್ನು ಅಂಚೆ, ಅಕಾಡೆಮಿ ವಾಟ್ಸಾಪ್ ಸಂಖ್ಯೆ 63625–22677 ಅಥವಾ ಇ–ಮೇಲ್(arebaseacademy@gmail.com) ಮೂಲಕ ಮೇ 10ರೊಳಗೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ, ಅಂಚೆ ವಿಳಾಸ: ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕಾಫಿ ಕೃಪಾ, ರಾಜಸೀಟ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ. ಇಲ್ಲಿಗೆ ಸಂಪರ್ಕಿಸಬಹುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಕುಶಾಲನಗರ–ಮೈಸೂರು ಹೆದ್ದಾರಿಯಲ್ಲಿ ಕಾಡಾನೆ ಕಾರುಬಾರು

ವಾಹನ ಸವಾರರಲ್ಲಿ ಕೆಲ ಕಾಲ ಆತಂಕ

ಮಡಿಕೇರಿ, ಏ.18– ಕುಶಾಲನಗರ–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಕಾಡಾನೆಯೊಂದು ಹಾಡಹಗಲೇ ಪ್ರತ್ಯಕ್ಷವಾಗಿ ವಾಹನ ಸವಾರರಲ್ಲಿ ಕೆಲ ಕಾಲ ಆತಂಕ ಮೂಡಿಸಿತು.

ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜಾರೋಷವಾಗಿ ನಡೆದುಕೊಂಡು ಹೋಗುವುದನ್ನು ಕಂಡು ವಾಹನ ಸವಾರರು ಕೆಲಕಾಲ ಆತಂಕಕ್ಕೆ ಒಳಗಾದರು. ಮಧ್ಯಾಹ್ನ 12 ಗಂಟೆ ವೇಳೆಯಲ್ಲಿ ಕಾಡಾನೆಯೊಂದು ಆನೆಕಾಡು ಮೀಸಲು ಅರಣ್ಯ ಪ್ರದೇಶದಿಂದ ನೇರವಾಗಿ ರಾಷ್ಟ್ರೀಯ ಹೆದ್ದಾರಿಗೆ ಆಗಮಿಸಿ ರಸ್ತೆಯಲ್ಲಿ ಸಂಚರಿಸಿ ಮತ್ತೊಂದು ಭಾಗದ ಅರಣ್ಯ ಪ್ರದೇಶದ ಒಳಗೆ ನುಸುಳಿ ಮರೆಯಾಗಿದೆ.



ಇದೇ ಸಂದರ್ಭ ಕುಶಾಲನಗರದ ಕಡೆ ತೆರಳುವ ವಾಹನ ಸವಾರರು ಈ ದೃಶ್ಯವನ್ನು ಚಿತ್ರೀಕರಿಸಿದ್ದು, ಇದೀಗ ವೈರಲ್ ಆಗಿದೆ. ಈ ಭಾಗದಲ್ಲಿ ಕಾಡಾನೆಗಳು ರಾತ್ರಿ ಸಮಯದಲ್ಲಿ ಸಂಚಾರ ಮಾಡುವುದು ಸಾಮಾನ್ಯವಾಗಿದೆ.

ಮೇಲುಕೋಟೆಯ ರಾಮಾನುಜರಿಗೆ ವೈಭವದ ಅಶ್ವವಾಹನೋತ್ಸವ

ಮೇಲುಕೋಟೆ: ರಾಮಾನುಜಾಚಾರ್ಯರ 1009ನೇ ತಿರುನಕ್ಷತ್ರ ಮಹೋತ್ಸವದ ಐದನೇ ದಿನದ ಕಾರ್ಯಕ್ರಮದ ಅಂಗವಾಗಿ ಮೇಲುಕೋಟೆ ದೇವಾಲಯದಲ್ಲಿ ರಾಮಾನುಜಾಚಾರ್ಯರಿಗೆ ಬೆಳಿಗ್ಗೆ ಅಶ್ವ ವಾಹನೋತ್ಸವ ಮತ್ತು ರಾತ್ರಿ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ವೈಭವದಿಂದ ನೆರವೇರಿತು.



ತಿರುನಕ್ಷತ್ರ ಮಹೋತ್ಸವದ ಅಂಗವಾಗಿ ಯತಿರಾಜರಿಗೆ ಪ್ರತಿದಿನ ವೈವಿಧ್ಯಮಯ ಅಲಂಕಾರದೊಡನೆ ವಾಹನೋತ್ಸವಗಳು ಮತ್ತು ವಿಶೇಷ ಉತ್ಸವಗಳು ನಡೆಯುತ್ತಿವೆ. ಬೆಳಿಗ್ಗೆ ದೇವಾಲಯದಲ್ಲಿ ಪೂಜೆ ನೆರವೇರಿದ ನಂತರ ರಾಜಾಲಂಕಾರದಲ್ಲಿ ಕಂಗೊಳಿಸಿದ ಯತಿರಾಜರಿಗೆ ಚತುರ್ವೀದಿಗಳಲ್ಲಿ ವೈಭವದಿಂದ ಉತ್ಸವ ನೆರವೇರಿಸಲಾಗಿದೆ. ಭಾರತದ ದೇವಾಲಯದಲ್ಲೇ ವಿಶಿಷ್ಟವಾದ ದಿವ್ಯ ಪ್ರಬಂಧ ಪಾರಾಯಣ ವಿಶೇಷ ಮಂಗಳವಾದ್ಯದೊಂದಿಗೆ ನೆರವೇರಿತು. ರಾತ್ರಿ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ಸಡಗರ ಸಂಭ್ರಮದೊಂದಿಗೆ ನೆರವೇರಿತು.

ಚೆಲುವನಾರಾಯಣಸ್ವಾಮಿಗೆ ಕಳೆದ ಹದಿನೈದು ದಿನಗಳಿಂದ ನಡೆಯುತ್ತಿದ್ದ ಕೊಡ್ಯೆ ತಿರುನಾಳ್ ಮಹೋತ್ಸವ ಅಮಾವಾಸ್ಯೆಯ ರಾತ್ರಿ ಸಂಪನ್ನವಾಯಿತು. ದೇವಾಲಯದ ಮಹಡಿಯ ಮೇಲೆ ಆದಿಶೇಷನ ಮೇಲೆ ಕುಳಿತ ಚೆಲುವನಾರಾಯಣಸ್ವಾಮಿಗೆ ರಾಜಗೋಪುರದ ಬಳಿ ವೈಮಾಳಿಗೈ ಕೊಡ್ಯೆ ತಿರುನಾಳ್ ಉತ್ಸವ ನಡೆದ ನಂತರ ಸರ್ಪ ನಡಿಗೆಯಲ್ಲಿ ಪಡಿಯೇಟ್ರಂ ಮೆಟ್ಟಿಲು ಹತ್ತುವ ವಿಶೇಷ ಆಚರಣೆಯೊಂದಿಗೆ ವೈಮಾಳಿಗೆ ಕೊಡ್ಯೆ ತಿರುನಾಳ್ ಮುಕ್ತಾಯವಾಯಿತು.

ಸಹಸ್ರಾರು ಭಕ್ತರು ಉತ್ಸವದಲ್ಲಿ ಭಾಗವಹಿಸಿ ವೈಭವವನ್ನು ಕಣ್ತುಂಬಿಕೊಂಡರು. ಮತ್ತೊಂದೆಡೆ ರಾಮಾನುಜರ ಅವತಾರ ಸ್ಥಳವಾದ ಶ್ರೀಪೆರಂಬೂದೂರಿನಲ್ಲೂ ರಾಮಾನುಜಾಚಾರ್ಯರಿಗೆ ಬಂಗಾರದ ಹಂಸವಾಹನೋತ್ಸವ ವೈಭವದಿಂದ ನೆರವೇರಿತು ರಾಮಾನುಜರ ಉತ್ಸವಗಳು ಏ.22 ರವರೆಗೆ ಎರಡೂ ದೇವಾಲಯಗಳಲ್ಲಿ ವೈಭವದಿಂದ ನಡೆಯಲಿವೆ.

ರಾಮಣ್ಣ ನಿಧನ



ಕಿಕ್ಕೇರಿ: ಹೋಬಳಿಯ ಸೊಳ್ಳೇಪುರ ಗ್ರಾಮದ ಹಿರಿಯ ನಾಗರೀಕ ಎಸ್.ಕೆ.ರಾಮಣ್ಣ(90) ಶನಿವಾರ ನಿಧನರಾದರು. ಮೃತರು ಗೊಬ್ಬರದ ರಾಮಣ್ಣ ಎಂದೇ ಚಿರಪರಿಚಿತರಾಗಿದ್ದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ತೋಟದಲ್ಲಿ ಭಾನುವಾರ ಬೆಳಗ್ಗೆ 10ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಕ್ರಮವಾಗಿ ಕರುಗಳನ್ನು ಸಾಗಿಸುತ್ತಿದ್ದ ಕಾರು ಡಿಕ್ಕಿ: ಮನೆ, ಬೈಕ್ ಜಖಂ

ಒಂದು ಕರು ಸಾವು, 18 ಕರುಗಳ ರಕ್ಷಣೆ, ಆರೋಪಿಗಳಿಬ್ಬರು ಮೈಸೂರಿನವರು, ಓರ್ವ ಅಪ್ರಾಪ್ತ


ಚಿನಕುರಳಿ ಬಳಿ ಕಾರು ಡಿಕ್ಕಿ ಹೊಡೆದ ಪರಿಣಾಮ ಕುಸಿದಿರುವ ಮನೆಯ ಗೋಡೆ.

ಚಿನಕುರಳಿ, ಏ.18– ಅಕ್ರಮವಾಗಿ ಜಾನುವಾರುಗಳ ಕರುಗಳನ್ನು ಸಾಗಿಸುತ್ತಿದ್ದ ಕಾರೊಂದು ಮನೆಗೆ ಡಿಕ್ಕಿಹೊಡೆದ ಪರಿಣಾಮ ಮನೆ, ಬೈಕ್ ಸಂಪೂರ್ಣವಾಗಿ ಜಖಂಗೊಂಡಿರುವ ಘಟನೆ ಗುರುವಾರ ರಾತ್ರಿ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಸಂಭವಿಸಿದೆ.


ಮನೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿರುವ ಕಾರು.

ಕಾರೊಂದರಲ್ಲಿ ಹಸುವಿನ ಕರುಗಳನ್ನು ತುಂಬಿಕೊಂಡು ಕೆ.ಆರ್.ಪೇಟೆ ಕಡೆಯಿಂದ ಮೈಸೂರಿಗೆ ತೆರಳುತ್ತಿದ್ದ ಅಪ್ರಾಪ್ತ ಸೇರಿದಂತೆ ಇಬ್ಬರು ಯುವಕರು ಅಜಾಗರೂಕತೆಯಿಂದ ಕಾರನ್ನು ಚಾಲನೆ ಮಾಡಿ ಚಿನಕುರಳಿ ಗ್ರಾಮದ ಪಶುವೈದ್ಯ ಆಸ್ಪತ್ರೆ ಮುಂಭಾಗದಲ್ಲಿರುವ ದಲಿತ ಸಮುದಾಯದ ಮೀನಾಕ್ಷಮ್ಮ ಎಂಬುವರಿಗೆ ಸೇರಿದ ಮನೆಗೆ ಡಿಕ್ಕಿ ಹೊಡೆದಿದ್ದಾರೆ.

ಡಿಕ್ಕಿ ಹೊಡೆದ ರಬಸಕ್ಕೆ ಮನೆಯ ಗೋಡೆ ಸಂಪೂರ್ಣವಾಗಿ ಕುಸಿದು ಮನೆಯ ಬಳಿ ನಿಲ್ಲಿಸಿದ ಬೈಕ್ ಮೇಲೆ ಬಿದ್ದು ಜಖಂಗೊಂಡಿದೆ. ಘಟನೆಯ ಸಂದರ್ಭದಲ್ಲಿ ಮನೆಯಲ್ಲಿ ಮೀನಾಕ್ಷಮ್ಮ ಸೇರಿದಂತೆ ಮಕ್ಕಳು ಎಲ್ಲರು ಮಲಗಿದ್ದು ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಡಿಕ್ಕಿ ಹೊಡೆದ ರಬಸಕ್ಕೆ ಕರುಗಳನ್ನು ತುಂಬಿದ್ದ ಕಾರು ಮೂರು ಪಲ್ಟಿ ಹೊಡೆದಿದೆ, ಇದರಿಂದಾಗಿ ಕಾರಿನಲ್ಲಿದ್ದ ಹಸುವಿನ ಕರು ಒಂದು ಸಾವನ್ನಪ್ಪಿದೆ.

ಸ್ಥಳೀಯರು ಪೊಲೀಸರಿಗೆ ಮಾಹಿತಿ ತಿಳಿಸಿ ಚಾಲಕರಿಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇಬ್ಬರು ಯುವಕರು ಮೈಸೂರಿನವರು ಎಂದು ತಿಳಿದು ಬಂದಿದೆ. ಅಪ್ರಾಪ್ತ ಯುವಕನನ್ನು ಬಿಟ್ಟು ಕಳುಹಿಸಿ ಓರ್ವ ಆರೋಪಿಯನ್ನು ಬಂಧಿಸಿ ದೂರು ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಘಟನೆಯಲ್ಲಿ ವಶಕ್ಕೆ ಪಡೆದಿರುವ 18 ಕರುಗಳನ್ನು ಪೊಲೀಸರು ವೈದ್ಯಕೀಯ ಪರೀಕ್ಷೆ ನಡೆಸಿ ಪಶುಪಾಲನ ಕೇಂದ್ರಕ್ಕೆ ಬಿಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ ಘಟನೆ ಸಂಬಂಧ ದೂರು ದಾಖಲಾಗಿದೆ.

ಪರಿಹಾರಕ್ಕೆ ಒತ್ತಾಯ: ಘಟನೆಯಿಂದಾಗಿ ಮನೆ ಕಳೆದುಕೊಂಡಿರುವ ದಲಿತ ಸಮುದಾಯದ ಮೀನಾಕ್ಷಮ್ಮ ಕುಟುಂಬಸ್ಥರು ಸಂಕಷ್ಟಕ್ಕೆ ಸಿಲುಕಿದ್ದು ಪರಿಹಾರಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಮೀನಾಕ್ಷಮ್ಮ ಕುಟುಂಬ ಆರ್ಥಿಕ ಸಂಕಷ್ಟದಲ್ಲಿದ್ದು ಇದೀಗ ನಡೆದ ಘಟನೆಯಿಂದ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗಾಗಿ ಸಂಬಂಧಿಸಿದವರು ಸೂಕ್ತಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.



ಸಚ್ಚಿದಾನಂದಗೆ ಹುಟ್ಟುಹಬ್ಬ

ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಬಿಜೆಪಿ ಯುವ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅಭಿನಂದಿಸಿ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ನಾಗೇಂದ್ರ ಇದ್ದರು.

ಏ.21 ರಂದು ಶ್ರೀ ಶಂಕರಾಚಾರ್ಯರ ಜಯಂತಿ



ಮಂಡ್ಯ,ಏ.18– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಏ.21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಟಿಪ್ಪರ್‌ಗಳ ಸಂಚಾರಕ್ಕೆ ಕಡಿವಾಣ ಹಾಕಲು ಆಗ್ರಹಿಸಿ ಪ್ರತಿಭಟನೆ

ಗುಂಡ್ಲುಪೇಟೆ, ಏ.18– ಟಿಪ್ಪರ್ ಸಂಚಾರಕ್ಕೆ ಕಡಿವಾಣ ಹಾಕುವಂತೆ ಒತ್ತಾಯಿಸಿ ಬಿಜೆಪಿ ಶುಕ್ರವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.


ಗುಂಡ್ಲುಪೇಟೆ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಟಿಪ್ಪರ್ ಹಾವಳಿ ನಿಯಂತ್ರಣಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಹಗಲಿರುಳು ಸಂಚರಿಸುತ್ತಿರುವ ಟಿಪ್ಪರ್‌ಗಳಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಿದ ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಅವರ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಪಟ್ಟಣದ ತಹಸೀಲ್ದಾರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಸರ್ಕಾರ ಹಾಗೂ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ವಿರುದ್ಧ ದಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು.

ತಾಲೂಕಿನಲ್ಲಿ ಸಕ್ರಿಯವಾಗಿರುವ ಅಕ್ರಮ ಗಣಿಗಾರಿಕೆ, ಕ್ವಾರಿ, ಅನಧಿಕೃತ ಕೇರಳ ಟಿಪ್ಪರ್‌ಗಳಿಗೆ ಕಡಿವಾಣ ಹಾಕುವಲ್ಲಿ ವಿಫಲರಾಗಿರುವ ಅಧಿಕಾರಿಗಳು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅಣತಿಯಂತೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಾಕಾರರು ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಘೋಷಿಸುವ ಮೂಲಕ ಅಧಿಕಾರದ ಗದ್ದುಗೆಯೇರಿದರೆ ಇತ್ತ ಸ್ಥಳೀಯ ಶಾಸಕರು ಜನಸಾಮಾನ್ಯರಿಗೆ ಸಾವಿನ ಭಾಗ್ಯ ಕರುಣಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಶಾಸಕರು ಗಣಿ ಲೂಟಿಕೋರರಿಂದ ಪಡೆಯುತ್ತಿರುವ ಕಮಿಷನ್ ಹಣದ ಆಸೆಗೆ ಅಮಾಯಕರ ಹೆಣ ಉರುಳಿಸುತ್ತಿದ್ದೀರಿ, ಕೇರಳ ಮಾಫಿಯಾಗೆ ಬೆಂಬಲಿಸುವ ನೀವು ಕ್ಷೇತ್ರದ ಹಿತವನ್ನೇ ಅಡಮಾನವಿಟ್ಟಿದ್ದೀರಿ ಎಂದು ಪ್ರತಿಭಟನಾಕಾರರು ಹರಿಹಾಯ್ದರು.

ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ ಕಳೆದ ಹಲವು ದಿನಗಳಿಂದ ಟಿಪ್ಪರ್‌ಗಳಿಂದ ಸಾವು ನೋವುಗಳು ಸಂಭವಿಸಿದರೂ ಸಹ ಶಾಸಕರು ಹಾಗೂ ಜಿಲ್ಲಾಡಳಿತ ಮೌನಕ್ಕೆ ಶರಣಾಗಿದ್ದಾರೆ. ಕಳೆದ ಹತ್ತು ದಿನಗಳಿಂದ ರೈತರು ಧರಣಿ ನಡೆಸುತ್ತಿದ್ದರು ಶಾಸಕ ಗಣೇಶ ಪ್ರಸಾದ್ ತಲೆಕೆಡಿಸಿಕೊಂಡಿಲ್ಲ. ಕ್ಷೇತ್ರದಲ್ಲಿನ ಸಮಸ್ಯೆ ಕುರಿತು ಗ್ರಹಿಕೆ ಇಲ್ಲದೆ ತಮ್ಮ ವ್ಯವಹಾರಗಳನ್ನು ಮಾತ್ರ ಮುಂದುವರೆಸಿದ್ದಾರೆ. ಕಳೆದ ಬಾರಿ 37 ದಿನ ಅಹೋರಾತ್ರಿ ಮುಷ್ಕರ ನಡೆಸಿದ್ದ ರೈತರಿಗೆ ನೀಡಿದ್ದ ಭರವಸೆ ಹುಸಿಯಾಗಿದೆ. ತಮ್ಮ 3 ವರ್ಷದ ಅವಧಿಯಲ್ಲಿ ಒಂದೂ ಕೆರೆಯು ತುಂಬಿಸಿಲ್ಲ. 110 ಕೆರೆ ವಿಚಾರದಲ್ಲಿ ಡ್ರಾಮ ಮಾಡುತ್ತಿದ್ದಾರೆ. ವಿಪಕ್ಷದವರ ಪ್ರಶ್ನೆಗೆ ಉತ್ತರ ನೀಡದೆ ಪಲಾಯನ ಮಾಡುವ ಶಾಸಕರು ಬಿಜೆಪಿ ಸರ್ಕಾರದ ಅವಧಿಯಲ್ಲಿನ ಕೆಲಸಗಳೇ ನಿಮ್ಮ ಸಾಧನೆ ಎಂದು ಬಿಂಬಿಸಲು ಹೊರಟಿದ್ದಾರೆ ಎಂದರು.

ಬೇಗೂರು ಹತ್ತಿ ಮಾರುಕಟ್ಟೆಗೆ ಆರು ಕೋಟಿ ಬಿಡುಗಡೆಯಾಗಿದ್ದು ಬಿಜೆಪಿ ಸರಕಾರದ ಅವಧಿಯಲ್ಲಿ, ಅಂಬೇಡ್ಕರ್ ವಸತಿ ಶಾಲೆ ನಮ್ಮ ಅವಧಿಯದ್ದು, ನನ್ನ ಪ್ರಯತ್ನದ ಫಲವಾಗಿ ಕಟ್ಟಡ ನಿರ್ಮಾಣವಾಗಿದೆ ಅರೇಪುರದ ಕೆಇಬಿ ಸಬ್‌ಸ್ಟೇಷನ್ ನಿರ್ಮಾಣಕ್ಕೆ ಅಡಿಗಲ್ಲಾಕಿದ್ದು ಬಿಜೆಪಿ. ಪ್ರತಿ ವಾರವು ನಡೆಸುತ್ತಿದ್ದ ಜನಸಂಪರ್ಕ ಸಭೆಯಲ್ಲಿ ಅಧಿಕಾರಿಗಳಿಗೆ ತಾಕೀತು, ಸಾಗುವಳಿ ನೀಡುವಲ್ಲಿ ವಿಶೇಷ ಕಾಳಜಿಯಿಂದ ಫಲಾನುಭವಿಗಳಿಗೆ ಹಕ್ಕುಪತ್ರ ದೊರಕಿದೆ.

ವನ್ಯಜೀವಿಗಳ ಹಾವಳಿಗೆ ಅಂಕುಶ ಹಾಕುವಲ್ಲಿ ವಿಫಲ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ರೈತರಿಗೆ ಸವಲತ್ತು ನೀಡುವಲ್ಲಿ ವಿಫಲರಾಗಿದ್ದಾರೆ. ಟಿಪ್ಪರ್ ಸಂಚಾರದಿಂದ ನಿರಂತರ ಪ್ರಾಣಹಾನಿ ಆಗ್ತಿದೆ, ಕೇರಳ ಮೂಲದ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ್ರು ಅಂತಕರಣವಿಲ್ಲದೆ ವರ್ತಿಸಿದ್ದಾರೆ.

ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಾಜಿ ಅಧ್ಯಕ್ಷ ರಾದ ಎಲ್.ಸುರೇಶ್, ಎನ್.ಮಲ್ಲೇಶ್, ನಾಗೇಂದ್ರ ಮಲ್ಲೇಶ್, ಮಂಜು, ಡಾ.ನವೀನ ಮೌರ್ಯ, ಬಸವರಾಜ, ನಾಗೇಂದ್ರ ರೇವಣ್ಣ, ಶಿವಪ್ರಸಾದ್, ಸುನಿಲ್ ಮೂಡ್ನಾ, ಮಹೇಂದ್ರ ಗೌಡ ಸೇರಿದಂತೆ ಹಲವರು ಇದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಚಾಮರಾಜನಗರ: ಬೆಂಗಳೂರಿನ ಮಹೇಶ್ ಪಿಯು ಕಾಲೇಜಿನ ವಿದ್ಯಾರ್ಥಿ ನಿಖಿಲ್.ಜೆ ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.81.50ರಷ್ಟು ಅಂಕ ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.


ಮಿಲನ.ಆರ್.

ಹನೂರು ತಾಲೂಕು ಬಂಡಹಳ್ಳಿಯ ನಿವಾಸಿ ಜಯಕುಮಾರ್ ಮತ್ತು ಪ್ರಭಾಮಣಿ ದಂಪತಿಯ ಪುತ್ರ.


ನಿಖಿಲ್.ಜೆ

ಜಿಲ್ಲೆಯ ಹನೂರು ತಾಲೂಕು ಬಂಡಹಳ್ಳಿಯ ನಿವಾಸಿ ರವಿಕುಮಾರ್ ಮತ್ತು ಮಂಜುಳ ದಂಪತಿಯ ಪುತ್ರಿ ಮಿಲನ.ಆರ್. ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.98.66ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಈಕೆ ಬೆಂಗಳೂರಿನ ಮಹೇಶ್ ಪಿಯು ಕಾಲೇಜಿನ ವಿದ್ಯಾರ್ಥಿನಿ.

15 ಮೂಟೆ ಪಡಿತರ ಅಕ್ಕಿ ವಶ

ಕೊಳ್ಳೇಗಾಲ: ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಪಡಿತರ ಅಕ್ಕಿಯನ್ನು ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯವರು ಜಂಟಿಯಾಗಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ 15 ಮೂಟೆ ಅಕ್ಕಿ ವಶ ಪಡಿಸಿಕೊಂಡಿದ್ದಾರೆ.

ಕುಂತೂರು ಮೋಳೆ ಗ್ರಾಮದ ಬಸವರಾಜು(42) ಎಂಬಾತ ಬಂಧಿತ ಆರೋಪಿ. ಈತನಿಂದ 755 ಕೆ.ಜಿ ತೂಕದ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ.

ಈತ ಸರ್ಕಾರ ಬಡಜನರಿಗೆ ನೀಡುವ ಪಡಿತರ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಶೇಖರಿಸಿಟ್ಟಿದ್ದರ ಬಗ್ಗೆ ಖಚಿತ ಮಾಹಿತಿ ಪಡೆದು ಆಹಾರ ನಿರೀಕ್ಷಕ ಪ್ರಸಾದ್ ಹಾಗೂ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಸ್‌ಐ ಕರಿಬಸಪ್ಪ ಅವರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದಾಳಿಯಲ್ಲಿ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಎಸ್‌ಐ ಚಿಕ್ಕಸ್ವಾಮಿ, ಸಿಬ್ಬಂದಿಗಳಾದ ಶಿವಕುಮಾರ್, ಮಾದೇಶ್ ಇದ್ದರು.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಚಾಮರಾಜನಗರ, ಏ.18– ತಾಲೂಕಿನ ಹೆಬ್ಬಸೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಹೆಬ್ಬಸೂರು ಗ್ರಾಮದ ಕಂಬಳೀಶ್, ಉಪಾಧ್ಯಕ್ಷರಾಗಿ ದಡದಹಳ್ಳಿ ಗ್ರಾಮದ ಗೋವಿಂದರಾಜು ಅವಿರೋದವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾದ ಸಹಕಾರ ಅಭಿವೃದ್ಧಿ ಅಧಿಕಾರಿ ಪದ್ಮನಾಭರವರು ಅಧಿಕೃತವಾಗಿ ಘೋಷಿಸಿದರು.

ನಿರ್ದೇಶಕರಾಗಿ ವೀರಭದ್ರಸ್ವಾಮಿ, ವೆಂಕಟಶೇಷಯ್ಯ, ಮೋಕ್ತಮ್, ಲಕ್ಷ್ಮಣ, ನಯೀಮ್, ವಿನೋಧ ರವಿಕುಮಾರ್, ಸುಧಾಮಣಿ, ಸಾಕಮ್ಮ, ಶೇಖಪ್ಪ, ಆಯ್ಕೆಯಾಗಿದ್ದರು. ಸಹಕಾರ ಸಂಘಕ್ಕೆ ಆಯ್ಕೆಯಾದ ಅಧ್ಯಕ್ಷ ಉಪಾಧ್ಯಕ್ಷ, ನಿರ್ದೇಶಕರನ್ನು ಅಭಿನಂದಿಸಲಾಯಿತು. ಈ ವೇಳೆ ಮಾತನಾಡಿದ ಅಧ್ಯಕ್ಷ ಕಂಬಳೀಶ್ ಎಲ್ಲರ ಸಹಕಾರದಿಂದ ಅಧ್ಯಕ್ಷನಾಗಿದ್ದೇನೆ ತಮ್ಮೆಲ್ಲರ ಅಭಿಪ್ರಾಯದಂತೆ ಸಂಘವನ್ನು ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗುತ್ತೇನೆ ಎಂದರು. ಕಾರ್ಯಕ್ರಮದಲ್ಲಿ ಮುಖಂಡರಾದ ಗೌಡಿಕೆ ಮಂದೇಶ್, ರಂಗಸ್ವಾಮಿ, ನಂಜುಂಡಸ್ವಾಮಿ, ಉಮೇಶ್, ಶಿವಣ್ಣ,, ನಂಜುಂಡಸ್ವಾಮಿ, ಕಾರ್ಯದರ್ಶಿ ಸದ್ದಾಂ, ಸುಂದ್ರಪ್ಪ, ಇತರರು ಇದ್ದರು.


ಅಧ್ಯಕ್ಷ, ಉಪಾಧ್ಯಕ್ಷರನ್ನು ನಿರ್ದೇಶಕರು ಅಭಿನಂದಿಸುತ್ತಿರುವುದು.



ಮಹಾ ಮಾನವತಾವಾದಿ ಬಸವಣ್ಣ

ಭಾರತ ದೇಶದಲ್ಲಿ ಅಷ್ಟೇ ಏಕೆ ಇಡೀ ವಿಶ್ವದಲ್ಲಿ ಹನ್ನೆರಡನೆಯ ಶತಮಾನ, ಅದೊಂದು ಮಹಾಕ್ರಾಂತಿ ಯುಗ. ಬಸವ ಬೆಳಕಿನ ಭಾಗ್ಯ ಯುಗ. ಕಾಯಕವೇ ಕೈಲಾಸವೆಂದು ಕಾಯಕ ಗಳಿಂದ, ಜ್ಞಾನ ದಾಸೋಹಗಳಿಂದ, ವಚನಸಾಹಿತ್ಯ ರಚನೆಗಳಿಂದ ಅರಿವಿನ ರಥ ಚಲಿಸಿದ ಶರಣ-ಶರಣೆಯರ ಯುಗ. ವಿಶ್ವಕಲ್ಯಾಣಕ್ಕಾಗಿ ಸಕಲರಿಗೂ ಲೇಸನ್ನೇ ಬಯಸಿ ಭಾರತದ ಪ್ರಥಮ ಲೋಕಸಭೆ ಎಂದು ಕರೆಯಲ್ಪಟ್ಟ 'ಅನುಭವ ಮಂಟಪ' ರಚಿಸಿ ಎಲ್ಲಾ ವರ್ಗದ ಜನರು ಯಾವುದೇ ಹಿಂಜರಿಕೆಯಿಲ್ಲದೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ವಿಚಾರಗಳನ್ನು ಮುಕ್ತವಾಗಿ ಚರ್ಚಿಸಿ, ಮನುಷ್ಯರನ್ನು ಮಹಾತ್ಮರನ್ನಾಗಿ ಮಾಡುವುದಕ್ಕಾಗಿ ಮಾನವತ್ವದ ತಳಹದಿಯ ಮೇಲೆ ಸೌಹಾರ್ದತೆಯ ಹೂವು ಅರಳುವಂತೆ ಮಾಡಿದ ಅಪೂರ್ವ ಯುಗ. ಇದೆಲ್ಲದರ ಕೇಂದ್ರ ಬಿಂದು ಯುಗಪುರುಷ ಬಸವೇಶ್ವರ.

ಆ ಕಾಲದಲ್ಲೇ ಪ್ರಜಾಸತ್ತಾತ್ಮಕ ತತ್ವಗಳ ಪ್ರತೀಕವಾದ 'ಅನುಭವ ಮಂಟಪ'ವನ್ನು ಸ್ಥಾಪಿಸುವುದರ ಮೂಲಕ ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಿದ ಮೊದಲಿಗರು ಬಸವೇಶ್ವರರು. ನಿಜ ಅರ್ಥದಿ ಶ್ರೇಷ್ಠ ಸಮಾಜ ಸುಧಾರಕರಿವರು. ಅನುಭವ ಮಂಟಪವೆಂಬುದು ಬಸವೇಶ್ವರರ ಮಹಾ ಪ್ರಯೋಗ ಶಾಲೆ. ಸಮಾಜದ ಸುಭದ್ರತೆ, ಸಮಾಜದ ಹಿತಚಿಂತನೆ, ಸಮುದಾಯದ ಸಂರಕ್ಷಣೆ, ಧರ್ಮದ ನಂಬಿಕೆ, ಮೌಲ್ಯ ಸಿದ್ಧಾಂತಗಳ, ವಿಚಾರ ವಿನಿಮಯಗಳ, ಚಿಂತನ-ಮಂಥನ ಚರ್ಚೆಗಳ ಸಂಗಮವಿದು. ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳ ವೇದಿಕೆಯೂ ಆಗಿದ್ದ ಬಸವೇಶ್ವರರ 'ಅನುಭವ ಮಂಟಪ' ದಲ್ಲಿ ವಚನ ಕ್ರಾಂತಿಯೇ ನಡೆದು ಬಹಳಷ್ಟು ಮಂದಿ ಶರಣ-ಶರಣೆಯರು ವಚನಕಾರರಾಗಲು ಸ್ಫೂರ್ತಿಯ ತಾಣ ಇದಾಗಿತ್ತು. ಸಿದ್ಧರಾಮ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಹಡಪದ ಅಪ್ಪಣ್ಣ, ಅಲ್ಲಮಪ್ರಭು, ಹರಳಯ್ಯ, ಅಕ್ಕಮಹಾದೇವಿ, ಕಾಳವ್ವ, ನೀಲಾಂಬಿಕೆ, ನಾಗಲಾಂಬಿಕೆ, ಗೊಗ್ಗವ್ವ, ಕದಿರೆ ರಮ್ಮವ್ವ, ರಾಯಮ್ಮ, ಮುಕ್ತಾಯಕ್ಕ, ಕಲ್ಯಾಣಿಯಮ್ಮ, ಬೊಂತಾದೇವಿ, ಗಂಗಾಂಬಿಕೆ, ಲಕ್ಷಮ್ಮ... ಹೀಗೆ ಇನ್ನೂ ಮುಂತಾದ ಶರಣ-ಶರಣೆಯರ ದಂಡೇ ಅಲ್ಲಿ ಸಂಗಮಿಸಿತ್ತು. ಬಸವೇಶ್ವರರಂತೂ ವಚನ ಸಾಹಿತ್ಯದ ಹರಿಕಾರರಾಗಿ ತಮ್ಮ ಸದ್ಭಾವನಾ ಲೇಖನಿಯನ್ನು ಹರಿಯಬಿಟ್ಟು ವಚನಗಳ ಶಿಖರವನ್ನು ನಿರ್ಮಿಸಿದ್ದರು. ಬಸವೇಶ್ವರರ ವಚನಗಳೆಂದರೆ ಅದೊಂದು ಅದ್ಭುತ ಕಾವ್ಯ ಆಡು ಭಾಷೆಯಲ್ಲೇ ವಚನ ಕಾವ್ಯಕಟ್ಟಿದ ಶಬ್ಧಗಾರುಡಿಗರವರು.

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗಳ
ಇಂದಿಂಗೆ ನಾಳಿಂಗೆ
ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪುರಾತರಾಣೆ
ನಿಮ್ಮ ಶರಣ (ಸಮಾಜ)ರಿಗಲ್ಲದೆ
ಮತ್ತೊಂದಕ್ಕೆ ಈಯೆನು
ಕೂಡಲಸಂಗಮದೇವ ನಿಮ್ಮಾಣೆ!

ಬಿಜ್ಜಳ ಮಹಾರಾಜನಲ್ಲಿ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಪರಮಾತ್ಮನ ಆಣೆಯಾಗಿ ಬಸವೇಶ್ವರರು ಅಂದು ನುಡಿದ ಈ ವಚನ ಇಂದಿಗೂ ಮಾದರಿಯಾಗಿದೆ. ಪ್ರಜೆಗಳ ಸಂಪತ್ತು ಪ್ರಜೆಗಳ ಕಲ್ಯಾಣಕ್ಕಾಗಿಯೇ ವಿನಿಯೋಗ ವಾಗಬೇಕೆ ಹೊರತು ದುರುಪಯೋಗವಾಗ ಬಾರದೆಂದು ಆಗಲೇ ಅವರು ಎಚ್ಚರಿಸಿದ್ದರು. ವ್ಯಕ್ತಿಗಿಂತ ಸಮಾಜ ದೊಡ್ಡದೆಂದೂ, ಸ್ವಾರ್ಥವನ್ನು ಬಿಟ್ಟು ಸೇವಕನಂತೆ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕೆಂದು ಪ್ರಜಾಪ್ರತಿನಿಧಿಗಳಿಗೆ ಅಂದೇ ಅವರು ನೀತಿ ಹೇಳಿದ್ದರು. ಅವರ ಮತ್ತೊಂದು ವಚನದ ಸ್ವಾರಸ್ಯ ನೋಡಿ–

ಧರಣಿಯ ಮೇಲೊಂದು ಹಿರಿದಪ್ಪ
ಅಂಗಡಿಯನಿಕ್ಕಿ ಹರದಕುಳ್ಳಿರ್ದ
ನಮ್ಮ ಮಹದೇವಸೆಟ್ಟಿ
ಒಮ್ಮತವಾದರೆ ಒಡನೆ
ನುಡಿವನು ಇಮ್ಮನವಾದಡೆ
ನುಡಿಯನು;ಕಾಣೆಯ ಸೋಲ
ಅರ್ಥಕಾಣೆಯ ಗೆಲ್ಲ;
ಜಾಣ ನೋಡವ್ವಾ
ನಮ್ಮ ಕೂಡಲಸಂಗಮದೇವ.

ವ್ಯಾಪಾರದ ಪರಿಭಾಷೆಯಲ್ಲಿರುವ ಈ ವಚನ ಭಗವಂತ ಮತ್ತು ಭಕ್ತರ ಮಧ್ಯೆ ವ್ಯವಹಾರ ಹೇಗಿರಬೇಕೆಂದು ಹೇಳುತ್ತದೆ. ಮಹದೇವಸೆಟ್ಟಿಯೇ ಇಲ್ಲಿ ವ್ಯಾಪಾರಿ, ಈ ಧರಣಿಯೇ ಅವನ ಅಂಗಡಿ, ಕಿಂಚಿತ್ತೂ ಚೌಕಾಶಿಯಿರದ ವ್ಯಾಪಾರವಿಲ್ಲಿ, ಒಮ್ಮನ(ಒಂದೇ ಮನಸ್ಸು)ಕ್ಕುಂಟು ಬೆಲೆ, ಇಮ್ಮನ(ಎರಡು ಮನಸ್ಸು)ಕ್ಕಿಲ್ಲ ಅವಕಾಶ, ಮಹದೇವಸೆಟ್ಟಿ ತನಗೆ ಬರಬೇಕಾದ ಅರ್ಧಕಾಸನ್ನೂ ಬಿಡುವುದಿಲ್ಲ. ಹಾಗೆಯೇ ಒಂದು ಕಾಸನ್ನೂ ಹೆಚ್ಚು ಪಡೆಯುವುದಿಲ್ಲ. ಮೋಸ, ವಂಚನೆಗೆ ಈ ಅಂಗಡಿಯಲ್ಲಿ ಜಾಗವಿಲ್ಲ. ಈ ರೀತಿ ವ್ಯವಹಾರಿಕ ಜಗತ್ತಿನ ಕಾರ್ಯಗಳಿಗೆ ಸಮಾನಾಂತರವಾಗಿ ಪಾರಲೌಕಿಕ ಜಗತ್ತಿನ ನಿಯಮಗಳನ್ನು ಈ ವಚನ ಚಿತ್ರಿಸುತ್ತದೆ.

ವೇದಕ್ಕೆ ಒರೆಯ ಕಟ್ಟುವೆ,
ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನಬಾರೆತ್ತುವೆ,
ಆಗಮದ ಮೂಗ ಕೊಯ್ಯುವೆ
ನೋಡಯ್ಯ ಮಹಾದಾನಿ
ಕೂಡಲ ಸಂಗಮದೇವ
ಮಾದಾರ ಚೆನ್ನಯ್ಯನ
ಮನೆಯ ಮಗ ನಾನು

ಎನ್ನುವ ಬಸವೇಶ್ವರರ ಇಂಥ ಅದೆಷ್ಟೋ ವಚನಗಳು ವೈಚಾರಿಕ ಪ್ರಜ್ಞೆಯಿಂದ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ವಚನ ಚಳವಳಿಗೆ ಹೊಸಬೆಳಕು ನೀಡಿವೆ. ಇಲ್ಲಿ ಮನಷ್ಯ ಮನುಷ್ಯನಾಗಿ ಬದುಕಲು ಬಿಡದ ಜಾತಿ ಎಂಬ ಭೂತದ ವಿರುದ್ಧ ಬಸವೇಶ್ವರರು ಸಿಡಿದು ನಿಲ್ಲುವುದನ್ನು ಕಾಣಬಹುದಾಗಿದೆ. ಬಸವೇಶ್ವರರ ಈ ವಚನವಂತೂ ಅಂಬೇಡ್ಕರರು ತಮ್ಮ ಕ್ರಾಂತಿಕಾರಿ ಕೃತಿ 'ಜಾತಿ ವಿನಾಶ'ದಲ್ಲಿ ಹೇಳಿರುವ ಜಾತಿ ಪದ್ಧತಿಯನ್ನು ನೀವು ದಮನ ಮಾಡಬೇಕಾದರೆ ಮೊದಲು ನೀವು ವೇದಗಳು ಮತ್ತು ಶಾಸ್ತ್ರಗಳಿಗೆ ಡೈನಾಮೇಟು ಹಾಕಬೇಕು ಎನ್ನುವ ಕ್ರಾಂತಿಕಾರಿ ಮಾತುಗಳನ್ನು ನೆನಪಿಸುತ್ತವೆ. ದಲಿತರ ಉದ್ಧಾರಕ್ಕೆಂದೇ ದಿಕ್ಷೆ ತೊಟ್ಟು ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟುಹಾಕಿದ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಬಸವೇಶ್ವರರ ನಡುವೆ ಬಹಳಷ್ಟು ಸಾಮ್ಯಗಳುಂಟು. ಮುಖ್ಯವಾಗಿ ಇವರಿಬ್ಬರೂ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಧೀರೋದ್ಧಾತ ಚೇತನಗಳು. ಅಷ್ಟೇ ಅಲ್ಲ ಪರ್ಯಾಯ ಸಮಾಜವನ್ನೇ ಕಟ್ಟಿದವರು.

ಅಸ್ಪೃಶ್ಯತೆಯ ನಾಶದಲ್ಲಿ ನಾಡಿನ ಉದ್ಧಾರವಿದೆ ಎಂದು ತಿಳಿದ ವರಲ್ಲಿ ಬಸವೇಶ್ವರರು ಮೊದಲಿಗರು. ಬಹುಶಃ ಅಂಬೇಡ್ಕರ್ ಏನಾದರೂ ಕರ್ನಾಟಕದಲ್ಲಿ ಜನಿಸಿದ್ದರೆ ಬಸವೇಶ್ವರರ ನಿಲುವನ್ನು ಒಪ್ಪಿ ಅವರ ವೀರಶೈವ ಧರ್ಮವನ್ನೇ ಒಪ್ಪಿಕೊಳ್ಳುತ್ತಿದ್ದ ರೇನೋ! ಏಕೆಂದರೆ ಜಗತ್ತು ಸೃಷ್ಟಿಸಿದ ಶ್ರೇಷ್ಠತಮ ಮಹಾಪುರುಷರು ಬಸವೇಶ್ವರರು ಎಂದು ಸ್ವತಃ ಅಂಬೇಡ್ಕರ್ ಅವರೇ ನುಡಿದಿದ್ದಾರೆ.

ತಾವು ಮೋಕ್ಷಾಪೇಕ್ಷಿ ಆದುದರಿಂದ ಪುನಃ ಜನಿಸಲು ತಮಗೆ ಇಷ್ಟವಿಲ್ಲ, ಆದರೂ ತಮಗೆ ಪುನರ್ಜನ್ಮವೆಂಬುದಿದ್ದರೆ ಮುಂದಿನ ಜನ್ಮದಲ್ಲಿ ಅಸ್ಪೃಶ್ಯನಾಗಿ ಹುಟ್ಟಲಿಚ್ಛಿಸುತ್ತೇನೆ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಲವಾರು ಸಾರಿ ಘೋಷಿಸಿದ್ದಿದೆ. ಆದರೆ ಬಸವೇಶ್ವರರು ಇಂಥ ಯಾವುದೇ ಘೋಷಣೆಯನ್ನು ಮಾಡದೆಯೇ ಈ ಜನ್ಮದಲ್ಲಿಯೇ ಅಸ್ಪೃಶ್ಯರಾಗುತ್ತಾರೆ. ದಲಿತರಲ್ಲಿ ಆತ್ಮಪ್ರತ್ಯಯವನ್ನೂ, ನಂಬಿಕೆಯನ್ನೂ ಮೂಡಿಸಬೇಕಾದರೆ ತಾವೂ ದಲಿತರಾಗಬೇಕೆಂಬ ದೃಷ್ಟಿಯಿಂದ ವರು ದಲಿತರಾಗುತ್ತಾರೆ. ಇದಕ್ಕಾಗಿ ಅವರು ಗಾಂಧೀಜಿ ಬಯಸಿದಂತೆ ಮುಂದಿನ ಜನ್ಮದ ವರೆಗೂ ಕಾಯುವುದಿಲ್ಲ. ಹಾಗಾಗಿ ಈ ವಿಚಾರದಲ್ಲಿ ಬಸವಣ್ಣನವರು ಗಾಂಧಿಗಿಂತಲೂ ಎತ್ತರಕ್ಕೇರುತ್ತಾರೆ.

ಕೆಳಜಾತಿಯಲ್ಲಿ ಜನಿಸಿದ್ದಕ್ಕೆ ಅಪಮಾನದಿಂದ ನೊಂದುಕೊಳ್ಳುವುದು ಸಹಜ. ಆದರೆ ಬಸವೇಶ್ವರರು ಮೇಲ್ಜಾತಿ ಬ್ರಾಹ್ಮಣ ಕುಟುಂಬದಲ್ಲಿ ತಾವು ಹುಟ್ಟಿದ್ದಕ್ಕೆ ನೊಂದುಕೊಂಡು ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ, ಆನು ಹಾರುವನೆಂದಡೆ ಕೂಡಲ ಸಂಗಯ್ಯ ನಗುವನಯ್ಯ ಎನ್ನುತ್ತಾರೆ. ಇಷ್ಟು ಸಾಲದೆಂಬಂತೆ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ತಾನು ಮಾದಾರ ಚೆನ್ನಯ್ಯನ ಮಗ ಎನ್ನುವವರೆಗೂ ಹೋಗುತ್ತಾರೆ.

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲ್ಲಿ ಬೆರಣಿಗೆ
ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲ ಸಂಗಮದೇವ ಸಾಕ್ಷಿಯಾಗಿ

ಹೀಗೆ ಹೇಳುವ ಧೈರ್ಯ ಬಸವೇಶ್ವರರಿಗಲ್ಲದೆ ಇನ್ನಾರಿಗೆ ಬಂದೀತು! ಏಕೆಂದರೆ ಜಾತಿ ನಿಷ್ಠ ಸಮಾಜದ ದೃಷ್ಟಿಯಲ್ಲಿ ಮಾದಾರ ಚೆನ್ನಯ್ಯ ಮತ್ತು ಕಕ್ಕಯ್ಯ ಅತ್ಯಂತ ಕೀಳು ಜಾತಿಯವರು. ಇಂಥವರ ಮನೆಯಲ್ಲಿ ಜೀತಕ್ಕಿರುವ ಜನರು ಇನ್ನೆಷ್ಟು ಹೀನ ಜಾತಿಯವರಿರಬೇಕೆಂದು ಯೋಚಿಸಿದಷ್ಟೂ ಬಸವೇಶ್ವರರ ಮನುಷ್ಯತ್ವದ ಮೇರುವ್ಯಕ್ತಿತ್ವ ಮಿರಮಿರನೆ ಮಿಂಚುತ್ತದೆ. ಜೀತದಾಳುಗಳ ಹಾದರಕ್ಕೆ ಹುಟ್ಟಿದವನು ನಾನೆಂದು ಹೇಳಿಕೊಳ್ಳುವ ಬಸವೇಶ್ವರರ ಮಾನವತೆಗೆ ಅವರೇ ಸಾಟಿ, ಮನುಷ್ಯತ್ವದಿಂದ ದೈವತ್ವಕ್ಕೇರಿರುವ ಪರಿಯಿದು.

ಮಹಾಮಾನವತಾವಾದಿ ಬಸವೇಶ್ವರರಿಗೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಅವರ ಜೀವ-ಜೀವನದಲ್ಲೆಲ್ಲಾ ತುಂಬಿ ಹೋಗಿತ್ತು. ಮೂಲತಃ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಬಾಲ್ಯಾವಸ್ಥೆಯಿಂದಲೂ ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸು ತ್ತಿದ್ದರು. ಆದ್ದರಿಂದಲೇ ಅವರು ಯಾರಿಗೂ ಹೆದರದೆ ಧೈರ್ಯವಾಗಿ ತಮ್ಮ ಉಪನಯನವನ್ನು ಧಿಕ್ಕರಿಸಿದ್ದರು. ಇಡೀ ಸಮಾಜವನ್ನು ಮಾನವೀಯಗೊಳಿಸಲು ಬಸವೇಶ್ವರರು ಬದುಕಿನ ಅಗ್ನಿಗೆ ತಮ್ಮನ್ನು ತಾವು ಒಡ್ಡಿಕೊಂಡು ಒಂದು ರೀತಿ ಕರ್ಪೂರದಂತೆ ಉರಿದು ಜಗಕೆ ಬೆಳಕಾಗಿದ್ದರು. ದೀನ-ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರ ದಲಿತ ಪರ ಹೋರಾಟ ಸಹ ಮಾನವೀಯ ಗೊಳಿಸುವ ಪ್ರಯತ್ನಕ್ಕೆ ಸಾಕ್ಷಿ. ದಲಿತರ ಅವಮಾನಿತ ಬದುಕಿನ ನೋವುಗಳನ್ನು ಅರಿಯಲು ಈ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವರು ತಮ್ಮ ಮೂಲ ಜಾತಿಯನ್ನೇ ತೊರೆದು ದಲಿತರೊಳಗೊಂದಾದದ್ದು ಸಾಮಾನ್ಯ ವಿಷಯವಲ್ಲ, ಈ ದಿಸೆಯಲ್ಲಿ ಅವರದು ವಿಶ್ವದಲ್ಲೇ ಅಪ್ರತಿಮ ಚೇತನವೆನ್ನಬಹುದು.

ಇಂಥ ಮಾನವೀಯ ನೆಲೆಯಲ್ಲೇ ವೈಚಾರಿಕ ಪ್ರಭೆಯೊಡನೆ ಸಮಾಜ ಸುಧಾರಣಾ ಹಾದಿಯಲ್ಲಿ ವಚನ ಸಾಹಿತ್ಯ ಕೃಷಿಯನ್ನು ಸಮೃದ್ಧವಾಗಿ ಮಾಡಿರುವ ಬಸವೇಶ್ವರರ ವಚನಗಳು ಸರ್ವಕಾಲಕ್ಕೂ ಸರ್ವಶ್ರೇಷ್ಠ ವಚನಗಳಾಗಿಯೇ ಉಳಿದಿವೆ, ಇಂದಿಗೂ ಸಹ ಹನ್ನೆರಡನೇ ಶತಮಾನದಲ್ಲಿ ಸೃಷ್ಟಿಗೊಂಡ ಅವರ ವಚನಗಳನ್ನು ಓದುತ್ತಿದ್ದರೆ ಈಗಿನ ಸಂದರ್ಭವನ್ನೇ, ಇಂದಿನ ಬಿಕ್ಕಟ್ಟುಗಳನ್ನೇ ಬಸವೇಶ್ವರರು ಬಿಚ್ಚಿಡುತ್ತಿದ್ದಾರೆ ಎನಿಸುತ್ತದೆ. ಅಷ್ಟೇ ಅಲ್ಲ ಇಂದು ನಮ್ಮ ಸಮಾಜವನ್ನು ಕಾಡುತ್ತಿರುವ ಪ್ರಶ್ನೆಗಳಿಗೆಲ್ಲ ಖಂಡಿತವಾಗಿಯೂ ಬಸವೇಶ್ವರರಲ್ಲಿ ಉತ್ತರವನ್ನು ಕಾಣಬಹುದು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಮಹಾಮಾನವತಾವಾದಿ ಬಸವೇಶ್ವರರಿಗೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಅವರ ಜೀವ–ಜೀವನದಲ್ಲೆಲ್ಲಾ ತುಂಬಿ ಹೋಗಿತ್ತು. ಮೂಲತಃ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಬಾಲ್ಯಾವಸ್ಥೆಯಿಂದಲೂ ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು. ಆದ್ದರಿಂದಲೇ ಅವರು ಯಾರಿಗೂ ಹೆದರದೆ ಧೈರ್ಯವಾಗಿ ತಮ್ಮ ಉಪನಯನವನ್ನು ಧಿಕ್ಕರಿಸಿದ್ದರು. ಇಡೀ ಸಮಾಜವನ್ನು ಮಾನವೀಯಗೊಳಿಸಲು ಬಸವೇಶ್ವರರು ಬದುಕಿನ ಅಗ್ನಿಗೆ ತಮ್ಮನ್ನು ತಾವು ಒಡ್ಡಿಕೊಂಡು ಒಂದು ರೀತಿ ಕರ್ಪೂರದಂತೆ ಉರಿದು ಜಗಕೆ ಬೆಳಕಾಗಿದ್ದರು. ದೀನ–ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರ ದಲಿತ ಪರ ಹೋರಾಟ ಸಹ ಮಾನವೀಯ ಗೊಳಿಸುವ ಪ್ರಯತ್ನಕ್ಕೆ ಸಾಕ್ಷಿ. ದಲಿತರ ಅವಮಾನಿತ ಬದುಕಿನ ನೋವುಗಳನ್ನು ಅರಿಯಲು ಈ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವರು ತಮ್ಮ ಮೂಲ ಜಾತಿಯನ್ನೇ ತೊರೆದು ದಲಿತರೊಳಗೊಂದಾದದ್ದು ಸಾಮಾನ್ಯ ವಿಷಯವಲ್ಲ, ಈ ದಿಸೆಯಲ್ಲಿ ಅವರದು ವಿಶ್ವದಲ್ಲೇ ಅಪ್ರತಿಮ ಚೇತನವೆನ್ನಬಹುದು.

ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯಾ,
ಇವನಮ್ಮವ, ಇವನಮ್ಮವ ಎಂದೆನಿಸಯ್ಯಾ,
ಕೂಡಲಸಂಗಮದೇವಯ್ಯ ನಿಮ್ಮ ಮನೆಯ ಮಗನೆಂದೆನಿಸಯ್ಯಾ
– ಬಸವಣ್ಣ

ಸಮಾನತೆ, ಭ್ರಾತೃತ್ವ, ಶುದ್ಧ ಚಿಂತನೆ, ಕಾಯಕ, ದಾಸೋಹ ಮತ್ತು ನಡೆ–ನುಡಿಗಳಲ್ಲಿ ಏಕತೆ ಇವು ಬಸವಾದಿ ಶರಣರು ಮನುಕುಲಕ್ಕೆ ನೀಡಿದ ಸಂದೇಶಗಳು. ಈ ಮೌಲ್ಯಗಳು ಎಂದೆಂದಿಗೂ ಪ್ರಸ್ತುತವೇ ಆಗಿರುತ್ತವೆ. ಬಸವೇಶ್ವರರು ಮತ್ತು ಇತರ ಕಾಯಕ ಶರಣರು ನೀಡಿದ ಜೀವನ ಮೌಲ್ಯಗಳನ್ನು ಶ್ರದ್ಧೆಯಿಂದ



ಆಚರಿಸುವ ಕಡೆಗೆ ಜನತೆ ಗಮನಹರಿಸಬೇಕು. ಆ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ಸಮರ್ಪಕವಾಗಿ ವರ್ಗಾಹಿಸಬೇಕು. 'ಇವ ನಮ್ಮವ ಇವ ನಮ್ಮವ' ಎಂಬ ಪ್ರೀತಿಯನ್ನು ಸಮಾಜದ ಎಲ್ಲರಿಗೂ ಹಂಚಬೇಕು. ವಿಚಾರಗಳು ಆಚಾರದಲ್ಲಿ ಅನುಷ್ಠಾನಕ್ಕೆ ಬರಬೇಕು. ಜಯಂತಿ ಆಚರಣೆಗಳಂಥ ಶುಭ ಸಂದರ್ಭಗಳಲ್ಲಿ 'ಎಲ್ಲರೂ ಒಂದೇ' ಎಂಬ ಭಾವನೆ ನೆಲೆಗೊಂಡರೆ, ಅದರ ವಿಸ್ತೃತ ರೂಪದಲ್ಲಿ ಸುಭದ್ರ ಸಮಾಜ ನಿರ್ಮಾಣವಾಗುವುದು ಸಾಧ್ಯ. ಶರಣರ ತತ್ವ ಇಡೀ ಮನುಕುಲಕ್ಕೆ ಸೇರಿದ ಆಸ್ತಿ. ಎಲ್ಲ ರೀತಿಯ ತಾರತಮ್ಯಗಳನ್ನು ನಿವಾರಿಸುವ ಚಿಂತನೆಗಳ ಸ್ವರೂಪದಲ್ಲಿ ವಿಶ್ವಾತ್ಮಕವಾಗಿದ್ದು, ಅದರ ಸಾರವನ್ನು ಸಮಾಜದ ಕಟ್ಟಕಡೆಯ ಮನುಷ್ಯನಿಗೂ ತಲುಪಿಸುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಜವಾಬ್ದಾರಿ ಎಲ್ಲರ ಮೇಲಿದೆ. ಇದನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ವಿಸ್ತೃತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾದ ತುರ್ತು ಇಂದಿನ ಅಗತ್ಯ

– ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ವಾರಭವಿಷ್ಯ

19.04.2026 ರಿಂದ 25.04.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಮೇಷ, ಚಂದ್ರ–ಮೇಷ, ವೃಷಭ, ಮಿಥುನ, ಕಟಕ, ಕುಜ–ಮೀನ, ಬುಧ–ಮೀನ, ಗುರು–ಮಿಥುನ, ಶುಕ್ರ–ಮೇಷ, ವೃಷಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಮನೆಯಲ್ಲಿ ಅನುಕೂಲ ವಾತಾವರಣ. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ದೇವತಾ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಪ್ರತಿಜ್ಞಾ ಪಾಲನೆಯಿಂದ ನೆರೆಹೊರೆಯಲ್ಲಿ ಮೆಚ್ಚುಗೆಗೆ ಪಾತ್ರರಾಗುವಿರಿ. ಕೆಲವು ಪ್ರಸಂಗಗಳು ಅಪ್ರಯತ್ನವಾಗಿಯೇ ಈಡೇರುವುದು. ಆತುರದ ವಾಹನ ಚಲನೆ ಮುಳುವಾಗುವುದು.
ಶ್ರೀ ಸುಬ್ರಹ್ಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ–1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಈ ವಾರ ಪೂರ್ತಿ ಚಂದ್ರಗ್ರಹ ಸಂಚಾರ ಶುಭವಿದೆ. ನಿಮ್ಮ ಮನೋ ಇಚ್ಛೆ ಕಾರ್ಯಗಳು ನಿಮ್ಮ ಹಿತೈಷಿಗಳ ನೆರವಿನಿಂದ ಕಾರ್ಯಗತಗೊಳ್ಳಲಿವೆ. ಇದಕ್ಕೆ ಸ್ತ್ರೀಯರೊಬ್ಬರ ಒತ್ತಾಸೆಯೂ ದೊರೆಯಲಿದೆ. ಟ್ರಾವೆಲ್ ಏಜೆನ್ಸಿ ಹಾಗೂ ಹೋಟೆಲ್‌ನವರಿಗೆ ಉತ್ತಮ ಧನಾದಾಯವಾಗುವುದು. ಪ್ರೀತಿ, ಪ್ರೇಮ ವಿಚಾರಗಳು ನಿಮ್ಮ ಮನೋನುಕೂಲಕ್ಕೆ ತಕ್ಕಂತೆ ನಡೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು.
ಶ್ರೀ ದೇವೀ ಆರಾಧನೆ. ಶುಭ ಸಂಖ್ಯೆ–8

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಶ್ರೀ ಬೃಹಸ್ಪತಿ ನಿಮ್ಮ ರಾಶಿಯಲ್ಲೇ ಸ್ಥಿತನಿರುವುದರಿಂದ ಮನೋವಿಕಾರಗಳಿಂದ ಬಳಲುವಿರಿ. ಇತರರ ಬಗ್ಗೆ ನಿಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಿ. ಕಚೇರಿ ಕೆಲಸದಲ್ಲಿ ಸಹೋದ್ಯೋಗಿಗಳು ಸಹಕಾರ ನೀಡುವರು. ವಾರ ಮಧ್ಯೆ ಶುಭ ಚಂದ್ರನಿಂದ ಮನೆ ಮಂದಿಯಲ್ಲಿ ಆತ್ಮೀಯತೆ ವೃದ್ಧಿಸುವುದು. ನಿಮಗೆ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಿರಿ. ಹಾಗೂ ಉತ್ಸಾಹಶೀಲರಾಗಿರುತ್ತೀರಿ.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–4

ಕಟಕ (ಹೊ,ಹು,ಹೆ,ಡ,ಡಿ,ಡು)
ಈ ವಾರ ಪೂರ್ತಿ ನಿಮ್ಮ ರಾಶ್ಯಾಧಿಪತಿ ಚಂದ್ರನ ಗೋಚರ ಶುಭ ಭಾವದಲ್ಲಿ ಸಾಗಲಿದೆ. ನಿಮಗೆ ಅನುಕೂಲ ಪರಿಸ್ಥಿತಿಗಳು ಒದಗುವುದು. ಕುಟುಂಬ ವರ್ಗದಲ್ಲಿ ಸುಖ–ಸಂತೋಷ, ಶಾಂತಿಗಳನ್ನು ಕಾಣುವಿರಿ. ಹೊಸ ಮಿತ್ರರ ಪರಿಚಯವಾಗುತ್ತದೆ. ಮೈ–ಮನಗಳಲ್ಲಿ ಸಂತಸದ ಹೊನಲನ್ನು ಅನುಭವಿಸುವಿರಿ. ಸರ್ಕಾರಿ ಕಚೇರಿ ಕೆಲಸಗಳು ನಿಮ್ಮ ಅನುಕೂಲಕ್ಕೆ ಜರುಗುವುದು. ಆರೋಗ್ಯ ಸುಧಾರಿಸುವುದು.
ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–9

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವ್ಯಾಪಾರ ವ್ಯವಹಾರಗಳು ತೃಪ್ತಿಕರವಾಗಿ ನಡೆದು ಹೆಚ್ಚಿನ ಧನ ಸಂಪಾದನೆ ಆಗುವುದು. ಹಣಕಾಸಿನ ಮುಗ್ಗಟ್ಟುಗಳು ನಿವಾರಣೆ ಆಗಿ ಮಾನಸಿಕವಾಗಿ ಶಾಂತಿ ದೊರೆಯುತ್ತದೆ. ಹೊಸ ವಸ್ತ್ರಾಭರಣ ಕೊಳ್ಳುವುದರಿಂದ ಶ್ರೀಮತಿಗೆ ಸಂತೋಷ. ರಾಜಕಾರಣಿಗಳಿಗೆ ಹೊಸ ಅಪವಾದಗಳು ಸುತ್ತಿಕೊಳ್ಳುವುದು. ಸರ್ಕಾರಿ ಉದ್ಯೋಗಿಗಳಿಗೆ ಬಡ್ತಿ ಹಾಗೂ ವರ್ಗಾವಣೆ ಆಗುವ ಸಾಧ್ಯತೆ ಇರುತ್ತದೆ. ಜಠರ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಶಮೀವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–8

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಕುಟುಂಬ ವರ್ಗದವರ ಸಹಕಾರದಿಂದ ವ್ಯಾಪಾರ, ಉದ್ಯೋಗಗಳು ಲಾಭದಾಯಕವಾಗಿ ನಡೆಯುವುದು. ವಿದ್ಯಾ ಪ್ರಸಂಗಗಳಲ್ಲಿ ಪ್ರಶಂಸೆ, ಪ್ರಶಸ್ತಿಗಳು ದೊರೆಯಲಿವೆ. ನೀವು ಸೃಜನಾತ್ಮಕ ಚಿಂತನೆಗಳಲ್ಲಿ ಮಗ್ನರಾಗಿರುವಿರಿ. ವಾರ ಮಧ್ಯೆ ಸಾಧು–ಸಂತರ ಭೇಟಿಯಿಂದ ಮಾನಸಿಕ ನೆಮ್ಮದಿ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದೆ ಬೇಸರ. ಆರೋಗ್ಯದಲ್ಲಿ ಏರು–ಪೇರು ಉಂಟಾಗುವ ಸಂಭವ.
ಶ್ರೀ ರಾಮನಾಮ ಜಪ. ಶುಭ ಸಂಖ್ಯೆ–3

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಭಾಗ್ಯ ಸ್ಥಾನ ಸ್ಥಿತ ಗುರುವಿನಿಂದ ನಿಮ್ಮ ತಾಪತ್ರಯಗಳು ಕಾಲ ಕ್ರಮೇಣ ಬಗೆಹರಿಯುವುವು. ಭಾವಿಸಿ. ಮನೆಯಲ್ಲೂ, ಸಮಾಜದಲ್ಲೂ ಅನುಕೂಲಕರ ವಾತಾವರಣ ಉಂಟಾಗುತ್ತದೆ. ವ್ಯಾಪಾರ, ವ್ಯವಹಾರಗಳು ತೃಪ್ತಿಕರವಾಗಿ ಮುನ್ನಡೆಯುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ಅಪರಿಚಿತರಿಗೆ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಹಂಚಿಕೊಳ್ಳಬೇಡಿ. ನಿಮ್ಮ ಆರೋಗ್ಯದ ಕಡೆ ಗಮನ ನೀಡಿ.
ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)
ಈ ವಾರ ನಿಮ್ಮ ಮುಂದೆ ಕೆಲಸಗಳು ದಂಡಿಯಾಗಿವೆ. ಮಾಡಲು ಮನಸ್ಸಿಲ್ಲ. ಜೊತೆಗೆ ಭಾವನಾತ್ಮಕ ಒತ್ತಡಗಳಿಂದ ಹೊರ ಬರಲು ಚಡಪಡಿಸುವಿರಿ. ನೌಕರ ವರ್ಗದವರಿಗೆ ಅಪವಾದದ ಭೀತಿ ಇರುತ್ತದೆ. ಕುಟುಂಬ ಸದಸ್ಯರೊಂದಿಗೆ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಅನ್ಯಥಾ ಪರಿಸ್ಥಿತಿ ಬಿಗಡಾಯಿಸುವುದು. ವಾರಾಂತ್ಯಕ್ಕೆ ಇಷ್ಟ ವಸ್ತು ಪ್ರಾಪ್ತಿ. ಬಂಧು–ಬಾಂಧವರಲ್ಲಿ ಸಂಬಂಧಗಳು ಉತ್ತಮಗೊಳ್ಳುವುದು. ನಿಮಗೆ ಪ್ರಯೋಜನಕಾರಿ ಆಗಲಿದೆ.
ಶ್ರೀ ಗುರು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಸಪ್ತಾಹದ ಆದಿಗೆ ಶುಭ ಸಮಾಚಾರ ಬರುವುದು. ಮಹತ್ತರವಾದ ಯೋಜನೆಗಳಿಗೆ ಪ್ರಯತ್ನಿಸಿದರೆ ತಪ್ಪಲ್ಲ. ಮಕ್ಕಳ ಸಾಧನೆಯಿಂದ ಹೆಮ್ಮೆಪಡುವಿರಿ. ಅವರ ಮುಂದಿನ ವಿದ್ಯಾಭ್ಯಾಸ ಸುಗಮವಾಗಿ ಸಾಗುವುದು. ಕುಟುಂಬದಲ್ಲಿ ಉಂಟಾಗಿದ್ದ ಇರಿಸು–ಮುರಿಸುಗಳು ನಿವಾರಣೆ ಆಗುವುದು. ಪ್ರತಿಷ್ಠಿತ ವ್ಯಕ್ತಿಗಳ ಭೇಟಿಯಿಂದ ವೈಯಕ್ತಿಕ ಸಮಸ್ಯೆಗೆ ಪರಿಹಾರ ದೊರಕುವುದು. ಆರೋಗ್ಯದ ಬಗ್ಗೆ ಅಲಕ್ಷ್ಯ ಬೇಡ.
ಶ್ರೀ ಶ್ರೀಕಂಠೇಶ್ವರ ಸನ್ನಿಧಿಗೆ ತೆರಳಿ. ಶುಭ ಸಂಖ್ಯೆ–2


ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ಈ ವಾರದಲ್ಲಿ ವಾಸ್ತವಿಕತೆ ಅರಿತು ವ್ಯವಹರಿಸದಿದ್ದರೆ ಮನಸ್ಸಿಗೆ ಕಸಿವಿಸಿಯಾಗುವಂತಹ ಪ್ರಸಂಗಗಳು ಎದುರಾಗಲಿವೆ. ಮನಸ್ಸಿನ ದುಗುಡತೆ ನಿವಾರಣೆಗೆ ಗುರು ಹಿರಿಯರ ಮಾರ್ಗದರ್ಶನ ಪಡೆದುಕೊಳ್ಳಿ. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ. ನೂತನ ಗೃಹ ಬಳಕೆ ವಸ್ತುಗಳು ಮನೆಗೆ ಬರುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ ರಾಹು–ಕೇತುಗಳು ಅಶುಭರಿದ್ದು ಅನೈತಿಕ ವ್ಯವಹಾರಕ್ಕೆ ಪ್ರೇರಣೆ ನೀಡುಹುದು.
ಓಂ ನಮೋ ನಾರಾಯಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಪ್ರಸ್ತುತ ಇಷ್ಟಪ್ರಾಪ್ತಿ ಧನ–ಕನಕ, ವಸ್ತು ನೂತನ ವಾಹನ ಹೊಂದುವ ಯೋಗವಿದೆ. ನಿಮ್ಮ ಗೃಹಲಕ್ಷ್ಮೀಯೊಡನೆ ಸಂಬಂಧಗಳು ಸ್ಫಟಿಕದಂತೆ ಶುಭ್ರವಾಗಿದ್ದರೆ, ಕಲಹಗಳು ಉಂಟಾಗದು. ಮೌನಂ ಕಲಹಂ ನಾಸ್ತಿ ಸಾಲದ ಒತ್ತಡವಿದ್ದಾಗ್ಯೂ ಗುರುವಿನನುಗ್ರಹದಿಂದ ಬೆಟ್ಟದಂತೆ ಬಂದ ಕಷ್ಟ ಹೂವಿನಂತೆ ಸರಿಯುತ್ತದೆ. ಜನ್ಮ ರಾಹುವಿನ ಕಾರಣ ಜಲಾಶಯಗಳ ಹತ್ತಿರ ಜಾಗ್ರತೆಯಿಂದ ಇರಬೇಕು.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9


ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದ ಆದಿಗೆ ಕೊಡು ತರುವ ವಿಚಾರದಲ್ಲಿ ಮಿಶ್ರ ಫಲವನ್ನು ಕಾಣುವಿರಿ. ಹಣಕಾಸಿನ ಹೊಂದಾಣಿಕೆ ಸರಿ ಇದ್ದರೂ ನೀವು ನಿರೀಕ್ಷೆ ಮಾಡಿರದ ಖರ್ಚು ವೆಚ್ಚಗಳಿಂದ ಕಂಗಾಲಾಗುವಿರಿ. ವಾರ ಮಧ್ಯೆ ನಿಮ್ಮ ಸರ್ಕಲ್‌ನಲ್ಲಿ ಪ್ರಭಾವಶಾಲಿಗಳೆನಿಸಿ, ಕೈ ಹಾಕಿದ ಕೆಲಸಗಳು ದಡ ಮುಟ್ಟುವುದು. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ಸಹವಾಸಗಳು ನೆಟ್ಟಗಿರಲಿ ಅನ್ಯಥಾ ಕಷ್ಟನಷ್ಟಗಳಿಗೆ ಗುರಿಯಾಗುವಿರಿ..
ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5

ಮಕ್ಕಳ ಚಿತ್ರಕಥೆ 'ಮಕ್ಕಳೇ, ನಿಮಗೆ ನಾನು ಹತ್ತು ನಿಮಿಷ ಸಮಯ ನೀಡುತ್ತೇನೆ'.


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಂದೂರಿನಲ್ಲಿ ಒಂದು ಪ್ರಾಥಮಿಕ ಶಾಲೆ ಇತ್ತು. ಆ ಶಾಲೆಯಲ್ಲಿದ್ದ ಅಧ್ಯಾಪಕಿಯನ್ನು ಕಂಡರೆ ಮಕ್ಕಳಿಗೆಲ್ಲಾ ತೀವ್ರ ಅಚ್ಚು–ಮೆಚ್ಚು.




ಆ ಶಾಲೆಯ ಒಂದು ತರಗತಿಯಲ್ಲಿನ ಮಕ್ಕಳು ಮಾತ್ರ ಪ್ರತಿ ದಿನ ತೀವ್ರ ಗಲಾಟೆ ಮಾಡುವುದು, ದ್ವೇಷ, ಪರಸ್ಪರ ಆರೋಪ ಮಾಡಿಕೊಳ್ಳುವುದು ಮಾಡುತ್ತಿದ್ದರು.




ಆ ತರಗತಿಯ ಮಕ್ಕಳನ್ನು ಹೇಗಾದರೂ ಮಾಡಿ ಉಪಾಯದಿಂದ ನಿಯಂತ್ರಣಕ್ಕೆ ತರಬೇಕೆಂದು ನಿರ್ಧರಿಸಿ, ಅಲ್ಲಿದ್ದ ಮಕ್ಕಳಿಗೆಲ್ಲಾ ಒಂದೊಂದು 'ಬಲೂನ್' ನೀಡಿದರು.



ಎಲ್ಲರಿಗೂ ಅದನ್ನು ಊದಿ (ಗಾಳಿ ತುಂಬಿ) ಗಂಟು ಹಾಕಿ, ಅದರ ಮೇಲೆ ತಮ್ಮ–ತಮ್ಮ ಹೆಸರುಗಳನ್ನು ಬರೆದು ತನಗೆ ನೀಡುವಂತೆ ಆದೇಶಿಸಿದರು.



ಎಲ್ಲಾ ಮಕ್ಕಳು ಬಲೂನ್‌ಗಳನ್ನು ಊದಿ ಅದರ ಮೇಲೆ ತಮ್ಮ–ತಮ್ಮ ಹೆಸರುಗಳನ್ನು ಬರೆದು ನೀಡಿದ ನಂತರ ಅಧ್ಯಾಪಕಿಯು, ತರಗತಿಯಲ್ಲಿನ ಒಂದು ಮೂಲೆಯಲ್ಲಿ ಸುರಿದು ಗುಡ್ಡೆ ಮಾಡಿದರು.



ನಂತರ 'ಮಕ್ಕಳೇ, ನಿಮಗೆ ನಾನು ಹತ್ತು ನಿಮಿಷ ಸಮಯ ನೀಡುತ್ತೇನೆ, ಎಲ್ಲರೂ ಬಂದು ತಮ್ಮ–ತಮ್ಮ ಹೆಸರಿನ ಬಲೂನ್‌ಗಳನ್ನು ಹುಡುಕಿ ತೆಗೆದುಕೊಂಡು ಹೋಗಬೇಕು. ಎಂದು ಆದೇಶಿಸಿದರು. (ಮುಂದುವರೆಯುವುದು)

ನಾಳೆ ಮಹದೇವಪ್ಪನವರ ಅದ್ಧೂರಿ ಹುಟ್ಟುಹಬ್ಬ



ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಏ.18– ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹುಟ್ಟುಹಬ್ಬವನ್ನು ಏ.20 ರಂದು ವಿಜೃಂಭಣೆಯಿಂದ ಸೇವಾ ಕಾರ್ಯಗಳೊಂದಿಗೆ ಆಚರಿಸಲು ನಿರ್ಧರಿಸಲಾಗಿದೆ.

ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿರುವ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಶನಿವಾರ ಕರೆಯಲಾಗಿದ್ದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ತಾ.ಪಂ. ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಎಂ.ಮಲ್ಲಿಕಾರ್ಜುನ ಸ್ವಾಮಿ ಸಚಿವ ಮಹದೇವಪ್ಪರವರ ಹುಟ್ಟು ಹಬ್ಬವನ್ನು ಸಮಾಜ ಮುಖಿ ಕಾರ್ಯಕ್ರಮಗಳೊಂದಿಗೆ ಆಚರಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದ್ದು, ಸೋಮವಾರ ಬಸವ ಜಯಂತಿಯಂದೇ ಮಹದೇವಪ್ಪರವರ ಹುಟ್ಟುಹಬ್ಬವನ್ನು ಆಚರಿಸಲಾಗುತ್ತದೆ ಎಂದರು.

ತಿ.ನರಸೀಪುರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ಹುಟ್ಟು ಆಚರಣೆ ಸಂಬಂಧ ಕಾರ್ಯಕರ್ತರ ಸಭೆಯಲ್ಲಿ ಪ್ರಮುಖ ಮುಖಂಡರು ಹಾಜರಿದ್ದರು.

ಅಂದು ಬೆಳಿಗ್ಗೆ ಶ್ರೀಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಮಹದೇವಪ್ಪ ಹಾಗೂ ಕುಟುಂಬದ ಹೆಸರಿನಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅವರ ಆಯಸ್ಸು ಹಾಗು ಅಧಿಕಾರ ವೃದ್ಧಿಗೆ ಪ್ರಾರ್ಥನೆ ಸಲ್ಲಿಸಲಾಗುವುದು. ಅಲ್ಲಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಲಾಗುತ್ತದೆ. ಬಳಿಕ ಕಾಂಗ್ರೆಸ್ ಕಚೇರಿಯಲ್ಲಿ ಬಸವ ಜಯಂತಿ ಆಚರಣೆ ಮಾಡುವ ಮೂಲಕ ಬಸವಣ್ಣರವರಿಗೆ ಗೌರವ ಸಲ್ಲಿಸಿ ನಂತರ ಮಹದೇವಪ್ಪನವರ ಅನುಪಸ್ಥಿತಿಯಲ್ಲಿ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಅಂದು ಸಂಜೆ ಮೈಸೂರಿನಲ್ಲಿರುವ ಸಂಸದ ಸುನೀಲ್ ಬೋಸ್ ಅವರ ನಿವಾಸದಲ್ಲಿ ಹುಟ್ಟು ಹಬ್ಬವನ್ನು ವಿಶಿಷ್ಟವಾಗಿ ಆಚರಣೆ ಮಾಡಲಾಗುತ್ತದೆ. ಮಹದೇವಪ್ಪರಿಗೆ 74 ವರ್ಷ ತುಂಬಿದ ಹಿನ್ನೆಲೆಯಲ್ಲಿ 74 ಕೆ.ಜಿ. ಬೃಹತ್ ಕೇಕ್ ಕತ್ತರಿಸಿ ಹುಟ್ಟು ಹಬ್ಬ ಆಚರಿಸಿ ಕಾರ್ಯಕರ್ತರು ಸಂಭ್ರಮಿಸಲಿದ್ದು, ತಿ.ನರಸೀಪುರ ಹಾಗೂ ಮೈಸೂರಿನಲ್ಲಿ ನಡೆಯುವ ಎರಡೂ ಕಾರ್ಯಕ್ರಮಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕೆಂದು ಮಲ್ಲಿಕಾರ್ಜುನಸ್ವಾಮಿ ಮನವಿ ಮಾಡಿದರು.

ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ ಮಾತನಾಡಿ ಏಪ್ರಿಲ್ ತಿಂಗಳು ಹಲವಾರು ವಿಶೇಷತೆಗಳನ್ನು ಒಳಗೊಂಡಿದ್ದು ಡಾ.ಬಿ.ಆರ್.ಅಂಬೇಡ್ಕರ್, ಡಾ.ಬಾಬು ಜಗಜೀವನರಾಂ, ಬಸವಣ್ಣ ಅವರ ಜಯಂತಿ ಕಾರ್ಯಕ್ರಮದ ನಡುವೆ ನಮ್ಮ ಕ್ಷೇತ್ರದ ಜನಪ್ರಿಯ ಶಾಸಕರು, ಸಾಧನೆಗಳ ಮೇಲೆ ಸಾಧನೆ, ಅಭಿವೃದ್ಧಿಯ ಹರಿಕಾರರೂ ಆದ ಡಾ.ಹೆಚ್.ಸಿ.ಮಹದೇವಪ್ಪರವರ ಜನ್ಮದಿನ ಸಹ ಅಂದೇ ಆಗಿರುವುದರಿಂದ ನಿಜಕ್ಕೂ ಇದು ಸಂತಸದ ವಿಷಯವಾಗಿದೆ. ಮಹದೇವಪ್ಪರವರು ತಮ್ಮ ಆಡಳಿತಾವಧಿಯಲ್ಲಿ ಕ್ಷೇತ್ರ ಹಾಗು ರಾಜ್ಯಕ್ಕೆ ಹಲವಾರು ಉತ್ತಮವಾದ ಕೊಡುಗೆಗಳನ್ನು ನೀಡಿದ್ದು ಅವರು ಮತ್ತಷ್ಟು ವರ್ಷಗಳ ಕಾಲ ಅದಕ್ಕೂ ಮಿಗಿಲಾದ ಅಧಿಕಾರ ಹೊಂದಿ ರಾಜ್ಯವನ್ನು ಮತ್ತಷ್ಟು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಂತಾಗಲಿ ಎಂದು ಆಶಿಸಿದರು.

ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಮಾಜಿ ಸದಸ್ಯ ಗಣೇಶ್, ಡೈರಿ ಅಧ್ಯಕ್ಷ ರಂಗಪ್ಪ ರಾಮಲಿಂಗಯ್ಯ, ಅನೂಪ್ ಗೌಡ, ಶಿವಣ್ಣ ಆರ್.ಮಾದೇಶ್, ಮಹದೇವ ಪ್ರಸಾದ್, ಸುರೇಶ್ ಸೇರಿದಂತೆ ಮತ್ತಿತರರಿದ್ದರು.

ಭೂಸ್ವಾಧೀನ ವಿರೋಧಿಸಿ ರೈತರ ಪ್ರತಿಭಟನೆ

ಶಾಸಕ ದರ್ಶನ್ ಭೇಟಿ, ಸಮಸ್ಯೆ ಬಗೆಹರಿಸುವ ಭರವಸೆ

ನಂಜನಗೂಡು: ತಾಲೂಕಿನ ಮುದ್ದಹಳ್ಳಿ ಗ್ರಾಮದಲ್ಲಿ ಕೆಐಎಡಿಬಿ ಭೂಸ್ವಾಧೀನವನ್ನು ವಿರೋಧಿಸಿ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಶಾಸಕರಾದ ದರ್ಶನ್ ಧ್ರುವನಾರಾಯಣ್ ಭೇಟಿ ನೀಡಿ ರೈತರ ಸಮಸ್ಯೆಯನ್ನು ಆಲಿಸಿ ರೈತರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ರೈತ ಗುರುಸ್ವಾಮಿ ಮಾತನಾಡಿ ಕಳೆದ 24 ವರ್ಷಗಳ ಹಿಂದೆ ಕೆಐಡಿಬಿ ಮುದ್ದಹಳ್ಳಿ ಗ್ರಾಮದಲ್ಲಿ 448 ಎಕರೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭಿಸಿತು, ಆದರೆ ನಂತರ ಕೈ ಬಿಡಲಾಯಿತು, ಈ ಭಾಗದ ಹಲವಾರು ರೈತರು ತೆಂಗಿನ ತೋಟ, ಅಡಿಕೆ ತೋಟ, ರೇಷ್ಮೆ ಕಾರ್ಖಾನೆ, ಕೋಳಿ ಫಾರಂ ಸೇರಿದಂತೆ ಬಹು ಬೆಳೆಯ ಬೆಳೆಗಳನ್ನು ಬೆಳೆದು ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ, ಆದರೆ 2022 ರಲ್ಲಿ ಕೆಐಡಿಬಿ ಸಂಸ್ಥೆಯು ರೈತರ ಒಪ್ಪಿಗೆ ಪಡೆಯದೆ, ಗ್ರಾಮ ಸಭೆಯನ್ನು ನಡೆಸದೆ ಏಕಾಏಕಿ ತರಾತುರಿಯಲ್ಲಿ ನಿರ್ಧಾರ ಕೈಗೊಂಡು 2022ರಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ ಎಂದರು.



ಪ್ರತಿಭಟನಾಕಾರರನ್ನು ಭೇಟಿ ಮಾಡಿದ ಶಾಸಕ ದರ್ಶನ್ ಧ್ರುವನಾರಾಯಣ್.

2023ರಲ್ಲಿ ದರ ನಿಗದಿಪಡಿಸಲು ರೈತರನ್ನು ಆಹ್ವಾನಿಸಿದಾಗ ಈ ಬಗ್ಗೆ ಗೊತ್ತಾಗಿದೆ, ನಾವು ನಮ್ಮ ಭೂಮಿಯನ್ನು ಮಾರುವುದಿಲ್ಲ ಎಂದು ಅಂದಿನಿಂದಲೂ ವಿರೋಧ ವ್ಯಕ್ತಪಡಿಸಿದ್ದರೂ ಸಹ ಕೆಐಡಿಬಿ ಸಂಸ್ಥೆ ವಿರೋಧ ವ್ಯಕ್ತಪಡಿಸಿದ್ದ ಸುಮಾರು 15 ರೈತರ ಭೂಸ್ವಾಧೀನ ಪ್ರಕ್ರಿಯೆಗೆ ಹೊಸದಾಗಿ ಸೇರ್ಪಡೆಗೊಳಿಸಿ ಆರ್‌ಟಿಸಿಯಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವುದಾಗಿ ನಮೂದಿಸಲಾಗಿದೆ ಆದ್ದರಿಂದ ಶಾಸಕರು ಈ ಭೂಸ್ವಾಧೀನ ಪ್ರಕ್ರಿಯೆಯ ಅಧಿಸೂಚನೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ರೈತರಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು.

ಈ ವೇಳೆ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ. ಮಹೇಶ್, ರೈತ ಮುಖಂಡರಾದ ಮುದ್ದಹಳ್ಳಿ ಪ್ರಕಾಶ್, ಮಂಜುನಾಥ್ ಸೇರಿದಂತೆ ಮುದ್ದಹಳ್ಳಿ ಗ್ರಾಮದ ರೈತರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಸಂತ ನೋರ್ಬರ್ಟ್ ಶಾಲೆಗೆ ಸತತ ಐದನೇ ವರ್ಷವೂ ಶೇ.100ರಷ್ಟು ಫಲಿತಾಂಶ



ಮಹೇಶ್ವರಿ ಲೋಕವರ್ಧನ್ ವಿಶ್ರುತ್ ವರಲಕ್ಷ್ಮಿ ಏಯ್ಮನ್

ತಿ.ನರಸೀಪುರ, ಏ.18– ತಾಲೂಕು, ಚೌಹಳ್ಳಿ ಗ್ರಾಮದ ವ್ಯಾಪ್ತಿಯ ಕೊಳ್ಳೆಗಾಲ ಮುಖ್ಯ ರಸ್ತೆಯಲ್ಲಿರುವ ಸಂತ ನೋರ್ಬರ್ಟ್ ಶಾಲೆಗೆ 2025–26ನೇ ಸಾಲಿನ ಸಿಬಿಎಸ್‌ಸಿ 10 ನೇ ತರಗತಿಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ.

ಸತತವಾಗಿ 5ನೇ ವರ್ಷವೂ ಶೇಕಡ 100 ಫಲಿತಾಂಶ ಬಂದಿದೆ. ಒಟ್ಟು 79 ವಿದ್ಯಾರ್ಥಿಗಳಲ್ಲಿ 32 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 36 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 11 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಮಹೇಶ್ವರಿ.ಟಿ.ಎಸ್ ಶೇ.95 ಅಂಕಗಳಿಸಿ ಪ್ರಥಮ ಸ್ಥಾನದಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿ ಲೋಕವರ್ಧನ್.ಕೆ ಶೇ.93.08, ಮೂರನೇ ಸ್ಥಾನದಲ್ಲಿ ವಿಶ್ರುತ್.ವಿ ಶೇ.93.4, 4 ಮತ್ತು 5ನೇ ಸ್ಥಾನದಲ್ಲಿ ವರಲಕ್ಷ್ಮಿ ಶೇ.93.2, ಸೋಗ್ರಾ ಏಯ್ಮನ್ ಶೇ.93 ರಷ್ಟು ಅಂಕ ಪಡೆದು ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ.

ಈ ಸಂದರ್ಭದಲ್ಲಿ ವ್ಯವಸ್ಥಾಪಕರಾದಂತಹ ಫಾದರ್ ಬೆನ್ನಿ ಥಾಮಸ್, ಹಣಕಾಸಿನ ವ್ಯವಸ್ಥಾಪಕರಾದ ಫಾದರ್ ರೆನಿನ್ ಸೆಬಾಸ್ಟಿಯನ್, ಪ್ರಾಂಶುಪಾಲೆ ಸಿಸ್ಟರ್ ಸುಮಿ, ಶಿಕ್ಷಕ ಮತ್ತು ಶಿಕ್ಷಕೇತರ ವೃಂದದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಕನ್ನಡಾಂಬೆ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಏ.20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಕುವೆಂಪು ನಗರ ಕಾಂಪ್ಲೆಕ್ಸ್, ನೃಪತುಂಗ ರಸ್ತೆ, ಕೆ.ಹೆಚ್.ಬಿ 1 ರಿಂದ 4ನೇ ಹಂತ, ಗಿರಿಯಾಸ್, ಇ ಅಂಡ್‌ಎಫ್ ಬ್ಲಾಕ್ ಸುತ್ತಮುತ್ತಲಿನ ಪ್ರದೇಶಗಳು, ಬುಲೆಟ್ ಶೋರೊಂ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕಾಡಿನಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಚಾಲನೆ

ಆದಿವಾಸಿಗಳಿಗೆ ಮನೆ ನಿರ್ಮಿಸಲು ಅರಣ್ಯ ಇಲಾಖೆ ಅನುಮತಿ ನೀಡುತ್ತಿಲ್ಲ

ಹೆಚ್.ಡಿ.ಕೋಟೆ: ಕಳೆದೊಂದು ವರ್ಷದಿಂದ ಮೇಟಿಕುಪ್ಪೆ ಅರಣ್ಯ ವಲಯದಲ್ಲಿ ಹುಲಿ ಮತ್ತು ಆನೆಗಳ ದಾಳಿ ನಡೆಯದೇ ಇರುವುದಕ್ಕೆ ಇಲ್ಲಿನ ಅರಣ್ಯ ಸಿಬ್ಬಂದಿಗಳ ಸೇವೆಯೇ ಕಾರಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಬೊಮ್ಮಲಾಪುರ ಬೂದನೂರು ಗ್ರಾಮದ ಸಂಪರ್ಕ ರಸ್ತೆಯ ಸೇತುವೆ ಬಳಿಯಿಂದ ಬಸವರಾಜನಕಟ್ಟೆ ಯವರೆಗೆ ಅರಣ್ಯದಂಚಿನ 2.9 ಕಿಲೋಮೀಟರ್ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಸುಮಾರು 5 ಕೋಟಿ ವೆಚ್ಚದಲ್ಲಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬೊಮ್ಮಲಾಪುರ ಹಾಡಿಯ ಆದಿವಾಸಿಗಳಿಗೆ 10 ಮನೆಗಳು ಮಂಜೂರಾಗಿದ್ದು, ಅರಣ್ಯ ಇಲಾಖೆಯಿಂದ ಮನೆ ನಿರ್ಮಾಣಕ್ಕೆ ಅನುಮತಿ ನೀಡುತ್ತಿಲ್ಲ, ಆದ್ದರಿಂದ ಅರಣ್ಯ ಇಲಾಖೆಯು ಮತ್ತೊಮ್ಮೆ ಪರಿಶೀಲನೆ ನಡೆಸಿ ಮನೆ ನಿರ್ಮಿಸಲು ಅನುಮತಿ ನೀಡಬೇಕು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಭಾಗದಲ್ಲಿ 9 ಗ್ರಾಮಗಳ 19 ಕೆರೆಗಳು ಬೇಸಿಗೆಯಲ್ಲಿ ಬತ್ತಿರುವುದು ಗಮನಕ್ಕೆ ಬಂದಿದೆ, ಈ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿಪೂಜೆ ನೆರವೇರಿಸಿದರು.

ಡಿಎಫ್‌ಓ ಸೀಮಾ ಮಾತನಾಡಿ ಕಾಡಂಚಿನ ಭಾಗದಲ್ಲಿ ಕಾಡು ಪ್ರಾಣಿಗಳ ಉಪಟಳ ದಿನದಿಂದ ದಿನಕ್ಕೆ ಹೆಚ್ಚಿದ್ದರಿಂದ 2.9 ಕಿಲೋಮೀಟರ್ ಉದ್ದದ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ 5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ, ಇದರಿಂದ ಸಂಪೂರ್ಣ ಉಪಟಳ ನಿಲ್ಲಿಸಲು ಸಾಧ್ಯವಾಗದಿದ್ದರೂ ಶೇ.90ರಷ್ಟು ಕಡಿಮೆಯಾಗಲಿದೆ ಎಂದರು.

ರೈತ ಮುಖಂಡ ಉಡ ನಾಗರಾಜು ಮಾತನಾಡಿ ಬೂದನೂರು ಗ್ರಾಮದಲ್ಲಿ ಒಂಟಿ ಕಾಡಾನೆಯೊಂದರ ಉಪಟಳ ಹೆಚ್ಚಾಗಿದೆ, ಅದರಿಂದ ರೈತರು ಬೆಳೆದ ಬೆಳೆ ಸಂಪೂರ್ಣ ಹಾನಿ ಮಾಡುತ್ತಿದೆ, ಜೊತೆಗೆ ಜಮೀನಿನಲ್ಲಿರುವ ಗುಡಿಸಲು ಹಾಗೂ ಹುಲ್ಲಿನ ಬಣಿವೆಗಳನ್ನು ಹಾನಿ ಮಾಡುತ್ತಿರುವುದರಿಂದ ರೈತರು ಜಮೀನುಗಳಿಗೆ ಬರಲು ಹೆದರುತ್ತಿದ್ದಾರೆ, ಆದ್ದರಿಂದ ಈ ಆನೆಯನ್ನು ಕಾರ್ಯಾಚರಣೆ ಮೂಲಕ ಸೆರೆಹಿಡಿಯುವಂತೆ ಒತ್ತಾಯಿಸಿದರು.

ಎಸಿಎಫ್ ಲಕ್ಷ್ಮೀನಾರಾಯಣ್, ಆರ್‌ಎಫ್‌ಓ ವಿನೋದ್ ಗೌಡ, ಮುಖಂಡರುಗಳಾದ ಬಿ.ವಿ.ಬಸವ ರಾಜು, ಕಾಳೇಗೌಡ, ಸುರೇಶ್, ಚಂದ್ರಶೇಖರ್, ಹೊಸಹಳ್ಳಿ ಆನಂದ, ಅಜರ್, ನಾಗರಾಜು, ರವಿಕುಮಾರ್, ಲೋಕೇಶ್, ಕಾಳಕಲ್ಕರ್, ಮುರಳಿ, ಬೆಟ್ಟಸ್ವಾಮಿ, ರವಿವರ್ಮ, ನಂಜುಂಡೇಗೌಡ ಗ್ರಾಮಸ್ಥರು ಹಾಜರಿದ್ದರು.

ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ



ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡುತ್ತಿರುವ ಶಾಸಕ ದರ್ಶನ್.

ಮಲ್ಕುಂಡಿ: ಗ್ರಾಮೀಣ ಭಾಗದ ಮುಖ್ಯ ರಸ್ತೆಗಳು ಅಭಿವೃದ್ಧಿಯಾದರೆ ಹೆಚ್ಚಿನ ಮೂಲ ಸೌಕರ್ಯ ಸಿಗುತ್ತದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಸಮೀಪದ ಕೊತ್ತನಹಳ್ಳಿ ಮತ್ತು ನಾಗಣಾಪುರ ಗ್ರಾಮದಲ್ಲಿ 40 ಲಕ್ಷ ರೂ ವೆಚ್ಚದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಅನುದಾನದಲ್ಲಿ 25 ಕೋಟಿ ಅನುದಾನವನ್ನು ಮೊದಲ ಹಂತದಲ್ಲಿ ನೀಡಿದ್ದಾರೆ. ಅದರಲ್ಲಿ ಕ್ಷೇತ್ರದ ಗ್ರಾಮೀಣ ಭಾಗದ ಹಳ್ಳಿಗಳ ಅಭಿವೃದ್ಧಿಗೆ ಸಮರ್ಪಕವಾಗಿ ಅನುದಾನ ನೀಡಲಾಗಿದೆ ಎಂದರು.

ನಮ್ಮ ಸರ್ಕಾರ ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವುದೇ ಈಗಾಗಲೇ ನಡೆಯುತ್ತಿರುವ ಕಾಮಗಾರಿಗಳೇ ಸಾಕ್ಷಿಯಾಗಿದೆ. ನನ್ನ ಅವಧಿಯಲ್ಲಿ ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದೇನೆ. ಇನ್ನೂ ನಮ್ಮ ಸರ್ಕಾರ ಅಧಿಕಾರದಲ್ಲಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವುದೇ ನನ್ನ ಗುರಿಯಾಗಿದೆ ಎಂದು ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಕೆ ಮಾರುತಿ, ಗೋವಿಂದರಾಜು, ಗ್ರಾ ಪಂ ಮಾಜಿ ಸದಸ್ಯ ಸಿದ್ದರಾಜು,ಚೆನ್ನಕೇಶವ, ಎಇಇ ರಾಜು, ರಮೇಶ್, ಸೇರಿದಂತೆ ಪ್ರಮುಖರು ಹಾಜರಿದ್ದರು.

ಮೂರನೇ ಪುಟದಿಂದ

ಎಂಡಿಎ ಮೀನಾಮೇಷ!

ಅನುಮೋದನೆಯನ್ನೂ ಪಡೆಯದೆ ಸದರಿ ಮಾರಾಟ ಕ್ರಯಪತ್ರಗಳನ್ನು ನೀಡಿದ್ದಾರೆ. ಈ ನಿವೇಶನಗಳು ತಲಾ ಸುಮಾರು 80 ಲಕ್ಷ ಬೆಲೆ ಬಾಳುವಂತಿದ್ದರೂ ಕಡಿಮೆ ಮೊತ್ತಕ್ಕೆ ಪರಭಾರೆ ಮಾಡಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂ. ನಷ್ಟ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಮೂಲಕ ಮುಡಾ (ಈಗಿನ ಎಂಡಿಎ)ದಲ್ಲಿ ನಡೆದಿರುವ ಸಾಲು ಸಾಲು ಹಗರಣಗಳ ಸಾಲಿನಲ್ಲಿ ನಿಯಮಬಾಹಿರವಾಗಿ 48 ಕ್ರಯ ಪತ್ರ ವಿತರಿಸಿರುವುದೂ ಸೇರ್ಪಡೆಗೊಂಡಂತಾಗಿದೆ.

ಸರ್ಕಾರದ ಆದೇಶ ಲೆಕ್ಕಕ್ಕಿಲ್ಲ: ರಾಜ್ಯ ಸರ್ಕಾರ 30.11.2024ರಂದು ರದ್ದುಪಡಿಸುವ ಆದೇಶ(ಸರ್ಕಾರಿ ಆದೇಶ ಸಂಖ್ಯೆ–ಯುಡಿಡಿ 149 ಎಂವೈಎಪಿ 2023) ಹೊರಡಿಸಿದ್ದರೂ ಈ ನೋಂದಾಯಿತ ದಾಖಲೆಗಳನ್ನು ರದ್ದುಪಡಿಸಲು ಎಂಡಿಎ ಅಧಿಕಾರಿಗಳು ಈವರೆಗೂ ಯಾವುದೇ ಕ್ರಮ ವಹಿಸಿಲ್ಲ. ಅಲ್ಲದೆ, ಈ ಕ್ರಯ ಪತ್ರಗಳ ರದ್ದತಿಗೆ ಕೋರಿ ನ್ಯಾಯಾಲಯಕ್ಕೂ ಅರ್ಜಿ ಸಲ್ಲಿಸಿಲ್ಲ. ಯಾವುದೇ ನೋಂದಾಯಿತ ಕ್ರಯಪತ್ರಗಳು ಸಿವಿಲ್ ನ್ಯಾಯಾಲಯದ ಆದೇಶದ ಮೂಲಕವೇ ರದ್ದುಪಡಿಸಬೇಕೆಂಬ ವಾಸ್ತವದ ಅರಿವಿದ್ದರೂ ಸುಮ್ಮನಿದ್ದಾರೆ. ಸರ್ಕಾರದ ಆದೇಶ ನಮಗೆ ಲೆಕ್ಕಕ್ಕೇ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ. ಏನೂ ಮಾಡದೆ ಇರುವ ಮೂಲಕ ಯಾವುದೋ ಹಿತಾಸಕ್ತಿಗಳ ಹಿತ ಕಾಯುತ್ತಿದ್ದಾರೆ. ಇದರಿಂದ ಕಾನೂನು ಬಾಹಿರ ಫಲಾನುಭವಿಗಳಿಗೆ ಅನುಕೂಲವಾಗುವುದಲ್ಲದೆ ನಿವೇಶನಗಳನ್ನು ಹಿಂಪಡೆಯುವಿಕೆ ಪ್ರಕ್ರಿಯೆ ಮತ್ತಷ್ಟು ಜಟಿಲವಾ ಗುತ್ತದೆ. ಒಂದು ದಿನ ಸಾವಿರಾರು ಕೋಟ್ಯಾಂತರ ರೂ. ಆಸ್ತಿ ಪರರ ಪಾಲಾಗುತ್ತದೆ ಎಂದು ಎಂಡಿಎ ಅಧಿಕಾರಿಗಳ ಜಾಣನಡೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ತೆರೆಮರೆಯಲ್ಲಿ ಕರಾಮತ್ತು: ಎಂಡಿಎ ಅಧಿಕಾರಿಗಳ ವಿಳಂಬ ಧೋರಣೆ ಹಾಗೂ ಕಾನೂನು ಕ್ರಮದ ಬಗ್ಗೆ ನಿರ್ಲಕ್ಷ್ಯ ಧೋರಣೆಯಿಂದಾಗಿ ಚಾಮುಂಡೇಶ್ವರಿನಗರ ಸರ್ವೋದಯ ಸಂಘವು ಉಳಿದ ನಿವೇಶನಗಳನ್ನು ಕ್ರಮಬದ್ಧಗೊಳಿಸಿಕೊಳ್ಳುವ ಕಸರತ್ತು ನಡೆಸಿದೆ. ಈ ನಿಟ್ಟಿನಲ್ಲಿ ದೊಡ್ಡ ಮಟ್ಟದಲ್ಲೇ ಎಲ್ಲಾ ರೀತಿಯ ಪ್ರಯತ್ನಗಳಾಗುತ್ತಿವೆ ಎಂಬ ಮಾಹಿತಿ ಲಭ್ಯವಾಗಿದೆ. ಇದಕ್ಕೆಲ್ಲಾ ಎಂಡಿಎ ಅಧಿಕಾರಿಗಳು ಹಾಗೂ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ತಕ್ಷಣ ತಡೆಯಬೇಕು: ಇಂತಹ ಪ್ರಕ್ರಿಯೆ ಮುಂದುವರೆದಿದ್ದರೆ ಸರ್ಕಾರ ಈ ಕೂಡಲೇ ಅದನ್ನು ರದ್ದುಗೊಳಿಸಬೇಕು. ದಿನಾಂಕ 21.03.2023ರಂದು ಮುಡಾದಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಗೊಳಿಸಿರುವ ಬಗ್ಗೆ ಅಧಿಕಾರಿಗಳಿಗೆ ಪುನಃ ಎಚ್ಚರಿಕೆ ನೀಡಿ, 48 ನಿವೇಶನಗಳಿಗೆ ಸಂಬಂಧಿಸಿದ ನೋಂದಾಯಿತ ಕ್ರಯಪತ್ರಗಳ ರದ್ಧತಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಮೊಕದ್ದಮೆ ದಾಖಲಿಸುವಂತೆ ನಿರ್ದೇಶನ ನೀಡಬೇಕು. ಹಾಗೆಯೇ ದಟ್ಟಗಳ್ಳಿ ಸರ್ವೆ ನಂ.15,27,32,38,40 ಹಾಗೂ 41ರಲ್ಲಿ ಉಳಿದ ನಿವೇಶನಗಳು ಅಥವಾ ಪ್ರದೇಶವನ್ನು ಹಂಚಿಕೆ ಮಾಡದಂತೆ ಎಚ್ಚರಿಕೆ ನೀಡಬೇಕು. ಹಾಗೆಯೇ ಈ ಪ್ರಕರಣ ಸಂಬಂಧ ಕಳೆದ 16 ತಿಂಗಳುಗಳಿಂದ ಯಾವುದೇ ಕ್ರಮ ವಹಿಸದೆ ನಿರ್ಲಕ್ಷಿಸಿರುವ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅವರು ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಸರ್ಕಾರದ ಕ್ರಮವೇನು?: ಮುಡಾ ಹೆಸರು ಎಂಡಿಎ ಆಗಿ ಬದಲಾಗಿದೆಯೇ ಹೊರತು ಅಕ್ರಮ, ಅವ್ಯವಹಾರಗಳು ಮುಂದುವರೆದಿವೆ. ಅಧಿಕಾರಿಗಳ ಧೋರಣೆ ಹಾಗೆಯೇ ಮುಂದುವರೆದಿದೆ ಎಂದು ಸದನದಲ್ಲೇ ಗಂಭೀರ ಆರೋಪ ಮಾಡಿದ್ದ ಶಾಸಕ ಟಿ.ಎಸ್. ಶ್ರೀವತ್ಸ ಅವರು, ಇದೀಗ ದಟ್ಟಗಳ್ಳಿ ವಿವಿಧ ಸರ್ವೆ ನಂಬರ್‌ಗಳ ಕೋಟ್ಯಾಂತರ ಮೌಲ್ಯದ ಭೂಮಿ ರಕ್ಷಣೆ ವಿಚಾರದಲ್ಲೂ ಅಧಿಕಾರಿಗಳು ಜಡ್ಡುತನ ತೋರಿರುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದರೆ ಸಾರ್ವಜನಿಕ ಆಸ್ತಿ ರಕ್ಷಣೆ ನಿಟ್ಟಿನಲ್ಲಿ ಬದ್ಧತೆ ಯಿಂದ ಸರ್ಕಾರ ಯಾವಾಗ, ಯಾವ ಕ್ರಮ ವಹಿಸುವುದೋ ಕಾದು ನೋಡಬೇಕು.

ಪ್ರಕರಣದ ಹಿನ್ನೆಲೆ

ದಟ್ಟಗಳ್ಳಿಯ ಸದರಿ ಸರ್ವೆ ನಂಬರ್ ವ್ಯಾಪ್ತಿಯಲ್ಲಿ 136 ಮಂದಿ 1982ರಲ್ಲಿ ಭೂಮಾಲೀಕರಿಂದ ನೋಂದಾಯಿತವಲ್ಲದ ಕ್ರಯದ ಕರಾರುಪತ್ರದ ಮೂಲಕ ನಿವೇಶನ ಖರೀದಿಸಿದ್ದಾರೆಂದು ಅಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಸದರಿ ಜಾಗದಲ್ಲಿ ನಿರ್ಮಿಸಲಾಗಿದ್ದ ಮನೆ ಗಳನ್ನು ಅನಧಿಕೃತ ಎಂದು ಪರಿಗಣಿಸಿ 1985ರ ಮೇ 9ರಂದು ತೆರವುಗೊಳಿಸಿತ್ತು. ಇದನ್ನು ಪ್ರಶ್ನಿಸಿ ನಿವೇಶನ ಮಾಲೀಕರು ನ್ಯಾಯಾಲಯದ ಮೊರೆ ಹೋದರು. ನಂತರದಲ್ಲಿ ಚಾಮುಂಡೇಶ್ವರಿನಗರ ಸರ್ವೋದಯ ಸಂಘ ರಚಿಸಿಕೊಂಡು, ನಿವೇಶನ ಉಳಿಸಿಕೊಳ್ಳುವ ಪ್ರಯತ್ನ ಮುಂದುವರೆಸಿದರು. ಪ್ರಸ್ತುತವೂ ಪ್ರಕರಣ ನ್ಯಾಯಾಲಯದಲ್ಲಿದೆ. ಈ ನಡುವೆ 21–03–2023ರ ಮುಡಾ ಸಭೆಯಲ್ಲಿ ಚಾಲ್ತಿಯಲ್ಲಿರುವ ನಿವೇಶನ ಮೌಲ್ಯವನ್ನು ಪಾವತಿಸಿಕೊಂಡು ನಿವೇಶನ ಮಂಜೂರು ಮಾಡಲು ಕ್ರಮ ವಹಿಸಲು ನಿರ್ಧರಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ನಂತರ ಸರ್ಕಾರ ಮುಡಾ ಆಯುಕ್ತರಿಗೆ ಕಾರಣ ಕೇಳಿ 08–04–2024ರಂದು ನೋಟಿಸ್ ನೀಡಿ, ಈ ಸಂಬಂಧ ಸ್ಪಷ್ಟನೆ ಕೇಳಿತ್ತು. ಅಂತೆಯೇ ಅದೇ ತಿಂಗಳ 20ರಂದು ಆಯುಕ್ತರು ಸ್ಪಷ್ಟೀಕರಣ ನೀಡಿದ್ದರು. ಆದರೆ ಸದರಿ ವಿಷಯದಲ್ಲಿ ನಿವೇಶನದ ಮೌಲ್ಯ ಪರಿಗಣಿಸಿರುವ ಬಗ್ಗೆ ವಿವರ ನೀಡಿ, ಪ್ರಾಧಿಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗುವುದಿಲ್ಲ ಎಂದು ತಿಳಿಸಲಾಗಿದೆ. ಆದರೆ ನಿಯಮಾನುಸಾರ ಸರ್ಕಾರದ ಪೂರ್ವಾನುಮತಿ ಪಡೆದು, ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ ನಂತರ ಪೂರ್ಣ ನಕ್ಷೆ ಹಾಗೂ ಅಂದಾಜು ವೆಚ್ಚಕ್ಕೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆಯಬೇಕು. ನಂತರ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಆದರೆ ಈ ಪ್ರಕ್ರಿಯೆ ಪಾಲಿಸದೇ ನೇರವಾಗಿ ನಿವೇಶನಗಳನ್ನು ಮಾಡಿರುವುದು ಕಾಯ್ದೆ ಹಾಗೂ ನಿಯಮಗಳಿಗೆ ವ್ಯತಿರಿಕ್ತವಾದ ಕ್ರಮವಾಗಿದೆ.

ಮುಡಾ ಆಯುಕ್ತರ ಸ್ಪಷ್ಟೀಕರಣ ಪರಿಶೀಲಿಸಿದಾಗ ನಿಯಮ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಬಹುಮುಖ್ಯವಾಗಿ ನ್ಯಾಯಾಲಯವು 1998ರಲ್ಲಿ ಸರ್ಕಾರ ಹಾಗೂ ಚಾಮುಂಡೇಶ್ವರಿ ನಗರ ಸರ್ವೋದಯ ಸಂಘದ ಅರ್ಜಿಗಳನ್ನು ವಜಾಗೊಳಿಸಿರುವುದನ್ನು 21–03–2023ರ ಮುಡಾ ಸಭೆಯ ವಿಷಯ 13(4)ರಲ್ಲಿ ಪರಿಗಣಿಸದೇ ತೀರ್ಮಾನಿಸಿರುವುದು ಕಾನೂನುಬಾಹಿರವಾಗಿದ್ದು, ಈ ಸಂಬಂಧ ಆಯುಕ್ತರು ನೀಡಿರುವ ಸ್ಪಷ್ಟೀಕರಣ ಪರಿಗಣನಾರ್ಹವಲ್ಲ ಎಂದು ಪ್ರಾಧಿಕಾರದ ನಿರ್ಣಯವನ್ನು ರದ್ದುಪಡಿಸಿ 30–11–2024ರಲ್ಲಿ ಸರ್ಕಾರ ಆದೇಶಿಸಿದೆ.

ರಘು ಕೌಟಿಲ್ಯರ ಭೂಮಿ ಪುತ್ರಿ ಎರಡನೇ ಆವೃತಿ ಲೋಕಾರ್ಪಣೆ

ಮೈಸೂರು, ಏ.18(ಎಸ್‌ಪಿಎನ್)– ಸಾಹಿತಿ, ಬಿಜೆಪಿ ಮುಖಂಡ ಆರ್.ರಘು(ಕೌಟಿಲ್ಯ) ಅವರ 'ಭೂಮಿ ಪುತ್ರಿ' ಕವನ ಸಂಕಲನದ ಎರಡನೇ ಆವೃತಿ ಶನಿವಾರ ಬಿಡುಗಡೆಗೊಂಡಿತು.

ಮೈಸೂರು–ನಂಜನಗೂಡು ಹೆದ್ದಾರಿ ಟೋಲ್ ಸಮೀಪದ 'ನಿರ್ಮಲ ಧಾಮ'ದಲ್ಲಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕಿ ಶುಭ ರಾಘವೇಂದ್ರ ಅವರು ಕೃತಿ ಬಿಡುಗಡೆ ಮಾಡಿ, ಜಾನಪದ ಗೀತೆಯನ್ನು ಮನೋಜ್ಞವಾಗಿ ಹಾಡಿದರು.

ಬಳಿಕ ಖ್ಯಾತ ಅಂಕಣಕಾರ ಹಾಗೂ ಲೇಖಕ ಗುಬ್ಬಿಗೂಡು ರಮೇಶ್ ಕೃತಿ ಕುರಿತು ಮಾತನಾಡಿ, ಆರ್.ರಘು ಕೌಟಿಲ್ಯ ಬರಹಗಾರರಾಗಿ, ರಾಜಕಾರಣಿಯಾಗಿ, ಶಿಕ್ಷಣ ತಜ್ಞರಾಗಿ, ಕಲಾ ಪೋಷಕರಾಗಿ ಸಾರ್ವಜನಿಕ ಸೇವೆಯಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಇದೆಲ್ಲದರ ನಡುವೆಯೂ 'ಭೂಮಿ ಪುತ್ರಿ' ಕವನ ಸಂಕಲನವನ್ನು ಹೊರತಂದಿದ್ದಾರೆ. ಜೋಡಿ ಹಕ್ಕಿಗಳು ಬೇರೆಯಾದಾಗ, ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡಾಗ ಕಾಡುವ ಭಾವನೆಗಳು ಈ ಕೃತಿಯಲ್ಲಿ ಅಡಕವಾಗಿದೆ ಎಂದರು.



ಲೇಖಕ ಆರ್.ರಘು ಕೌಟಿಲ್ಯ ಅವರ 'ಭೂಮಿ ಪುತ್ರಿ' ಕವನ ಸಂಕಲನದ ಎರಡನೇ ಆವೃತಿಯನ್ನು ಗಾಯಕಿ ಶುಭಾ ರಾಘವೇಂದ್ರ ಬಿಡುಗಡೆ ಮಾಡಿದರು. ಅಂಕಣಕಾರ ಗುಬ್ಬಿಗೂಡು ರಮೇಶ್, ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಕೃತಿ ಕರ್ತೃ ರಘು ಕೌಟಿಲ್ಯ ಮತ್ತಿತರರು ಉಪಸ್ಥಿತರಿದ್ದರು.

'ಭೂಮಿ ಪುತ್ರಿ' ಬೆನ್ನುಡಿ ಬರೆದಿರುವ ಮನೋವಿಜ್ಞಾನಿ ಕಪಿಲಾ ಶ್ರೀಧರ್ ಉಲ್ಲೇಖಿಸಿರುವಂತೆ ಜೋಡಿ ಹಕ್ಕಿಗಳಲ್ಲಿ ಒಂದು ಹಾರಿಹೋದ ಮೇಲೆ ಉಳಿಯುವ ಹಕ್ಕಿ ಆಗುವ ಅನುಭವವೇ ಪ್ರತೀ ಜೀವದ ಬದುಕಿನ ಗಾಥೆ. ಭೂಮಿಪುತ್ರಿ ಶ್ರೀಮತಿ ನಿರ್ಮಲ ಅವರು ಬದುಕಿದ್ದಾಗ ರಘು ಅವರ ಭೇಟಿಗೆ ಹೋದಾಗಲೆಲ್ಲಾ ಪ್ರೀತಿಯಿಂದ ಕಂಡು, ಬಗೆಬಗೆಯ ತಿಂಡಿ ನೀಡುತ್ತಿದ್ದರು. ಹಸಿದು ಬಂದವರಿಗೆ ಊಟ ಹಾಕುತ್ತಿದ್ದರು. ಸೌಮ್ಯ ಸ್ವಭಾವದ, ಶಾಂತ ಮನಸ್ಥಿತಿಯ ನಿರ್ಮಲ ಅವರು, ತಮ್ಮ ಬಂಧು–ಬಾಂಧವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾರೆ ಎಂಬ ಮಾತಿನಂತೆ ರಘು ಅವರ ಯಶಸ್ಸಿಗೆ ನಿರ್ಮಲ ಅವರು ಬೆನ್ನೆಲುಬಾಗಿದ್ದರು ಎಂದು ನೆನೆದರು.

ರಘು ಕೌಟಿಲ್ಯ ರಚಿಸಿರುವ 'ಹೃದಯದಲಿ ಬರೆದು ಹೋಗಿರುವೆ, ನೀನಿದ್ದ ಪ್ರತಿಕ್ಷಣದ ನೆನಪುಗಳ, ನೆನಪುಗಳೇ ಎನಗೆ ಉಳಿದಿರುವ ಆಸ್ತಿ, ಗತಿಸಿ ಹೋಗುತ್ತಿವೆ ದಿನಗಳು, ಬರೀ ಶೂನ್ಯವಲ್ಲ ಮನವ ಮೀಟುವ ಶೂಲವು' ಎಂಬ ಕವಿತೆ ಅದ್ಭುತವಾಗಿದೆ. ಹಲವು ಕಾವ್ಯಗಳು ಸುಖೀ ದಾಂಪತ್ಯದ ಸಖಿ ಗೀತೆಯಾಗಿ, ಕಾವ್ಯ ಗಂಗೆಯಲ್ಲಿ 'ನಿರ್ಮಲಾನಂದ' ಸೃಷ್ಟಿಸಿವೆ ಎಂದು ತಿಳಿಸಿದರು.

ಭಾರತೀಯ ಪರಂಪರೆಯಲ್ಲಿ ದಾಂಪತ್ಯ ಜೀವನಕ್ಕೆ ಮಹತ್ವದ ಸ್ಥಾನವಿದೆ. ದಾಂಪತ್ಯ ಜೀವನ ಬದುಕಿನ ದೊಡ್ಡ ಹೆಜ್ಜೆಯ ಗುರುತು. ಈ ಪುಸ್ತಕ ಭಾವಲೋಕದ ತೀವ್ರತೆಯನ್ನು ಹಿಡಿದಿಟ್ಟುಕೊಂಡಿದೆ. ಹೆಜ್ಜೆ ಹೆಜ್ಜೆಗೂ ನಿರ್ಮಲ ನೆನಪುಗಳನ್ನು ಪದ್ಯ–ಗದ್ಯದ ಮೂಲಕ ಅನಾವರಣಗೊಳಿಸಿದ್ದಾರೆ. ಇದರಿಂದ ನಿರ್ಮಲಾ ಅವರ ಮೇಲಿನ ಗೌರವ ಮತ್ತಷ್ಟು ಹೆಚ್ಚಿಸುತ್ತದೆ. ಲೇಖಕರು ಪ್ರಾಯಶ್ಚಿತದ ಮೂಲಕ ತಮ್ಮ ಆತ್ಮವನ್ನು ತಾವೇ ನಿಂದಿಸಿಕೊಂಡಿದ್ದಾರೆ. ಆಕೆಯನ್ನು ಉಳಿಸಿಕೊಳ್ಳಬೇಕಿತ್ತು. ಆದರೆ, ಆಗಲಿಲ್ಲ ಎಂದು ತಮ್ಮ ಜೀವನಶೈಲಿಯನ್ನು ಆತ್ಮಾವಲೋಕನ ಮಾಡಿಕೊಳ್ಳುವ ಸಾಲುಗಳು ಪದ್ಯಗಳಲ್ಲಿವೆ. ಕೇವಲ ಭಾವುಕ ಕವಿತೆಗಳಲ್ಲ. ನಿರ್ಮಲ ಸತ್ಯ ಪ್ರತಿಬಿಂಬ ಇದಾಗಿದೆ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಆಯಾಮ ಅಕಾಡೆಮಿ ವಿದ್ಯಾರ್ಥಿಗಳು ವಿದುಷಿ ಡಾ.ಶಾಂಭವಿ ಸ್ವಾಮಿ ಅವರ ನಿರ್ದೇಶನದಲ್ಲಿ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯಗುಚ್ಛವನ್ನು 'ಕಾವ್ಯ–ನೃತ್ಯ–ರೂಪಕ'ವಾಗಿ ಪ್ರಸ್ತುತಪಡಿಸಿದರು. ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಭೂಮಿ ಪುತ್ರಿ ಕವನ ಸಂಕಲನದ ಕರ್ತೃ ರಘು ಆರ್.ಕೌಟಿಲ್ಯ, ನೈಪುಣ್ಯ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಗುರುರಾಜ್ ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರಿ ನೌಕರರಿಗೆ ಶೇ.2 ತುಟ್ಟಿಭತ್ಯೆ ಹೆಚ್ಚಳ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ, ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಶನಿವಾರ ಗುಡ್ ನ್ಯೂಸ್ ನೀಡಿದ್ದು, ತುಟ್ಟಿಭತ್ಯೆಯನ್ನು ಶೇ.2 ರಷ್ಟು ಹೆಚ್ಚಳ ಮಾಡಿದೆ.

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ(ಡಿಎ)ಯನ್ನು ಶೇ.2 ರಷ್ಟು ಹೆಚ್ಚಳ ಮಾಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಇದರೊಂದಿಗೆ ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ.58 ರಿಂದ ಶೇ. 60ಕ್ಕೆ ಏರಿಕೆಯಾಗಲಿದೆ.

ಈ ಡಿಎ ಹೆಚ್ಚಳವು ಜನವರಿ 1, 2026 ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೆ ಬರಲಿದೆ. ಇದರಿಂದ 1.15 ಕೋಟಿಗೂ ಹೆಚ್ಚು ಕೇಂದ್ರ ಸರ್ಕಾರಿ ನೌಕರರು ಹಾಗೂ ಪಿಂಚಣಿದಾರರಿಗೆ ಅನುಕೂಲವಾಗಲಿದೆ. ಸರ್ಕಾರವು ವರ್ಷಕ್ಕೆ ಎರಡು ಬಾರಿ ಡಿಎ ಹೆಚ್ಚಳವನ್ನು ಘೋಷಿಸುತ್ತದೆ.

ಸಿಎಸ್‌ಕೆ 10 ರನ್‌ಗಳಿಂದ ಮಣಿಸಿದ ಸನ್‌ರೈಸರ್ಸ್

ಹೈದರಾಬಾದ್, ಏ.18(ವಿವಿಹೆಚ್)– ಸಂಘಟಿತ ಬ್ಯಾಟಿಂಗ್, ಬೌಲಿಂಗ್ ಪ್ರದರ್ಶನದಿಂದ ಪ್ರವಾಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 10 ರನ್‌ಗಳಿಂದ ಮಣಿಸಿದ ಸನ್‌ರೈಸರ್ಸ್ ಹೈದರಾಬಾದ್ ರೋಚಕ ಗೆಲುವು ದಾಖಲಿಸಿತು. ಇತ್ತ ಚೆನ್ನೈ ಟೂರ್ನಿಯಲ್ಲಿ ನಾಲ್ಕನೇ ಸೋಲು ಕಾಣುವ ಮೂಲಕ 180+ ಮೊತ್ತ ಚೇಸ್ ಮಾಡುವಲ್ಲಿ ಮತ್ತೊಮ್ಮೆ ಎಡವಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಐಪಿಎಲ್–2026ರ 27ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಅತಿಥೇಯ ಸನ್‌ರೈಸರ್ಸ್ ಹೈದರಾಬಾದ್ ಅಭಿಷೇಕ್ ಶರ್ಮಾ 22 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಸಹಿತ 59, ಹೆನ್ರಿಚ್ ಕ್ಲಾಸೆನ್ 39 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 59ರನ್ ನೆರವಿನಿಂದ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 184ರನ್ ಗಳಿಸಲಷ್ಟೆ ಶಕ್ತವಾಯಿತು.



ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರರ ಸಂಭ್ರಮ.

ಮೈಸೂರಲ್ಲಿ ಚಿರತೆಯಿಂದ ವೃದ್ಧೆ ಅತ್ತೆ ಪಾರು ಮಾಡಿದ ಸೊಸೆ

ಮುಂದಿನ ವರ್ಷ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡುವ ಭರವಸೆ

ವೃದ್ಧ ಅತ್ತೆ ಕಾಪಾಡಿದ ಸೊಸೆ ಸಾಹಸಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಂಸೆ

ಬೆಂಗಳೂರು: ಮೈಸೂರಿನ ಸಿದ್ದಾರ್ಥ ನಗರದ ಮನೆಯೊಂದರಲ್ಲಿ ಚಿರತೆ ಮಂಚದಡಿ ಅಡಗಿದ್ದ ವೇಳೆ ಪ್ರಾಣದ ಹಂಗು ತೊರೆದು ವೃದ್ಧ ಅತ್ತೆಯನ್ನು ಸುರಕ್ಷಿತವಾಗಿ ಹೊರಗೆ ಕರೆತಂದ ಸೊಸೆ ಸುಜಾತಾ ಅವರ ಸಾಹಸಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಈ ಘಟನೆ ಆಕಸ್ಮಿಕವಾದರೂ, ಅದು ಮಹಿಳೆಯೊಬ್ಬರ ಅಪ್ರತಿಮ ಧೈರ್ಯ ಮತ್ತು ಅತ್ತೆ–ಸೊಸೆಯ ಪವಿತ್ರ ಬಾಂಧವ್ಯಕ್ಕೆ ಹಿಡಿದ ಕೈಗನ್ನಡಿ ಎಂದು ಸಚಿವರು ಬಣ್ಣಿಸಿದ್ದಾರೆ.

ತಮ್ಮ ಮನೆಯ ಮಂಚದಡಿ ಚಿರತೆ ಅಡಗಿರುವುದು ತಿಳಿಯುತ್ತಿದ್ದಂತೆಯೇ, ಪ್ರಾಣದ ಹಂಗು ತೊರೆದು ಕೊಠಡಿಗೆ ನುಗ್ಗಿ, ವಯಸ್ಸಾದ ಅತ್ತೆಯನ್ನು ಅಪ್ಪಿಕೊಂಡು ಸುರಕ್ಷಿತವಾಗಿ ಹೊರಗೆ ಕರೆತಂದ ಸುಜಾತಾ ಅವರ ಸಾಹಸ ನಿಜಕ್ಕೂ ರೋಮಾಂಚನಕಾರಿ. ಸಾಕ್ಷಾತ್ ಮೃತ್ಯುವಿನ ದವಡೆಯಿಂದ ಅತ್ತೆಯನ್ನು ರಕ್ಷಿಸಿದ ಅವರ ಸಮಯಪ್ರಜ್ಞೆ ಇಡೀ ಮಹಿಳಾ ಕುಲಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದಿದ್ದಾರೆ.



ಅತ್ತೆ–ಸೊಸೆಯ ಸಂಬಂಧದ ಬಗ್ಗೆ ಸಮಾಜದಲ್ಲಿರುವ ಹಳೆಯ ಕಲ್ಪನೆಗಳನ್ನು ಅಳಿಸಿ, ಸುಜಾತಾ ಅವರು ಇಂದು ಇಡೀ ರಾಜ್ಯಕ್ಕೆ ಮಾದರಿಯಾಗಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆಯಾಗಿ, ಸುಜಾತಾ ಅವರ ಈ ಅಸಾಧಾರಣ ಶೌರ್ಯವನ್ನು ನಾನು ಮನತುಂಬಿ ಶ್ಲಾಘಿಸುತ್ತೇನೆ. ಅವರ ಈ ಸಾಹಸವನ್ನು ಗೌರವಿಸಲು ಮುಂದಿನ ವರ್ಷದ ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಪ್ರಶಸ್ತಿಗೆ ಅವರ ಹೆಸರನ್ನು ಪರಿಗಣಿಸಲು ನಮ್ಮ ಇಲಾಖೆಗೆ ಈಗಾಗಲೇ ಸೂಚನೆ ನೀಡಿದ್ದೇನೆ ಎಂದರು.

ಧೈರ್ಯವಂತ ಮಹಿಳೆಯರೇ ಈ ನಾಡಿನ ನಿಜವಾದ ಶಕ್ತಿ. ಸುಜಾತಾ ಅವರ ಈ ಶೌರ್ಯದ ಗಾಥೆ ಮನೆ ಮನಗಳಿಗೆ ತಲುಪಲಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಲಮುರಿ, ಎಡಮುರಿಗೆ ಪ್ರವೇಶ ನಿಷಿದ್ಧ

● ಅಮೂಲ್ಯ ಜೀವ ರಕ್ಷಣೆಗೆ ಶ್ರೀರಂಗಪಟ್ಟಣ ತಾಲೂಕು ಆಡಳಿತದಿಂದ ನಿಷೇಧಾಜ್ಞೆ ಜಾರಿ ● 12 ವರ್ಷಗಳಲ್ಲಿ 79 ಅಮೂಲ್ಯ ಜೀವಹಾನಿ ● ಈ ಮಾರ್ಗದ ರಸ್ತೆಗಳು ಬಂದ್; ಪೊಲೀಸರ ಕಾವಲು

ಮೈಸೂರು,ಏ.18(ಎಂಟಿವೈ)– ಜಲ ಸಮಾಧಿ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ಪಿಕ್‌ನಿಕ್ ತಾಣ ಬಲಮುರಿ, ಎಡಮುರಿ ಹಾಗೂ ಕಾವೇರಿ ನದಿ ಪಾತ್ರದಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ ನಿಷೇಧಾಜ್ಞೆ ಹೊರಡಿಸಲಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಶಾಲಾ–ಕಾಲೇಜಿಗೆ ರಜೆ ಇರುವ ಕಾರಣ ಮೈಸೂರು, ಮಂಡ್ಯ, ಬೆಂಗಳೂರು, ಚಾಮರಾಜನಗರ ಸೇರಿದಂತೆ ಹೊರ ರಾಜ್ಯಗಳಿಂದಲೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಸಮೀಪವಿರುವ ಪ್ರವಾಸಿ ತಾಣ ಬಲಮುರಿ, ಎಡಮುರಿಗೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಅಲ್ಲದೆ, ನದಿ ಪಾತ್ರದಲ್ಲಿ ಮದ್ಯಪಾನ ಮಾಡಿ, ಮೋಜು ಮಸ್ತಿ ಮಾಡಲು ಬರುವವರೇ ಹೆಚ್ಚಾಗಿದ್ದು, ಬಳಿಕ ನದಿಯಲ್ಲಿ ಈಜಲು ಹೋಗಿ ಸಾವನ್ನಪ್ಪುವ ಪ್ರಕರಣ ಭಾರೀ ಸಂಖ್ಯೆಯಲ್ಲಿ ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಅಮೂಲ್ಯ ಜೀವ ಉಳಿಸುವ ನಿಟ್ಟಿನಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಕಾರ್ಯನಿರ್ವಾಹಕ ದಂಡಾಧಿಕಾರಿಯೂ ಆಗಿರುವ ತಹಶೀಲ್ದಾರ್ ಚೇತನಾ ಯಾದವ್ ಎಸ್. ಅವರು ಈ ತಾಣಗಳಿಗೆ ಪ್ರವೇಶ ನಿಷೇಧಿಸಿ ಆದೇಶ ಹೊರಡಿಸಿದ್ದು, ಪ್ರವಾಸಿಗರ ಪ್ರಾಣ ಹಾನಿ ತಪ್ಪಿಸಲು, ನದಿ ಪಾತ್ರದಲ್ಲಿ ಮದ್ಯಪಾನ ಮಾಡಿ ಮೋಜು ಮಸ್ತಿ ಮಾಡುವುದನ್ನು ತಡೆಗಟ್ಟಲು ಹಾಗೂ ಪ್ರವಾಸಿಗರೊಂದಿಗೆ ಅನುಚಿತವಾಗಿ ವರ್ತಿಸುವ ಪುಂಡರ ಹಾವಳಿ ನಿಯಂತ್ರಿಸಲು ಏ.16ರ ಬೆಳಗ್ಗೆ 6 ಗಂಟೆಯಿಂದ ಜಾರಿಗೆ ಬರುವಂತೆ, ಮುಂದಿನ ಆದೇಶದವರೆಗೂ ಬಲಮುರಿ, ಎಡಮುರಿ ಹಾಗೂ ನದಿ ಪಾತ್ರದಲ್ಲಿ ಪ್ರವಾಸಿಗರ ಪ್ರವೇಶ ಬಿಎನ್‌ಎಸ್‌ಎಸ್ ಕಲಂ. 163ರ ಅನ್ವಯ ನಿಷೇಧಾಜ್ಞೆ ಹೊರಡಿಸಿರುವುದಾಗಿ ಆದೇಶಿಸಿದ್ದಾರೆ.

ಕೆಆರ್‌ಎಸ್ ಪೊಲೀಸರಿಂದ ಕಣ್ಗಾವಲು: ನೀರಿನಲ್ಲಿ ಮುಳುಗಿ ಯುವಜನ ಬಲಿಯಾಗುತ್ತಿರುವ ಹಿನ್ನೆಲೆಯಲ್ಲಿ ತಹಶೀಲ್ದಾರರು ನಿಷೇಧಾಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಪೊಲೀಸರು ಬಲಮುರಿ, ಎಡಮುರಿ ಪ್ರವೇಶ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ, ಪ್ರವಾಸಿಗರಿಗೆ ನಿಷೇಧಾಜ್ಞೆ ಹೇರಿರುವ ಬಗ್ಗೆ ಮಾಹಿತಿ ನೀಡುವ ಬ್ಯಾನರ್ ಅಳವಡಿಸಿದ್ದಾರೆ. ಅಲ್ಲದೆ, ಪೊಲೀಸ್ ಸಿಬ್ಬಂದಿ ನಿಯೋಜಿಸಿ, ಬರುವ ಪ್ರವಾಸಿಗರನ್ನು ವಾಪಸ್ ಕಳುಹಿಸಲಾಗುತ್ತಿದೆ. ನಿಷೇಧಾಜ್ಞೆ ಆದೇಶ ಉಲ್ಲಂಘಿಸಿ, ಬಲಮುರಿ, ಎಡಮುರಿ ಹಾಗೂ ನದಿ ಪಾತ್ರದಲ್ಲಿ ಮೋಜು ಮಸ್ತಿ ಮಾಡಲು ಹೋಗುವವರ ಮೇಲೆ ಹದ್ದಿನ ಕಣ್ಣಿಡಲಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ.



ಬಲಮುರಿ, ಎಡಮುರಿಗೆ ಪ್ರವಾಸಿಗರ ಪ್ರವೇಶ ನಿಷೇಧಿಸಿರುವುದರಿಂದ ಈ ಮಾರ್ಗದ ರಸ್ತೆಗೆ ಬ್ಯಾರಿಕೇಡ್ ಅಳವಡಿಸಿರುವುದು.

ಎಚ್ಚರಿಕೆಯನ್ನು ಧಿಕ್ಕರಿಸಿದವರು: ಬಲಮುರಿ, ಎಡಮುರಿ ಫಾಲ್ಸ್ ಪಿಕ್‌ನಿಕ್ ಸ್ಪಾಟ್ ಆಗಿದ್ದು, ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಅದರಲ್ಲೂ ವಾರಾಂತ್ಯದಲ್ಲಿ ಮತ್ತು ರಜೆ ದಿನಗಳಲ್ಲಿ ಈ ಪ್ರವಾಸಿ ತಾಣಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಇದರ ನಡುವೆ ಬಲಮುರಿ, ಎಡಮುರಿಯಲ್ಲಿ ಈಜುವ ವೇಳೆ ಸುಳಿಗೆ ಸಿಲುಕಿ ನೀರಿನಲ್ಲಿ ಮುಳುಗಿ ದುರಂತ ಸಾವಿಗೀಡಾಗುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ. 'ಸುಳಿಯಿದೆ ಎಚ್ಚರಿಕೆ, ನೀರಿನ ಸೆಳೆತವಿದೆ ಎಚ್ಚರಿಕೆ' ಹೀಗೆ ಅಪಾಯವಿರುವ ಸ್ಥಳದ ಬಗ್ಗೆ ಎಚ್ಚರಿಕೆ ಫಲಕ ಅಳವಡಿಸಿ, ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದರೂ, ಕೆಲವರು ಎಚ್ಚರಿಕೆ ಸಂದೇಶವನ್ನು ಗಾಳಿಗೆ ತೂರಿ ದುಸ್ಸಾಹಸ ಮಾಡಲು ಹೋಗಿ ಉಸಿರು ಚೆಲ್ಲುತ್ತಿದ್ದಾರೆ. ಹೀಗೆ ಅಮಾಯಕರು ಬಲಿಯಾಗುತ್ತಿರುವುದರಿಂದ ಸ್ಥಳೀಯರು ದುಗುಡ ವ್ಯಕ್ತಪಡಿಸಿದ್ದರಿಂದ ಇದೀಗ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

12 ವರ್ಷಗಳಲ್ಲಿ 79 ಸಾವು: ಬಲಮುರಿ, ಎಡಮುರಿಯಲ್ಲಿ ಕಳೆದ 12 ವರ್ಷಗಳಲ್ಲಿ ನೀರಿನಲ್ಲಿ ಆಕಸ್ಮಿಕವಾಗಿ ಮುಳುಗಿ ಸಾವನ್ನಪ್ಪಿರುವ 79 ಪ್ರಕರಣಗಳು ಕೆಆರ್‌ಎಸ್ ಠಾಣೆಯಲ್ಲಿ ವರದಿಯಾಗಿವೆ. 2015ರಲ್ಲಿ 8 ಮಂದಿ, 2016ರಲ್ಲಿ 4, 2017ರಲ್ಲಿ 9, 2018ರಲ್ಲಿ 1, 2019ರಲ್ಲಿ 12 ಮಂದಿ, 2020ರಲ್ಲಿ 4, 2021ರಲ್ಲಿ 3, 2022ರಲ್ಲಿ 2, 2023ರಲ್ಲಿ 8, 2024ರಲ್ಲಿ 13, 2025ರಲ್ಲಿ 11, 2026ರ ಜನವರಿಯಿಂದ ಮಾರ್ಚ್‌ವರೆಗೆ 3, ಕಳೆದ ವಾರ ಒಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತಪಟ್ಟ 79 ಮಂದಿಯಲ್ಲಿ ಬಹುತೇಕ ಯುವಕರು, ವಿದ್ಯಾರ್ಥಿಗಳೇ ಆಗಿದ್ದು, ಅವರ ಕುಟುಂಬಕ್ಕೆ ಅಪಾರ ನಷ್ಟವುಂಟಾಗಿದೆ. ಕೆಲವರು ಪೋಷಕರಿಗೆ ಏಕೈಕ ಮಕ್ಕಳಾಗಿದ್ದು, ಈ ಹಿನ್ನೆಲೆಯಲ್ಲಿ ಮುಂದೆ ಸಂಭವಿಸಬಹುದಾದ ಸಾವಿನ ಗಂಡಾಂತರಕ್ಕೆ ಕಡಿವಾಣ ಹಾಕಲು ತಹಶೀಲ್ದಾರ್ ಚೇತನಾ ಯಾದವ್ ಎಸ್. ಅವರು ಪ್ರವಾಸಿಗರಿಗೆ ನಿಷೇಧ ಹೇರಿ ಆದೇಶಿಸಿರುವುದು ಪ್ರಶಂಸೆಗೆ ಪಾತ್ರವಾಗಿದೆ.

ಪ್ರವಾಸಿಗರಿಗೆ ನಿರಾಸೆ: ಪ್ರತಿ ವರ್ಷ ಬೇಸಿಗೆ ವೇಳೆ ಅದರಲ್ಲೂ ಶಾಲಾ–ಕಾಲೇಜಿಗೆ ರಜೆ ಘೋಷಣೆಯಾಗುತ್ತಿದ್ದಂತೆ ಬಲಮುರಿ, ಎಡಮುರಿ ಪ್ರವಾಸಿ ತಾಣ ಪ್ರವಾಸಿಗರಿಂದ ಕಿಕ್ಕಿರಿದು ತುಂಬಿರುತ್ತಿತ್ತು. ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಈ ಎರಡೂ ತಾಣಗಳಿಗೆ ಲಗ್ಗೆಯಿಡುತ್ತಿದ್ದರು. ಆದರೆ, ಇದೀಗ ಪ್ರವಾಸಿಗರಿಗೆ ಪ್ರವೇಶ ನಿಷೇಧಿಸಿರುವುದರಿಂದ ಪ್ರವಾಸಿಗರಿಗೆ ನಿರಾಸೆಯುಂಟಾಗಿದೆ. ನಿಷೇಧದ ಮಾಹಿತಿ ಇಲ್ಲದೆ, ಹೊರ ರಾಜ್ಯ, ಜಿಲ್ಲೆಗಳಿಂದ ಬಲಮುರಿ, ಎಡಮುರಿಗೆ ಬರುತ್ತಿರುವ ಪ್ರವಾಸಿಗರನ್ನು ದಾರಿ ಮಧ್ಯದಲ್ಲಿಯೇ ಪೊಲೀಸರು ತಡೆದು ವಾಪಸ್ ಕಳುಹಿಸುತ್ತಿದ್ದಾರೆ. ಕೆಆರ್‌ಎಸ್ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್ ಇನ್ಸ್‌ಪೆಕ್ಟರ್ ರಮೇಶ್ ಕರ್ಕಿಕಟ್ಟಿ ನೇತೃತ್ವದ ಸಿಬ್ಬಂದಿ ಪ್ರವಾಸಿಗರಿಗೆ ಪರಿಸ್ಥಿತಿ ಮನವರಿಕೆ ಮಾಡಿ ಕೊಡುತ್ತಿದ್ದಾರೆ.

ಆದಾಯದ ತಾಣವಾದರೂ ಸುರಕ್ಷತೆಯಿಲ್ಲ: ಬಲಮುರಿ, ಎಡಮುರಿ ಪ್ರವಾಸಿ ತಾಣ ಆದಾಯದ ತಾಣವಾಗಿದೆ. ಒಂದೆಡೆ ಪಿಕ್‌ನಿಕ್ ತಾಣವಾಗಿದ್ದರೆ, ನದಿ ದಡದಲ್ಲಿ ದೇವಾಲಯಗಳು ಆಧ್ಯಾತ್ಮಿಕ ತಾಣಗಳೂ ಇವೆ. ಶ್ರೀ ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿಯನ್ನು ರಚಿಸಿಕೊಂಡು, ಪ್ರವಾಸಿಗರ ವಾಹನ ಪಾರ್ಕಿಂಗ್, ತೆಪ್ಪ, ಮೀನು ಹಿಡಿಯುವುದು ಸೇರಿದಂತೆ ವಿವಿಧ ಟೆಂಡರ್ ನೀಡಲಾಗುತ್ತಿದೆ.

ಆದಾಯದ ತಾಣವಾದರೂ ಸುರಕ್ಷತೆಯಿಲ್ಲ: ಬಲಮುರಿ, ಎಡಮುರಿ ಪ್ರವಾಸಿ ತಾಣಗಳ ಆದಾಯದ ತಾಣವಾಗಿವೆ. ಒಂದೆಡೆ ಪಿಕ್‌ನಿಕ್ ತಾಣವಾಗಿದ್ದರೆ, ನದಿ ದಡದಲ್ಲಿರುವ ದೇವಾಲಯಗಳು ಆಧ್ಯಾತ್ಮಿಕ ತಾಣವೂ ಆಗಿದೆ. ಶ್ರೀ ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿಯನ್ನು ರಚಿಸಿಕೊಂಡು, ಪ್ರವಾಸಿಗರ ವಾಹನ ಪಾರ್ಕಿಂಗ್, ತೆಪ್ಪ, ಮೀನು ಹಿಡಿಯುವುದು ಸೇರಿದಂತೆ ವಿವಿಧ ಟೆಂಡರ್ ನೀಡಲಾಗುತ್ತಿದೆ. ಗುತ್ತಿಗೆ ಮೊತ್ತವೇ ವಾರ್ಷಿಕ 40–45 ಲಕ್ಷ ರೂ. ಆದಾಯ ತಂದು ಕೊಡುತ್ತಿದ್ದರೆ, ಟೆಂಡರ್ ಪಡೆದವರು ಇನ್ನಷ್ಟು ಲಾಭ ಗಳಿಸುತ್ತಿದ್ದಾರೆ. ಆದರೂ, ಪ್ರವಾಸಿಗರ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆಕಸ್ಮಿಕವಾಗಿ ನೀರಿನಲ್ಲಿ ಮುಳುಗುವವರ ರಕ್ಷಣೆಗೆ ಸ್ಥಳೀಯರು ಧಾವಿಸಿರುವ ನಿದರ್ಶನಗಳಿವೆ. ಆದರೆ, ತುರ್ತಾಗಿ ರಕ್ಷಣೆಗೆ ಯಾವುದೇ ಸಲಕರಣೆಯಾಗಲೀ, ಪ್ರಾಥಮಿಕ ಚಿಕಿತ್ಸೆ ನೀಡುವ ವ್ಯವಸ್ಥೆಯಾಗಲೀ ಅಲ್ಲಿ ಇಲ್ಲ. ಟೆಂಡರ್ ಪಡೆದಿರುವವರಾಗಲೀ ಅಥವಾ ದೇವಾಲಯಗಳ ಅಭಿವೃದ್ಧಿ ಸಮಿತಿಯಾಗಲೀ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಇತ್ತ ಗಮನಹರಿಸಿ, ಬಲಮುರಿ, ಎಡಮುರಿಗೆ ಬರುವ ಪ್ರವಾಸಿಗರ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ಕೇವಲ ಪ್ರವಾಸಿಗರ ನಿಷೇಧ ಆದೇಶ ಎಲ್ಲದಕ್ಕೂ ಪರಿಹಾರವಲ್ಲ. ಶಾಶ್ವತವಾಗಿ ಪ್ರವಾಸಿಗರ ರಕ್ಷಣೆಗೆ ಕ್ರಮ ಕೈಗೊಳ್ಳುವಂತಾಗಬೇಕು. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ವ್ಯಾಪಾರಿಗಳಿಗೆ ತೊಂದರೆ: ಬಲಮುರಿ, ಎಡಮುರಿಗೆ ಬರುವ ಪ್ರವಾಸಿಗರನ್ನೇ ನೆಚ್ಚಿಕೊಂಡಿದ್ದ ವ್ಯಾಪಾರಿಗಳಿಗೆ ಇದೀಗ ಪ್ರವಾಸಿಗರ ನಿಷೇಧದಿಂದ ತೊಂದರೆಯಾಗಿದೆ ಅಲ್ಲಿನ ಫಾಸ್ಟ್‌ಫುಡ್, ಚುರುಮುರಿ, ತಿಂಡಿ, ಪಾನೀಯ, ಹಣ್ಣು ಮಾರಾಟ ಮಾಡುವ ವ್ಯಾಪಾರಿಗಳು ಸಂಕಷ್ಟಕ್ಕೀಡಾಗಿದ್ದಾರೆ.

ಪ್ರವಾಸಿಗರಿಗೆ ನಿರಾಸೆ

ಪ್ರತಿ ವರ್ಷ ಬೇಸಿಗೆ ವೇಳೆ ಅದರಲ್ಲೂ ಶಾಲಾ–ಕಾಲೇಜಿಗೆ ರಜೆ ಘೋಷಣೆಯಾಗುತ್ತಿದ್ದಂತೆ ಬಲಮುರಿ, ಎಡಮುರಿ ಪ್ರವಾಸಿ ತಾಣ ಪ್ರವಾಸಿಗರಿಂದ ಕಿಕ್ಕಿರಿದು ತುಂಬಿರುತ್ತಿತ್ತು. ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಲಮುರಿ, ಎಡಮುರಿಗೆ ಬಂದು ಹೋಗುತ್ತಿದ್ದರು. ಆದರೆ, ಇದೀಗ ಪ್ರವಾಸಿಗರಿಗೆ ಪ್ರವೇಶ ನಿಷೇಧಿಸಿರುವುದರಿಂದ ಬೇಸಿಗೆ ಬೇಗೆಯಿಂದಾಗಿ ನೀರಲ್ಲಿ ಆಟ ಆಡಲು ಬರಲು ಉದ್ದೇಶಿಸಿದ್ದ ಪ್ರವಾಸಿಗರಿಗೆ ನಿರಾಸೆಯುಂಟಾಗಿದೆ. ನಿಷೇಧದ ಮಾಹಿತಿ ಇಲ್ಲದೆ, ಬೇರೆ ಬೇರೆ ಜಿಲ್ಲೆಗಳಿಂದ ಬಲಮುರಿ, ಎಡಮುರಿಗೆ ಬರುತ್ತಿರುವ ಪ್ರವಾಸಿಗರನ್ನು ದಾರಿ ಮಧ್ಯದಲ್ಲಿಯೇ ಪೊಲೀಸರು ತಡೆದು ವಾಪಸ್ ಕಳುಹಿಸುತ್ತಿದ್ದಾರೆ. ಕೆಆರ್‌ಎಸ್ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್ ಇನ್ಸ್‌ಪೆಕ್ಟರ್ ರಮೇಶ್ ಕರ್ಕಿಕಟ್ಟಿ ನೇತೃತ್ವದಲ್ಲಿ ಸಿಬ್ಬಂದಿ ಪ್ರವಾಸಿಗರಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ.

ಆಶ್ರಯ ನಿವೇಶನ ಜಾಗ ಬೇರೆಯವರಿಗೆ ಮಾರಾಟ!

ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಆರೋಪ



ಮೈಸೂರು,ಏ.18(ಜಿಎ)–ಆಶ್ರಯ ನಿವೇಶನದ ಜಾಗವನ್ನು ಅಕ್ರಮವಾಗಿ ಬೇರೆಯವರಿಗೆ ನಗರ ಪಾಲಿಕೆ ಅಧಿಕಾರಿಗಳು ಬರೆದುಕೊಟ್ಟಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಆರೋಪಿಸಿದರು. ಮೈಸೂರು ತಾಲೂಕು ಕಸಬಾ ಹೋಬಳಿಯ ರಮ್ಮನಹಳ್ಳಿ ಗ್ರಾಮದಲ್ಲಿ ಆಶ್ರಯ ನಿವೇಶನ ಹಂಚಲು ಖರೀದಿ ಮಾಡಿದ ಜಮೀನಿಗೆ ಸಂಬಂಧಿಸಿದ ವ್ಯಾಜ್ಯದ ಆದೇಶ ಬಳಿಕ ನ್ಯಾಯಾಲಯ ತಿಳಿಸಿದ 10 ಗುಂಟೆ ಜೊತೆಗೆ, ಇನ್ನಿತರ 20 ಗುಂಟೆ ಜಾಗವನ್ನೂ ಅಕ್ರಮವಾಗಿ ಇತರರಿಗೆ ಮೈಸೂರು ನಗರಪಾಲಿಕೆ ಅಧಿಕಾರಿಗಳು ಬರೆದುಕೊಡುವ ಮೂಲಕ ಅಕ್ರಮ ಎಸಗಿದ್ದಾರೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ ದೂರಿದರು.

ಸರ್ಕಾರ 2003ರಿಂದ 2005ರವರೆಗೆ ಬಡವರಿಗೆ ನಿವೇಶನ ಹಂಚಿಕೆ ಮಾಡಲು ಸಾಕಷ್ಟು ನಿವೇಶನ ಖರೀದಿಸಲಾಗಿತ್ತು. ಅವುಗಳಲ್ಲಿ ರಮ್ಮನ ಹಳ್ಳಿ ಗ್ರಾಮದ ಸರ್ವೆ ನಂ.259/3 ಸಹಾ ಸೇರಿದೆ. 2005 ಮಾ.19 ರಂದು ಕ್ರಯಪತ್ರ ಸಹಾ ನೋಂದಣಿ ಆಗಿದೆ. ಈ ನಂತರ ಜಮೀನು ಮಾರಾಟ ಮಾಡಿದ್ದ ಕೆಂಚಯ್ಯ ಎಂಬುವರ ಪುತ್ರಿ ಸುಂದ್ರಮ್ಮ ತಮಗೂ ಭಾಗ ಬರಬೇಕಾಗಿತ್ತೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ, ಅವರಿಗೆ 10 ಗುಂಟೆ ಜಮೀನು ನೀಡುವಂತೆ ಸೂಚಿಸಲಾಗಿತ್ತು. ಇದರಿಂದಾಗಿ ಸರ್ಕಾರಕ್ಕೆ ಬಾಕಿ 20 ಗುಂಟೆ ವಾಪಸಾಗಿದೆ ಎಂದು ವಿವರಿಸಿದರು.

ನಂತರ ಈ ವಿಷಯ ಮುಚ್ಚಿಟ್ಟು ಉಳಿಕೆ 20 ಗುಂಟೆ ಜಮೀನು ಕೆಂಚಯ್ಯನವರಿಗೆ ಸೇರಿದೆ ಎಂದು ಸುಳ್ಳು ನಕ್ಷೆ ಮಾಡಲಾಗಿದ್ದು, ಆ ಜಮೀನನ್ನು ಸಹಾ ಚೌಡಮ್ಮ ಹಾಗೂ ಅವರ ಮಕ್ಕಳು ಸೈಯ್ಯದ್ ಫೈಸಲ್ ಎಂಬುವವರಿಗೆ ಸಾಮಾನ್ಯ ಅಧಿಕಾರ ಪತ್ರ ನೀಡಿದ್ದಾರೆ. ಇವರು ಇನ್ನಿಬ್ಬರಿಗೆ ಮಾರಾಟ ಮಾಡಿದ್ದಾರೆ. ಈ ರೀತಿ ಪಾಲಿಕೆ ಖರೀದಿಸಿದ ಜಾಗವನ್ನು ರಕ್ಷಿಸುವಲ್ಲಿ ಪಾಲಿಕೆ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಕುರಿತು ಕ್ರಮ ಕೈಗೊಳ್ಳುವಂತೆ ತಾವು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರರಾದ ಅರವಿಂದ್ ಶರ್ಮಾ, ಸಾಮಾಜಿಕ ಹೋರಾಟಗಾರರು ಹಾಗೂ ಆಡಿಟರ್ ಆದ ಸುರೇಶ್ ರಮ್ಮನಹಳ್ಳಿ ಉಪಸ್ಥಿತರಿದ್ದರು.

ಡೆಲ್ಲಿಗೆ ಶರಣಾದ ಆರ್‌ಸಿಬಿ

ಬೆಂಗಳೂರು, ಏ.18(ವಿವಿಹೆಚ್)– ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಲೀಗ್ ಹಂತದ 26ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ 6 ವಿಕೆಟ್‌ಗಳ ಗೆಲುವನ್ನು ದಾಖಲಿಸಿದೆ.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫಿಲ್ ಸಾಲ್ಟ್ ಅರ್ಧಶತಕದ ನೆರವಿನಿಂದ 8 ವಿಕೆಟ್ ನಷ್ಟಕ್ಕೆ 175 ರನ್ ಕಲೆಹಾಕಿ ಡೆಲ್ಲಿ ಕ್ಯಾಪಿಟಲ್ಸ್‌ಗೆ 176 ರನ್‌ಗಳ ಗೆಲುವಿನ ಗುರಿಯನ್ನು ನೀಡಿತು. ಈ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ಕ್ಯಾಪಿಟಲ್ಸ್ ಕೆಎಲ್ ರಾಹುಲ್ 57, ಟ್ರಿಸ್ಟನ್ ಸ್ಟಬ್ಸ್ ಅಜೇಯ 60 ಹಾಗೂ ಮಿಲ್ಲರ್ ಸ್ಫೋಟಕ 20 ರನ್‌ಗಳ ನೆರವಿನಿಂದ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 179 ರನ್ ಕಲೆಹಾಕಿತು. ಡೆಲ್ಲಿ ಕ್ಯಾಪಿಟಲ್ಸ್ ಗೆಲುವಿಗೆ ಪ್ರಮುಖ ಪಾತ್ರವಹಿಸಿದ ಟ್ರಿಸ್ಟನ್ ಸ್ಟಬ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ಡಾ. ಎಂ.ಡಿ.ನಿಸರ್ಗ 7ನೇ ರ್‍ಯಾಂಕ್



ಮೈಸೂರು, ಏ.18(ಜಿಎ)–ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾನಿಲಯದಿಂದ ನಡೆದ 2025ನೇ ಸಾಲಿನ ನಡೆದ ಮಡಿಸನ್‌ನಲ್ಲಿ ಸ್ನಾತಕೋತ್ತರ ಪದವಿಯ ರೋಗಶಾಸ್ತ್ರ ಪರೀಕ್ಷೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡಾ.ಎಂ.ಡಿ.ನಿಸರ್ಗ 800 ಅಂಕಗಳಿಗೆ 561 ಅಂಕ ಪಡೆದುಕೊಂಡು 7ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.